ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಸಂಪುಟ 14 | ಸಂಚಿಕೆ 18 | ಏಪ್ರಿಲ್ 27–ಮೇ 03, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com

ಭೀಕರ ಆರ್ಥಿಕ ಪರಿಸ್ಥಿತಿ ಮುಂದೇನು?







ಮುನ್ನೆಲೆಗೆ ಬಂದ ಹತ್ತು ಪ್ರಶ್ನೆಗಳು





ಭಾಷಣ ಸಾಕು ರೇಷನ್ ಬೇಕು ಸಂಬಳ ಬೇಕು

ಕಾಶ್ಮೀರ: ಎರಡು ಪ್ಲೇಗುಗಳ ಕಾಟ

ಕರೋನಾ ಪಾಠ : ''ನಾನು ಚೆನ್ನಾಗಿರಲು, ನೆರೆಮನೆಯವನೂ ಚೆನ್ನಾಗಿರಬೇಕು''

ಕೋಮುವಾದಿ ದ್ವೇಷಪ್ರಚಾರ ನಡೆಸುತ್ತಿರುವವರಿಗೆ ಕಠಿಣ ಶಿಕ್ಷೆಯಾಗಬೇಕು

ಈ ಕ್ರಿಮಿನಲ್‌ಗಳನ್ನು ಶಿಕ್ಷಿಸಲು ಕಾನೂನನ್ನು ಕಟ್ಟುನಿಟ್ಟಾಗಿ ಬಳಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೊವಿಡ್–19 ಮಹಾಮಾರಿಯ ವಿರುದ್ಧ ಸಮರದಲ್ಲಿ ಭಾರತದ ಅತಿ ದೊಡ್ಡ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಮರನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಕೋಮುವಾದಿ ದಾಳಿಗಳಿಗೆ ಗುರಿಪಡಿಸಲಾಗುತ್ತಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಹೊಲಸು ಬೈಗುಳಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟಿಂಗ್‌ಗಳನ್ನು ಆಳುವ ಪಕ್ಷದ ಬೆಂಬಲಿಗ ಬಾಲ(ಟ್ರಾಲ್)ಗಳು ತಮ್ಮ ಕರ್ತವ್ಯವೆಂಬಂತೆ ಪಸರಿಸುತ್ತಿವೆ. ಇದನ್ನು ಒಪ್ಪಲು ಖಂಡಿತಾ ಸಾಧ್ಯವಿಲ್ಲ. ಅವರು ಸಂವಿಧಾನಿಕ ಮೂಲಾಂಶಗಳನ್ನೇ ಉಲ್ಲಂಘಿಸುತ್ತಿದ್ದಾರೆ. ಇಂತಹ ಅಪರಾಧಗಳ ವಿರುದ್ಧ ಕ್ರಮಕೈಗೊಳ್ಳಬೇಕು, ಕಾನೂನಿನ ಪ್ರಕಾರ ಶಿಕ್ಷಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ಕೇಂದ್ರದಲ್ಲಿನ ಆಳುವ ಪಕ್ಷದ ಕೃಪಾಪೋಷಣೆಯ ಅಡಿಯಲ್ಲಿ ನಡೆಯುತ್ತಿರುವ ಈ ಕೋಮುವಾದಿ ದ್ವೇಷ ಪ್ರಚಾರ ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ಬದುಕುತ್ತಿರುವ ಲಕ್ಷಾಂತರ ಭಾರತೀಯರ ಜೀವನೋಪಾಯಗಳನ್ನು ಅಪಾಯಕ್ಕೆ ಸಿಲುಕಿಸುತ್ತಿದೆ. ಕಳೆದ ವರ್ಷ, 2019ರಲ್ಲಿಯೇ, ಕೊಲ್ಲಿ ಪ್ರದೇಶದ ಮತ್ತು ಪಶ್ಚಿಮ ಏಶ್ಯಾದ ದೇಶಗಳಿಗೆ ಉತ್ತರಪ್ರದೇಶ, ಬಿಹಾರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಲದಿಂದ ಸುಮಾರು 3 ಲಕ್ಷ ಭಾರತೀಯರು ಅಲ್ಲೆಲ್ಲ ಈಗಾಗಲೇ ಇರುವ ಲಕ್ಷಾಂತರ ಭಾರತೀಯರ ಜತೆಗೂಡಿದ್ದಾರೆ. ಇಂದು ಜಗತ್ತಿನಲ್ಲಿ ಭಾರತೀಯ ಮೂಲದ ವಲಸಿಗರದ್ದೇ ಅತಿ ದೊಡ್ಡ ಸಂಖ್ಯೆ–ಸುಮಾರು 1.75 ಕೋಟಿ.

ಕೇಂದ್ರ ಸರಕಾರ ತಕ್ಷಣವೇ 'ಅನಾಹುತ ನಿರ್ವಹಣೆ ಕಾಯ್ದೆ'(ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಆಕ್ಟ್)ಯ ಅಂಶಗಳನ್ನು ಬಳಸಿ, ರಾಜಕೀಯ ಮುಖಂಡರು ಮತ್ತು ಉನ್ನತ ಹುದ್ದೆಗಳಲ್ಲಿ ಇರುವ ಇತರರೂ ಸೇರಿದಂತೆ ವಿಷಪೂರ್ಣ ಕೋಮುವಾದಿ ದ್ವೇಷವನ್ನು ಹರಡಿಸಿ ಮಹಾಮಾರಿಯ ವಿರುದ್ಧ ಎಲ್ಲ ಭಾರತೀಯರ ಐಕ್ಯ ಹೋರಾಟವನ್ನು ಛಿದ್ರಗೊಳಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಬಿಜೆಪಿ ಕೇಂದ್ರ ಸರಕಾರ ಎಲ್ಲ ಭಾರತೀಯರ ಬದುಕಿನ ಮತ್ತು ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುವುದಿಲ್ಲ ಎಂಬುದನ್ನು ಧರ್ಮ, ಜಾತಿ, ಲಿಂಗ ಅಥವ ವಿಕಲತೆಯ ಭೇಧಭಾವವಿಲ್ಲದೆ ಖಾತ್ರಿಪಡಿಸಬೇಕು ಎಂದು ಒತ್ತಿ ಹೇಳಿದೆ.

ಇಂತಹ ಜನಗಳ ವಿರುದ್ಧ ಕ್ರಮಕೈಗೊಳ್ಳುವ ಬದಲು, ಕಾನೂನು ಅಲ್ಪಸಂಖ್ಯಾತರನ್ನೇ ಗುರಿಮಾಡಿ ಅವರ ವಿರುದ್ಧವೇ ಕ್ರಮ ಕೈಗೊಳ್ಳುತ್ತಿರುವಂತೆ ಕಾಣುತ್ತಿದೆ. ಇಂತಹ ದ್ವೇಷದ ವಿರುದ್ಧ ಮಾತನಾಡುವ ಪತ್ರಕರ್ತರು ಮತ್ತು ಕಾರ್ಯಕರ್ತರಿಗೆ ಕಿರುಕುಳ ಕೊಡಲಾಗುತ್ತಿದೆ, ಅವರನ್ನು ದಂಡಿಸಲಾಗುತ್ತಿದೆ, ಶಿಕ್ಷಿಸಲಾಗುತ್ತಿದ್ದರೆ, ಇನ್ನೊಂದೆಡೆಯಲ್ಲಿ ಸರಕಾರದ ಸಾಕುನಾಯಿಗಳಂತಿರುವ ಮಾಧ್ಯಮ ಗುಂಪುಗಳು ಇಂತಹ ವಿಷಭರಿತ ಪ್ರಚಾರಗಳ ಗಿಳಿಪಾಠಗಳನ್ನು ಮುಂದುವರಿಸುತ್ತಿವೆ. ಇದು ಸ್ವೀಕಾರಾರ್ಹವಲ್ಲ.

ಇಂತಹ ಕ್ರಿಮಿನಲ್‌ಗಳನ್ನು ಶಿಕ್ಷಿಸಲು ಕಾನೂನನ್ನು ಕಟ್ಟುನಿಟ್ಟಾಗಿ ಬಳಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಒತ್ತಾಯಿಸಿದೆ.

ಮನೋರಮ ಪತ್ರಿಕೆ ಸುಳ್ಳು ಸುದ್ದಿ ಹರಡಿಸುತ್ತಿದೆ

'ಮಲಯಾಳ ಮನೋರಮ' ಪತ್ರಿಕೆಯ ಎಪ್ರಿಲ್ 20ರ ಮುಖಪುಟದ ಸ್ಟೋರಿಯಲ್ಲಿ ಸಿಪಿಐ(ಎಂ)ನ ಕೇಂದ್ರೀಯ ಮುಖಂಡತ್ವ ಸ್ಪ್ರಿಂಕ್ಲರ್ ಪ್ರಶ್ನೆ ಕುರಿತಂತೆ ಕೇರಳದ ಪಕ್ಷ ಕೊಟ್ಟಿರುವ ವಿವರಣೆಯನ್ನು ತಿರಸ್ಕರಿಸಿದೆ ಎಂದು ಹೇಳಲಾಗಿದೆ. ಇದು ಸುಳ್ಳು ಮತ್ತು ಆಧಾರಹೀನ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಒಂದು ಹೆಸರಾಂತ ದೈನಿಕ ಸುಳ್ಳು ಸುದ್ದಿಯನ್ನು ಹರಡಿಸುತ್ತಿರುವುದು ದುರದೃಷ್ಟಕರ ಎಂದು ಅದು ಖೇದ ವ್ಯಕ್ತಪಡಿಸಿದೆ.

ಕೇರಳ ಎಲ್.ಡಿ.ಎಫ್. ಸರಕಾರ ಕೊವಿಡ್–19ರ ವಿರುದ್ಧ ಹೋರಾಟದಲ್ಲಿ ಮಾದರಿಯಾಗಿರುವ ಪಾತ್ರವನ್ನು ವಹಿಸುತ್ತಿರುವಾಗ, ಜತೆಗೆ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಿಗೆ, ಅತಿಥಿ ಕಾರ್ಮಿಕರಿಗೂ, ಸುರಕ್ಷೆ ಮತ್ತು ನೆರವು ಒದಗಿಸುತ್ತಿರುವಾಗ, ಇಂತಹ ಒಂದು ಸುಳ್ಳು ಕತೆಯ ಉದ್ದೇಶ ಕೇರಳದ ಸರಕಾರ ಮತ್ತು ಜನತೆ ಈ ಮಹಾಮಾರಿಯ ವಿರುದ್ಧ ಹೋರಾಟದಲ್ಲಿ ಮಾಡಿರುವ ಅತ್ಯುತ್ತಮ ಕೆಲಸವನ್ನು ಹೀಗಳೆಯುವುದೇ ಆಗಿದೆ.

ಇಂತಹ ಸುಳ್ಳೇ ಸೃಷ್ಟಿಸಿದ ವರದಿಗಳಿಗೆ ಕೇರಳದ ಜನತೆ ಯಾವುದೇ ಗಮನ ಕೊಡುವುದಿಲ್ಲ ಎಂಬ ವಿಶ್ವಾಸವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೊ ವ್ಯಕ್ತಪಡಿಸಿದೆ.

ಹೆಚ್ಚುವರಿ ಆಹಾರಧಾನ್ಯಗಳ ದಾಸ್ತಾನಿರುವಾಗ, ಕೋಟ್ಯಂತರ ಕುಟುಂಬಗಳು ಉಪವಾಸ ಬೀಳುತ್ತಿರುವಾಗ ಉಚಿತವಾಗಿ ರೇಷನ್‌ನಲ್ಲಿ ಹಂಚುವುದು ಸರಕಾರದ ಹೊಣೆ–ಆಹಾರ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ


ಮೋದಿ ಸರಕಾರದ ಆಹಾರ ಮತ್ತು ಸಾರ್ವಜನಿಕ ವಿತರಣೆಯ ಮಂತ್ರಿ ರಾಮ್ ವಿಲಾಸ್ ಪಾಸ್ವಾನ್ ಗೋಧಿಗೆ ಕೆ.ಜಿ.ಗೆ 21.50 ರೂ. ಮತ್ತು ಅಕ್ಕಿಗೆ 22.50ರೂ. ನಿಗದಿ ಮಾಡಿದ್ದು, ರಾಜ್ಯಗಳು ರೇಷನ್ ಫಲಾನುಭವಿಗಳನ್ನು ಹೆಚ್ಚಿಸದಂತೆ ಕೇಂದ್ರವೇನೂ ಅಡ್ಡಿಪಡಿಸಿಲ್ಲ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದರು. ಅವರ ಇಲಾಖೆ ಪರಿಹಾರ ಕಾರ್ಯಗಳಲ್ಲಿ ತೊಡಗಿರುವ ಎನ್.ಜಿ.ಒ.(ಸರ್ಕಾರೇತರ ಸಂಘಟನೆ)ಗಳು ಕೂಡ ಭಾರತ ಆಹಾರ ನಿಗಮ(ಎಫ್.ಸಿ.ಐ)ದ ಗೋದಾಮುಗಳಿಂದ ನೇರವಾಗಿ ಇ–ಹರಾಜು ಇಲ್ಲದೆ ಆಹಾರಧಾನ್ಯಗಳನ್ನು ಒಂದು ಮೀಸಲು ಬೆಲೆಗೆ ಪಡೆಯಬಹುದು ಎಂದು ಹೇಳಿತ್ತು. ಆದರೆ ಇದನ್ನು ಕುರಿತ ಪ್ರೆಸ್ ಇನ್ಫೋರ್ಮೇಶನ್ ಬ್ಯುರೊ(ಪಿಐಬಿ) ಪ್ರಕಟಣೆ ಈ ಬೆಲೆಯನ್ನು ಹೇಳಿರಲಿಲ್ಲ.

ಈ ಕುರಿತು ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಅವರು ರಾಮ್ ವಿಲಾಸ್ ಪಾಸ್ವಾನ್‌ರಿಗೆ ಪತ್ರ ಬರೆದು ಲಾಕ್ ಡೌನಿನ ಹೊರೆ ಭಾರತದ ಶ್ರಮಜೀವಿ ವರ್ಗಗಳ ಮೇಲೆಯೇ ಹೆಚ್ಚಾಗಿ ಬಿದ್ದಿದೆ. ಸರಕಾರದ ಧೋರಣೆಯನ್ನು ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾಗಿ ಬದಲಿಸಬೇಕು, ರೇಷನ್ ವ್ಯವಸ್ಥೆಯ ಮೂಲಕ ಅದನ್ನು ಉಚಿತವಾಗಿ ಹಂಚಬೇಕು ಎಂದು ಆಗ್ರಹಿಸಿದ್ದಾರೆ.

ಸರಕಾರ ಪ್ರಕಟಿಸಿರುವ ಮೀಸಲು ಬೆಲೆ ಬಹಿರಂಗ ಮಾರುಕಟ್ಟೆಯಲ್ಲಿರುವ ಗೋಧಿ ಬೆಲೆಗಳಿಗಿಂತಲೂ ಹೆಚ್ಚಿದೆ ಎಂಬುದನ್ನು ಇಲಾಖೆಯ ವೆಬ್ ತಾಣದಲ್ಲೇ ಲಭ್ಯವಿರುವ ಸಗಟು ಬೆಲೆಗಳ ಮಾಹಿತಿಯಲ್ಲೇ ಕಾಣಬಹುದು. ಸರಕಾರ 5.42 ಕೋಟಿ ಟನ್ ಆಹಾರಧಾನ್ಯಗಳ ದಾಸ್ತಾನು ಹೊಂದಿದೆ. ಇದನ್ನು ಮಂತ್ರಿಗಳೇ ಹೇಳಿದ್ದಾರೆ. ಇದು ದೇಶಕ್ಕೆ ಬೇಕಾದುದಕ್ಕಿಂತ ಬಹಳ ಹೆಚ್ಚು. ಈ ಹೆಚ್ಚುವರಿ ದಾಸ್ತಾನನ್ನು ಅದು ವಾಣಿಜ್ಯ ಉದ್ದೇಶಗಳಿಗಾಗಿ ಇ–ಹರಾಜು ಮೂಲಕ ಮಾರಲು ಪ್ರಯತ್ನಿಸಿತು. ಆದರೆ ವಿಫಲವಾಯಿತು. ಆದ್ದರಿಂದ ಅದು ಇನ್ನೂ ಗೋದಾಮುಗಳಲ್ಲಿ ಕೊಳೆಯುತ್ತಿದೆ. ಇದನ್ನು ಈಗ ಖರೀದಿಸ ಬೇಕಾದ ಹಿಂಗಾರು ಗೋದಿ ಬೆಳೆಗೆ ಸ್ಥಳಾವಕಾಶ ಕಲ್ಪಿಸಲು ಖಾಲಿ ಮಾಡಬೇಕಾಗಿದೆ. ಆದ್ದರಿಂದ ದಾಸ್ತಾನು ಖಾಲಿ ಮಾಡಲು ಎನ್.ಜಿ.ಒ.ಗಳಿಗೆ ಪರಿಹಾರದ ಹೆಸರಿನಲ್ಲಿ ಇಷ್ಟೊಂದು ಹೆಚ್ಚು ಬೆಲೆ ಹೇಳುವುದು ಆಘಾತಕಾರಿ, ಮತ್ತು ಅನೈತಿಕ ಎಂದೇ ಹೇಳಬೇಕಾಗುತ್ತದೆ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಟಿಪ್ಪಣಿ ಮಾಡಿದ್ದಾರೆ.

ಆಹಾರಧಾನ್ಯಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿ. ಯಾವುದೇ ಆದಾಯ ಮತ್ತು ಕೆಲಸ ಇಲ್ಲದ್ದರಿಂದ ಕೋಟ್ಯಂತರ ಕುಟುಂಬಗಳನ್ನು ಉಪವಾಸದ ಪರಿಸ್ಥಿತಿ ಕಾಡುತ್ತಿರುವ ಸಮಯದಲ್ಲಿ ಸರಕಾರ ದಾಸ್ತಾನನ್ನು ಉಚಿತವಾಗಿ ಹಂಚಬೇಕಾಗಿದೆ. ಎನ್.ಜಿ.ಒ.ಗಳು ಮತ್ತು ದಾನ–ಧರ್ಮದ ಸಂಘಟನೆಗಳನ್ನು ಪರಿಹಾರ ಕೆಲಸದಲ್ಲಿ ತೊಡಗಿಸಬೇಕೆಂದಿದ್ದರೆ, ಖಂಡಿತವಾಗಿಯೂ ಯಾರೂ ಖರೀದಿಸ ಬಯಸದ ದಾಸ್ತಾನುಗಳನ್ನು ಪರಿಹಾರದ ಹೆಸರಿನಲ್ಲಿ ಮಾರಿ ಲಾಭ ಮಾಡಿಕೊಳ್ಳುವಂತಹ ಆಶಯ ಖಂಡಿತಾ ಸರಿಯಲ್ಲ ತಾನೇ ಎಂದು ಬೃಂದಾ ಅವರು ತಮ್ಮ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

"ರೇಷನ್ ವ್ಯವಸ್ಥೆಯ ಮೂಲಕ ದಾಸ್ತಾನನ್ನು ಉಚಿತವಾಗಿ ಹಂಚಬೇಕು ಎಂದು ಆಹಾರ ಮಂತ್ರಿಯಾಗಿ ನಿಮ್ಮನ್ನು ಬಲವಾಗಿ ಆಗ್ರಹಿಸುತ್ತೇನೆ. ಆಧಾರ್ ಮತ್ತು ರೇಷನ್ ಕಾರ್ಡ್ ಗಳ ಎಂದಿನ ಶರತ್ತುಗಳು ಅನ್ವಯವಾಗಬಾರದು, ಏಕೆಂದರೆ ಬಹಳಷ್ಟು ಜನಗಳ ಬಳಿ, ನಿರ್ದಿಷ್ಟವಾಗಿ ವಲಸೆ ಕಾರ್ಮಿಕರ ಬಳಿ ಇಂತಹ ಗುರುತು ಸಾಧನಗಳಿರುವುದಿಲ್ಲ. ಲಾಕ್ ಡೌನಿನ ಹೊರೆ ಭಾರತದ ಶ್ರಮಜೀವಿ ವರ್ಗಗಳ ಮೇಲೆಯೇ ಹೆಚ್ಚಾಗಿ ಬಿದ್ದಿದೆ. ಈ ವಾಸ್ತವವನ್ನು ಗಮನದಲ್ಲಿಟ್ಟುಕೊಂಡು ಲಾಕ್ ಡೌನಿನ ಮತ್ತು ನಂತರದ ಅವಧಿಯಲ್ಲಿ ಸರಕಾರದ ಧೋರಣೆಯನ್ನು ಸೂಕ್ತವಾಗಿ ಬದಲಿಸಬೇಕು" ಎಂದು ಕೇಂದ್ರ ಆಹಾರ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಬೃಂದಾ ಕಾರಟ್ ಆಗ್ರಹಿಸಿದ್ದಾರೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಜನಗಳ ಜೀವಗಳನ್ನು ಕಾರ್ಪೊರೇಟ್ ಲಾಭಗಳಿಗೆ ಸಾಟಿ ಮಾಡಿಕೊಳ್ಳಬೇಡಿ

ಆಹಾರ ಧಾನ್ಯಗಳು ಜನರಿಗಾಗಿಯೇ ಹೊರತು, ಇಂಧನಕ್ಕಾಗಿ ಅಲ್ಲ ಎಂದು ಎಫ್‌ಎಒ ಕೂಡ ಪ್ರತಿಪಾದಿಸಿದೆ

ಜೈವಿಕ ಇಂಧನವಾಗಿ ಬಳಸಲು ಮತ್ತು ಶುಚಿಕಾರಕ(ಸ್ಯಾನಿಟೈಸರ್)ಗಳ ತಯಾರಿಕೆಗೆ ಸಂಚಯಗೊಂಡಿರುವ ಅಕ್ಕಿ ದಾಸ್ತಾನುಗಳನ್ನು ಇಥನೋಲ್ ಆಗಿ ಪರಿವರ್ತಿಸಬೇಕೆನ್ನುವ ಭಾರತ ಸರಕಾರದ ನಿರ್ಧಾರ ಅಮಾನವೀಯ ಎಂದು ಸಿಪಿಐ(ಎಂ) ಬಲವಾಗಿ ಖಂಡಿಸಿದೆ.

ಈ ನಿರ್ಧಾರ ಲಾಕ್‌ಡೌನಿನಿಂದಾಗಿ ಹೇಳತೀರದ ಕಷ್ಟಗಳನ್ನು ಅನುಭವಿಸುತ್ತಿರುವ, ಆಹಾರ ಸಿಗದೆ ಉಪವಾಸದ ಅಂಚಿಗೂ ತಳ್ಳಲ್ಪಟ್ಟಿರುವ ಲಕ್ಷ–ಲಕ್ಷ ವಲಸೆ ಕಾರ್ಮಿಕರು, ಇತರ ಅಸಂಘಟಿತ ವಲಯದ ಕಾರ್ಮಿಕರು ಮತ್ತು ಇತರ ಬಡವರ ಕಪಾಳಕ್ಕೆ ಬಾರಿಸಿದಂತೆ ಬಂದಿದೆ. ಅಪಾರ ಆಹಾರ ದಾಸ್ತಾನನ್ನು ಅದು ಬಹುವಾಗಿ ಅಗತ್ಯವಿರುವ ಜನಗಳಿಗೆ ಉಚಿತವಾಗಿ ಹಂಚಿ ಎಂದು ಸಿಪಿಐ(ಎಂ) ಮತ್ತೆ–ಮತ್ತೆ ಕೇಳಿಕೊಂಡರೂ, ಕೇಂದ್ರ ಸರಕಾರ ಆಹಾರ ಧಾನ್ಯಗಳ ಪೂರೈಕೆಯನ್ನು ರಾಜ್ಯ ಸರಕಾರಗಳ ಮೂಲಕ ಸಾರ್ವತ್ರಿಕ ವಿತರಣೆಗೆ ಒದಗಿಸುವಂತೆ ವಿಸ್ತರಿಸಿಲ್ಲ. ಆಹಾರ ಧಾನ್ಯಗಳು ಜನರಿಗಾಗಿಯೇ ಹೊರತು, ಇಂಧನಕ್ಕಾಗಿ ಅಲ್ಲ ಎಂದು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ (ಎಫ್‌ಎಒ) ಕೂಡ ಪ್ರತಿಪಾದಿಸಿದೆ ಎಂದು ಸಿಪಿಐ(ಎಂ) ನೆನಪಿಸಿದೆ.

ಅಂತಾರ್ರಾಷ್ಟ್ರೀಯ ತೈಲ ಬೆಲೆಗಳು ಚರಿತ್ರೆಯಲ್ಲಿ ಹಿಂದೆಂದೂ ಕಾಣದಷ್ಟು ಕೆಳಮಟ್ಟದಲ್ಲಿ ಇರುವಾಗ, ಮತ್ತು ಹೆಚ್ಚಿನ ಪೆಟ್ರೋಲ್–ಚಾಲಿತ ವಾಹನಗಳು ಲಾಕ್‌ಡೌನಿನಿಂದಾಗಿ ರಸ್ತೆಗೆ ಇಳಿಯದಿರುವ ಸಮಯದಲ್ಲಿ ಪೆಟ್ರೋಲಿನಲ್ಲಿ ಇಥನೋಲ್ ಸಂಯೋಜಿಸಲು ಬೇಬಾಳುವ ಅಕ್ಕಿಯನ್ನು ಬಳಸುವುದಕ್ಕೆ ಇರುವ ತರ್ಕವಾದರೂ ಏನು ಎಂದು ಗ್ರಹಿಕೆಗೆ ಮೀರಿರುವ ಸಂಗತಿ. ತೈಲ ಆಮದಿನ ವೆಚ್ಚ ಇಳಿದಿದೆ ಮತ್ತು ದೇಶದೊಳಗೆ ಸ್ಯಾನಿಟೈಸರ್‌ಗಳಿಗೆ ಬೇಕಾಗಿರುವ ಆಲ್ಕೊಹಾಲ್‌ನ ಉತ್ಪಾದನೆಯ ಸಾಮರ್ಥ್ಯವು ಸಾಕಷ್ಟು ಬಳಕೆಯಾಗದೇ ಉಳಿದಿದೆ.

ಜನಗಳ ಜೀವಗಳನ್ನು, ಹಸಿವಿನಿಂದ, ತಲೆಯ ಮೇಲೆ ಸೂರಿಲ್ಲದೆ ಬದುಕುಳಿಯಲು ಹೋರಾಡುತ್ತಿರುವ ಲಕ್ಷಾಂತರ ವಂಚಿತರ ಬದುಕುಗಳನ್ನು ಕಾರ್ಪೊರೇಟ್‌ಗಳ ಲಾಭಗಳಿಗೆ ವಿನಿಮಯ ಮಾಡಿಕೊಳ್ಳಲು ಸಾಧ್ಯವಿಲ್ಲ. ಇದು ಕ್ರಿಮಿನಲ್ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ತಕ್ಷಣವೇ ಈ ಹೇಯ ನಿರ್ಧಾರವನ್ನು ಹಿಂದಕ್ಕೆ ಪಡೆಯುವಂತಾಗಬೇಕು ಎಂದು ಕರೆ ನೀಡಿದೆ.

ಮಹಾರಾಷ್ಟ್ರದಲ್ಲಿ ದೊಂಬಿ ಹತ್ಯೆಯ ಪ್ರಕರಣ– ಕೋಮು ಬಣ್ಣ ಹಚ್ಚಲು ಆರೆಸ್ಸೆಸ್–ಬಿಜೆಪಿ ಪ್ರಯತ್ನ

ಪುಟ 14 ನೋಡಿ

ಸಂಪಾದಕೀಯ

ಕೊರೊನಾ ಕಲಿಸಿದ ಪಾಠ
‘ನಾನು ಚೆನ್ನಾಗಿರಲು ನನ್ನ ನೆರೆಮನೆಯವನೂ ಚೆನ್ನಾಗಿರಬೇಕು’

ವಿಶ್ವದಾದ್ಯಂತ 2 ಲಕ್ಷಕ್ಕೂ ಹೆಚ್ಚು ಅಮಾಯಕರನ್ನು ಬಲಿಪಡೆದ ಮಾರಣಾಂತಿಕ ಸಾಂಕ್ರಾಮಿಕ ಕೊರೊನಾ ವೈರಸ್ ಸೋಂಕು ಹಬ್ಬುವ ಪ್ರಮಾಣವು ನಿಧಾನವಾಗಿ ಕಡಿಮೆಯಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಇಲಾಖೆ ಹೇಳೀದೆ. ಭಾರತದಲ್ಲಿ ಸೋಂಕಿತರ ಸಂಖ್ಯೆ 23,000 ದಾಟಿದೆ. ಎಪ್ರಿಲ್ 23 ರಾತ್ರಿ ವೇಳೆಗೆ ಒಟ್ಟಾರೆ ಚೇತರಿಸಿಕೊಂಡವರ ಸಂಖ್ಯೆ 5000 ದಾಟಿದೆ. ಅಂದರೆ ಶೇ. 19 ರಷ್ಟು ಸೋಂಕಿತರು ಗುಣಮುಖರಾಗಿದ್ದಾರೆ. ಒಟ್ಟು ಸಾವಿನ ಸಂಖ್ಯೆ 721. ದೇಶದಲ್ಲಿ ಸೋಂಕಿತರ ಸಂಖ್ಯೆಯಲ್ಲಿ ಏರಿಕೆ ಕಂಡು ಬರುತ್ತಿದ್ದರೂ ಏರಿಕೆಯ ಪ್ರಮಾಣ ಸಣ್ಣದಾಗಿದೆ. ಕಳೆದ 28 ದಿನಗಳಿಂದ 12 ಜಿಲ್ಲೆಗಳಲ್ಲಿ ಹೊಸ ಪ್ರಕರಣವೇ ಕಂಡು ಬಂದಿಲ್ಲ. ಕಳೆದ 14 ದಿನಗಳಿಂದ 78 ಜಿಲ್ಲೆಗಳಲ್ಲಿ ಯಾವ ಪ್ರಕರಣವೂ ದೃಢಪಟ್ಟಿಲ್ಲ. ಸಮಾಜದಲ್ಲಿ ಇಂದು ಸೋಂಕಿತರು ಕಳಂಕದಿಂದ ನೋವು ಅನುಭವಿಸುತ್ತಿದ್ದಾರೆ. ಇದರಿಂದಾಗಿಯೇ ರೋಗ ಪತ್ತೆ ಹಚ್ಚುವುದು ನಿಧಾನವಾಗುತ್ತಿದೆ. ಕಳಂಕ ಮತ್ತು ಆತಂಕದಿಂದ ಸಂಕಿತರು ರೋಗದ ಲಕ್ಷಣಗಳಿದ್ದರೂ ಪರೀಕ್ಷೆಗೆ ಒಳಗಾಗಲು ಮುಂದೆ ಬರುತ್ತಿಲ್ಲ. ಸರ್ಕಾರದ ಬೆದರಿಕೆಯ ಕ್ರಮಗಳಿಂದ ಸೋಂಕಿತರ ಪತ್ತೆಯಾಗುವುದಿಲ್ಲ. ಕಾನೂನು, ಸುಗ್ರೀವಾಜ್ಞೆಗಳಿಂದ ಸಮಸ್ಯೆಗೆ ಪರಿಹಾರ ದೊರೆಯದು. ಇಂತಹ ದೌರ್ಜನ್ಯದ ಕ್ರಮಗಳಿಂದ ರೋಗಿ ತಪ್ಪಿಸಿಕೊಂಡು ಓಡಾಡುವಂತಾಗುತ್ತಾನೆ. ತನ್ನ ಆತಂಕದಿಂದ ಆತ ಈ ಭಯಂಕರ ವೈರಾಣುಗಳನ್ನು ಇತರರಿಗೂ ವಿಸ್ತರಿಸುತ್ತಾನೆ.

ಕೊರೊನಾ ನಮೆಗೆಲ್ಲರಿಗೂ ಒಂದು ಪಾಠವನ್ನು ಕಲಿಸಿದೆ. ‘ನೀನು ಚೆನ್ನಾಗಿ ಇರಬೇಕಾದರೆ ನಿನ್ನ ನೆರೆಮನೆಯವನೂ ಚೆನ್ನಾಗಿರುವಂತೆ ನೋಡಿಕೊಳ್ಳಬೇಕು. ಕೊರೊನಾ ಯಾವ ಬೇದವನ್ನು ಅರಿಯದು ಎಂಬುದು ಸಾಬೀತಾಗಿದೆ. ಚಿಕ್ಕಮಕ್ಕಳಿಗೂ ಬರಬಹುದು, ವೃದ್ಧರಿಗೂ ಬರಬಹುದು, ಪುರುಷರಿಗೂ ಬರಬಹುದು, ಮಹಿಳೆಯರಿಗೂ ಅದು ಬರಬಹುದು. ಬಡವ, ಶ್ರೀಮಂತನ ನಡುವೆ ಅದು ಬರಬಹುದು. ಬಡವ, ಶ್ರೀಮಂತನ ನಡುವೆ ಅದು ತಾರತಮ್ಯ ಮಾಡದು. ಹಿಂದು, ಮುಸಲ್ಮಾನ, ಕ್ರೈಸ್ತ, ಬೌದ್ಧ, ಜೈನ್, ಸಿಖ್ ಇತ್ಯಾದಿ ಮತಪಂಥಗಳ ನಡುವೆ ಅದು ತಾರತಮ್ಯ ಮಾಡದು. ಮೂಕ ಪ್ರಾಣಿಗಳೊಂದಿಗೂ ಅದು ಚಲ್ಲಾಟ ನಡೆಸಬಹುದು. ನಾನು ಸೋಕಿತನಾಗದಿರಲು ನನ್ನ ನೆರೆಮನೆಯವನೂ ಸೋಕಿಗೆ ಒಳಗಾಗದಂತೆ ನಾನೂ ಕಾಳಜಿವಹಿಸಬೇಕು.

ನಾವು ಹಿಂದುಗಳು, ಮುಸಲ್ಮಾನರು, ಬೌಧರು, ಜೈನರು, ಪಾರ್ಸಿಗಳು, ಸಿಖ್ಖರು, ಕ್ರೈಸ್ತರು ಅನೇಕ ಶತಮಾನ ’ಗಳಿಂದನೆರೆಹೊರೆಯವರು. ನಾವು ಅಕ್ಕಪಕ್ಕದ ಮನೆಗಳಲ್ಲಿ, ವಠಾರಗಳಲ್ಲಿ ನೆಲೆಸಿದ್ದು ಪರಸ್ಪರ ಸುಖ ದುಖಃವನ್ನು ಹಂಚಿಕೊಂಡು ಬದುಕಿದ್ದೇವೆ. ಆದರೆ ಇತ್ತೀಚೀನ ಕೆಲವು ವರ್ಷಗಳಿಂದ ನಮ್ಮ ನಡುವೆ ದ್ವೇಷ ಬಿತ್ತುವ ಕೆಲಸ ತುಂಬಾ ಯಶಸ್ವಿಯಾಗಿ ನಡೆಯುತ್ತಿದೆ. ಕೊರೊನಾದಂತಹ ಭಯಂಕರವಾದ ಒಬ್ಬರಿಂದ ಇನ್ನೊಬರಿಗೆ ಹರಡುವ ವೈರಾಣು ಸೋಂಕಿನ ವಿರುದ್ಧ ಎಲ್ಲ ದೇಶವಾಸಿಗಳನ್ನು ಒಂದಾಗಿಸುವ ಬದಲಾಗಿ ನಮ್ಮ ನಡುವೆ ಧಾರ್ಮಿಕ ಅಸಹನೆಯನ್ನು ಬಡಿದೆಬ್ಬಿಸಲಾಯಿತು. ಅಲ್ಲಸಲ್ಲದ ಅಪಪ್ರಚಾರ ಮಾಡಲಾಯಿತು.

ಸರ್ಕಾರದ ನಿರ್ದೇಶನ ವಿರುದ್ಧ ದೆಹಲಿಯಲ್ಲಿ ತಬ್ಲಿಕೀ ಜಮಾತ್‌ನವರು ದೇಶ ವಿದೇಶಗಳಿಂದ ತಮ್ಮ ಸಮಾಜ ಬಾಂಧವರನ್ನು ಕರೆಯಿಸಿಕೊಂಡು ಸಮಾವೇಶ ನಡೆಸಿದ್ದು ತಪ್ಪು. ಆದರೆ ಅವರು ಈ ಮಾರಣಾಂತಿಕ ವೈರಾಣುವನ್ನು ಹರಡಿಸುವುದೇ ಅವರ ಉದ್ದೇಶವಾಗಿತ್ತು ಎಂದು ಕೆಲವು ಹಿರಿಯ ಬಿಜೆಪಿಗರು ಪ್ರಚಾರ ಮಾಡಿದ್ದು ತಬ್ಲಿಕೀ ಜಮಾತ್‌ನವರು ಮಾಡಿದ ತಪ್ಪಿಗಿಂತಲೂ ದೊಡ್ಡದು. ಇಂತವರಿಗೆ ಏನು ಶಿಕ್ಷೆ? ಇದು ‘ಕೊರೊನಾ ಜಿಹಾದ್’ ಎಂದು ಕರೆಯಲು ಸಂಘ ಪರಿವಾರ ಶಕ್ತಿಗಳು ಹೇಸಲಿಲ್ಲ. ನಮ್ಮ ಜೀವಕ್ಕೇ ಉರುಳಾಗುವ ವೈರಾಣುವನ್ನು ಇವರ್ ಬಾರೀ ಒಂದು ಕುತಂತ್ರ ಕಾರ್ಯಾಚರಣೆಯ ಭಾಗವಾಗಿ ಸಮಾವೇಶಕ್ಕೆ ಬಂದ ತಮ್ಮ ಬಂಧುಗಳಲ್ಲಿ ಹರಡಿಸಿದರು ಎಂದು ಹೇಳಿದರೆ ಯಾರಾದರೂ ನಂಬಬಹುದೆ. ನಮ್ಮ ದೇಶ ಬಾಂಧವರಲ್ಲಿ ಒಂದು ದೊಡ್ಡ ಸಂಖ್ಯೆಯ ಜನ ಮೋದಿಯವರ ಇಂತಹ ಮೋಡಿ ಮಾಡುವ ಮಾತುಗಳನ್ನು ಕೇಳಿ ಕೇಳಿ ಅವರು ಹೇಳಿದೆಲ್ಲವನ್ನು ನಂಬುವಂತಾಗಿದೆ. ಮುಸಲ್ಮಾನರೆಂದರೆ ದೇಶದ್ರೋಹಿಗಳು. ಅವರಿಗೆ ಭಾರತದ ಹಿತ ಬೇಕಾಗಿಲ್ಲ. ಅವರು ಪಾಕಿಸ್ತಾನಕ್ಕೆ ಜಯವಾಗಲಿ ಎನ್ನುತ್ತಾರೆ. ಮುಸಲ್ಮಾನರೆಲ್ಲ ಭಯೋತ್ಪಾದಕರು. “ಇಂತಹ ಮಾತುಗಲನ್ನು ನಮ್ಮ ಮುಗ್ದ ದೇಶವಾಸಿಗಳು ಪ್ರಶ್ನೆ ಮಾಡದೆ ಒಪ್ಪಿಕೊಳ್ಳುತ್ತಾ ಬಂದಿದ್ದಾರೆ. ಇಂತಹ ಮೋಸದ ಮಾತುಗಳು ಸಾಕು. ಕೃತಿಗಳು ಬೇಕು ಎಂದು ‘ನವೋ’ ರವರಿಗೆ ಕೇಳಿಸುವಂತೆ ಮಾಡಬೇಕಾಗಿದೆ.

ನಾವು ಹಿಂದುಗಳು, ಮುಸ್ಲಾನರು, ದಲಿತರು, ಆದಿವಾಸಿಗಳು ಎಲ್ಲರೂ ಭಾರತೀಯರ. ಪರಸ್ಪರ ನೆರೆಮನೆಯವರು ಇದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಬದಲಾಯಿಸುವ ದುಷ್ಟ ಪ್ರಯತ್ನವನ್ನು ವಿಫಲಗೊಳಿಸಲು ನಾವೆಲ್ಲರೂ ಒಂದಾಗಬೇಕು. ಕೊರೊನಾ ನಮಗೆ ಪಾಠ ಕಲಿಸಿದೆ. ನನ್ನ ನೆರೆಮನೆಯವನಿಗೆ ವೈರಾಣು ಸೋಂಕು ತಗಲಿದರೆ ನನಗೂ, ನನ್ನ ಮನೆಯವರೆಲ್ಲರಿಗೂ ಅದು ಹರಡಬಹುದು. ಈ ವಿಷಯದಲ್ಲಿ ಪರಸ್ಪರ ನೆರವಾಗಿ, ಧೈರ್ಯ ತುಂಬಿ ಈ ಅನಾಹುತವನ್ನು ದೂರಮಾಡಬೇಕು.

ನಮ್ಮ ನೆರೆಹೊರೆಯ ದೇಶಗಳೊಂದಿಗೆ ನಮ್ಮ ಸಂಬಂಧವನ್ನು ಉತ್ತಮಪಡಿಸಲು ಇದು ಸರಿಯಾದ ಸಮಯ. ನಮ್ಮ ನೆರೆಯ ದೇಶಗಳಿಗೆ ಬೇಕಾಗುವ ಔಷಧಿಗಳನ್ನು ವೈದ್ಯಕೀಯ ಉಪಕರಣಗಳನ್ನು ಹಾಗೂ ಆರೋಗ್ಯ ಸೇವೆಯನ್ನು ನಾವು ಹಂಚಿಕೊಳ್ಳಬಹುದು. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ನಾವು ಗಡಿಗಳಲ್ಲಿ ಹೊಡೆದಾಡಿ ನಮ್ಮ ಯೋಧರ ಅಮೂಲ್ಯ ಪ್ರಾಣಗಳನ್ನು ಕಳೆದುಕೊಳ್ಳುವುದನ್ನು ನಿಲ್ಲಿಸಲಾಗದೆ? ಅದು ಭಾರತವಾಗಲಿ, ಪಾಕಿಸ್ತಾನವಾಗಲಿ ಪಾಠ ಕಲಿಯುವುದು ಯಾವಾಗ? ನಮ್ಮ ನೆರೆಹೊರೆಯ ದೇಶಗಳು ಚೆನ್ನಾಗಿಲ್ಲದಿದ್ದರೆ ನಾವು ಭಾರತದವರು ಚೆನ್ನಾಗಿ ಇರಲು ಸಾಧ್ಯವಾ? ಅದರಂತೆ ನಾವು ಭಾರತೀಯರು ಚೆನ್ನಾಗಿರದೆ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕ ಮೊದಲಾದ ದೇಶಗಳು ಚೆನ್ನಾಗಿರಲು ಸಾಧ್ಯವೆ?

ಮೊನ್ನೆ ಬೆಂಗಳೂರಿನ ಪಾದರಾಯನಪುರದಲ್ಲಿ ನಡೆದ ಘಟನೆ. ಬಹಳಷ್ಟು ಸದ್ದು ಗದ್ದಲ ಮಾಡಲಾಯಿತು. ಸೋಂಕಿನ ಶಂಕೆಯ ಮೇಲೆ 35 ಜನರನ್ನು ಕ್ವಾರಂಟೈನ್‌ಗೆ ಕರೆದೊಯ್ಯುವಾಗ ಆರೋಗ್ಯ ಹಾಗೂ ಪೊಲೀಸ್ ಸಿಬ್ಬಂದಿ ಮೇಲೆ ಗೂಂಡಾಗಿರಿ ನಡೆಸಲಾಯಿತು ಎಂಬ ಆರೋಪ. ಆಗ ಕತ್ತಲಾಗಿತು. ಕತ್ತಲಲ್ಲಿ ಯಾರೂ ಏನು ಮಾಡಿದರು ಎಂಬುದನ್ನು ತಿಳಿಯುವುದು ಕಷ್ಟ. ಶಂಕಿತರನ್ನು ಆದಷ್ಟು ಬೇಗ ಕ್ವಾರೆಂಟೈನ್‌ಗೆ ತಲುಪಿಸಬೇಕೆಂಬ ಅಧಿಕಾರಿಗಳ ಹಾಗೂ ಪೊಲೀಸರ ಕಾಳಜಿ ಸರಿಯಾಗಿದೆ. ಆದರೆ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಕರೆದೊಯ್ಯುವಾಗ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಮುಖಂಡರನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳಿಸಿ, ಪ್ರಾಥಮಿಕ ಪರೀಕ್ಷೆ ನಡೆಸಿದ ನಂತರವಷ್ಟೇ ಈ ಪ್ರಕ್ರಿಯೆ ನಡೆದಿದ್ದರೆ ಈ ಅನಾಹುತವನ್ನು ತಪ್ಪಿಸಬಹುದಾಗಿತ್ತು. ಆತಂಕಪಡುವ ಅಂತಹ ದೊಡ್ಡ ಅನಾಹುತ, ಸುದೈವಕ್ಕೆ ನಡೆದಿಲ್ಲ. ಅಲ್ಲಿ ನಿರ್ಮಿಸಲಾದ ಚೆಕ್ ಪೋಸ್ಟ್ ನಾಶಮಾಡಿ ಬೆಂಕಿಹಚ್ಚಿದ್ದಾರೆ, ವೈದ್ಯರನ್ನು, ಪೊಲೀಸರನ್ನು ಸಾಯಿಸಿ ಎಂದು ಕೂಗಿದ್ದಾರೆ ಎಂಬ ಆರೋಪವಿದೆ. ಇದು ವಿವರವಾದ ತನಿಖೆಯಿಂದ ದೃಢಪಡಬೇಕಾಗಿದೆ. ಆದರೆ ಪ್ರಕರಣದಲ್ಲಿ ಬಂಧಿಸಿದವರೆಲ್ಲರೂ ಮುಸಲ್ಮಾನರು ಎನ್ನುವುದನ್ನು ಬಿಟ್ಟರೆ ಇವರೇ ದೃಷ್ಕೃತ್ಯದಲ್ಲಿ ಭಾಗವಹಿಸಿದ್ದರು ಎಂಬುದಕ್ಕೆ ಪುರಾವೆಗಳನ್ನು ಹುಡುಕಬೇಕಾಗಿದೆ. ಕೆಲವೇ ದಿನಗಳ ಹಿಂದೆ ಇಂತಹ ಇನ್ನೊಂದು ಘಟನೆ ಬೆಂಗಳೂರಿನಲ್ಲಿ ನಡೆದಿತ್ತು. ಇದಲೆಲ್ಲಾ ಮುಸಲ್ಮಾನರ ಬಗಗೆ ಪೂರ್ವಾಗ್ರಹ ಎದ್ದು ಕಾಣುತ್ತದೆ. ಮುಖ್ಯ ಮಂತ್ರಿಗಳು ಸಹ ಒಬ್ಬ ಶಾಸಕನಿಗೆ ಬೆದರಿಕೆ ಹಾಕುವಂತಹ ಮಾತುಗಳನ್ನು ಆಡಿದ್ದು ಸರಿಯಾದುದಲ್ಲ. ಇತ್ತೀಚೆಗೆ ಪಂಜಾಬದಲ್ಲಿ ಇದೇ ರೀತಿಯ ಗಲಭೆಯಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ಕೈಯನ್ನೇ ಕಡಿದು ಹಾಕಲಾಗಿತ್ತು. ಆದರೆ ಅದನ್ನು ಪ್ರಚಾರ ಕೊಡದೆ ಮುಚ್ಚಿಹಾಕಲಾಯಿತು. ಯಾಕೆಂದರೆ ಅಪರಾಧಿ ಮುಸಲ್ಮಾನರಾಗಿರಲಿಲ್ಲ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಇಬ್ಬರು ಖಾವಿಧಾರಿ ಸಾಧುಗಳನ್ನು ಮಕ್ಕಳ ಕಳ್ಳರೆಂದು ಭಾವಿಸಿ ಹೊಡೆದು ಸಾಯಿಸಲಾಯಿತು. ಪ್ರಕರಣಕ್ಕೆ ಹೆಚ್ಚು ಪ್ರಚಾರವನ್ನೇ ನೀಡದೆ ಮೂಲೆ ಗುಂಪು ಮಾಡಲಾಯಿತು. ಏಕೆಂದರೆ ಪೂರ್ವಾಗ್ರಹ ಪೀಡಿತ ಸರ್ಕಾರಗಳಿಂದ ಬಡ ಮುಸಲ್ಮಾನರಿಗೆ ನ್ಯಾಯ ಸಿಕ್ಕಿತೆ?

ಕೋವಿಡ್–19 ನ್ನು ಪರಿಣಾಮಕಾರಿಯಾಗಿ ಎದುರಿಸಲು ಆರೋಗ್ಯ ಕಾರ್ಯಕರ್ತರಿಗೆ ಮತ್ತು ದುಡಿಯುವ ಜನತೆಗೆ ಅಗತ್ಯ ನೆರವು ಒದಗಿಸಲು ಒತ್ತಾಯಿಸಿ ಮನವಿ

ಗೆ,

ಮಾನ್ಯ ಪ್ರಧಾನ ಮಂತ್ರಿಗಳು,
ಭಾರತ ಒಕ್ಕೂಟ ಸರಕಾರ,
ಪಾರ್ಲಿಮೆಂಟ್ ಭವನ, ನವದೆಹಲಿ.

ಮತ್ತು

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ದೇಶದಾದ್ಯಂತ ಹಾಗೂ ರಾಜ್ಯದಾದ್ಯಂತ ವಿಸ್ತರಿಸಲ್ಪಟ್ಟ ಲಾಕ್ ಡೌನ್ ಅವಧಿಯಲ್ಲೂ ರಾಜ್ಯದ ಜನತೆ ಸಂಕಷ್ಠದ ನಡುವೆಯೂ ಕೋವಿಡ್ – 19 ನ್ನು ಎದುರಿಸಿ ಹೋರಾಟದಲ್ಲಿ ತೊಡಗಿರುವುದು ತಮಗೆ ತಿಳಿದ ವಿಚಾರವಾಗಿದೆ.

ರಾಜ್ಯದಲ್ಲಿ ಆರೋಗ್ಯ ತಪಾಸಣೆಯ ಕೆಲಸ ಮತ್ತಷ್ಠು ವ್ಯಾಪಕತೆ ಪಡೆಯಬೇಕಿದೆ. ವೈದ್ಯರು, ಆರೋಗ್ಯ ಕಾರ್ಯಕರ್ತರು ಅಗತ್ಯದಷ್ಠು ಪಿಪಿಇ ಕಿಟ್ ದೊರೆತಿಲ್ಲವೆಂದು ದೂರುತ್ತಿದ್ದಾರೆ.

ಆದೇ ರೀತಿ, ರಾಜ್ಯದ ಒಟ್ಟು ಜನತೆಯಲ್ಲಿ ಶೇ. 80 ಕ್ಕೂ ಅಧಿಕ ಜನತೆ ಹಾಗೂ ಕುಟುಂಬಗಳು ಬಹುತೇಕ ಕೃಷಿಕೂಲಿಕಾರರು, ಬಡರೈತರು, ಕಟ್ಟಡ ಮತ್ತಿತರೆ ಅಸಂಘಟಿತ ಮತ್ತು ಸಂಘಟಿತ ವಲಯದ ಕಾರ್ಮಿಕರು, ಸ್ವಯಂ ವೃತ್ತಿ ಆಧಾರಿತ ಕೆಲಸಗಾರರು, ಸಣ್ಣ ಹಾಗೂ ಮಧ್ಯಮ ವ್ಯಾಪಾರಿಗಳು, ತಮ್ಮ ದಿನದ ದುಡಿಮೆಯ ಆಧಾರದಲ್ಲಿ ಬದುಕುತ್ತಿರುವುದು ಗುಟ್ಟಾದ ವಿಚಾರವೇನಲ್ಲಾ. ಈ ಕುಟುಂಬಗಳು ಲಾಕ್ ಡೌನ್ ಮೊದಲ ಅವಧಿ 21 ದಿನಗಳು ಮುಗಿದು, ಎರಡನೆ ಅವಧಿಯಲ್ಲಿ ಸುಮಾರು ಆರು ದಿನಗಳನ್ನು ಪೂರೈಸಿವೆ. ಇನ್ನೂ ಮೇ–03, 2020 ರವರೆಗೆ ಮುನ್ನಡೆಯ ಬೇಕಿದೆ. ಈ ಕುಟುಂಬಗಳು ಬಹುತೇಕ ಒಂದೆಡೆ ಕೋವಿಡ್–19 ರಿಂದ ಮತ್ತೊಂದೆಡೆ ಆರ್ಥಿಕ ಸಂಕಷ್ಠದಿಂದ ನಲುಗಿವೆ.

ಈ ಕುಟುಂಬಗಳು ಕೋವಿಡ್– 19 ವೈರಾಣುವನ್ನು ಮತ್ತಷ್ಠು ಪರಿಣಾಮಕಾರಿಯಾಗಿ ಎದುರಿಸಲು, ಅವರಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಗತ್ಯದಷ್ಠು ನೆರವು ನೀಡಬೇಕಿದೆ. ಇದುವರೆಗಿನ ಕ್ರಮಗಳು ಖಂಡಿತಾ ಸಮರ್ಪಕವಾಗಿಲ್ಲ. ಕೇಂದ್ರ ಸರಕಾರ ಘೋಷಿಸಿದ ನೆರವು ಏನೇನು ಸಾಕಾಗಲ್ಲ ಮಾತ್ರವಲ್ಲಾ, ಘೋಷಿಸಿದ ಅರೆ ಬರೆ ನೆರವು ಇನ್ನೂ ಜನರಿಗೆ ತಲುಪಲಿಲ್ಲ. ರಾಜ್ಯ ಸರಕಾರವು ನೆರವನ್ನು ಘೋಷಿಸಲೇ ಇಲ್ಲ. ಮುಂಗಡ ಪಡಿತರ ನೀಡುವುದಷ್ಠೇ ತನ್ನ ಕರ್ತವ್ಯವೆಂದು ಭಾವಿಸಿ ಕೈತೊಳೆದುಕೊಂಡಿದೆ. ಮುಂಗಡ ಮಾಸಿಕ ಸಹಾಯಧನ ಅಥವಾ ಬಡವರ ಪಿಂಚಣಿ ಬಾಕಿ ಸಮೇತ ನೀಡಲಾಗಿಲ್ಲ.

ರೈತರು ತಮ್ಮ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ದೊರೆಯದೇ ಕೃಷಿ ಉತ್ಪನ್ನಗಳನ್ನು ನಾಶಪಡಿಸಿದ್ದಾರೆ. ಮಂಡ್ಯ ಮುಂತಾದೆಡೆ ನಷ್ಠದ ಸಾಲಬಾಧೆಯಿಂದ ಕೆಲ ರೈತರು ಆತ್ಮಹತ್ಯೆ ಮಾಡಿಕೊಂಡ ವರದಿಗಳಿವೆ. ಈಗಲೂ ಸರಕಾರ ರೈತರ ಕೃಷಿ ಉತ್ಪನ್ನಗಳನ್ನು ಏಜೆನ್ಸಿಗಳ ಮೂಲಕ ಬೆಂಬಲ ಬೆಲೆಗೆ ಖರೀದಿಸುತ್ತಿಲ್ಲ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಾರ್ಮಿಕರ ಉದ್ಯೋಗ ಉಳಿಸಲು ವೇತನ ಸಹಿತ ರಜೆಯೆಂದು ಘೋಷಿಸಿದುದು ಕೇವಲ ಘೋಷಣೆ ಮಾತ್ರವಾಗಿ ಉಳಿದಿದೆ. ಮಾಲೀಕ ವರ್ಗ ಇದಕ್ಕೆ ಯಾವುದೇ ಕವಡೆ ಕಿಮ್ಮತ್ತಿನ ಬೆಲೆಯನ್ನು ನೀಡುತ್ತಿಲ್ಲ. ಬದಲಿಗೆ ಸರಕಾರಗಳೇ ವೇತನ ನೀಡುವಂತೆ ವಿವಿಧ ಕಾರ್ಮಿಕರ ಕಲ್ಯಾಣ ನಿಧಿಗಳನ್ನು ದುರ್ಬಳಕೆ ಮಾಡಲು ಮತ್ತು ಸದರಿ ಸಂಕಷ್ಠದ ಸಂದರ್ಭವನ್ನು ದುರುಪಯೋಗಿಸಿಕೊಂಡು ಕಾರ್ಮಿಕರ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸಲು ಹುನ್ನಾರ ನಡೆಸಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇವುಗಳ ಜೊತೆ ಶಾಮೀಲಾಗದೇ ತಿರಸ್ಕರಿಸಬೇಕಿದೆ ಮತ್ತು ಕಾಯ್ದೆಯ ಪ್ರಸ್ತಾಪಗಳನ್ನು ಕೈ ಬಿಡಬೇಕು.

ವಲಸೆ ಕಾರ್ಮಿಕರು ತಮ್ಮ ಸ್ವಗ್ರಾಮಗಳಿಗೆ ತೆರಳಿ ಕುಟುಂಬಗಳ ಜೊತೆ ಬೆರೆಯಲು ಇನ್ನೂ ಕ್ರಮವಹಿಸಲಿಲ್ಲ.

ಬದಲಿಗೆ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕೇವಲ ಭಾಷಣಗಳ ಮೂಲಕ ಜನಗಳ ಹಸಿದ ಹೊಟ್ಟೆಗಳನ್ನು ತುಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಆದ್ದರಿಂದ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಾಷಣಗಳು, ಉಪದೇಶಗಳು ಕೋವಿಡ್ –19 ವೈರಾಣುವನ್ನು ಎದುರಿಸಲು ದುಡಿಯುವ ಬಡ ಜನತೆಗೆ ಹೊಟ್ಟೆ ತುಂಬಿಸಲಾರವು ಎಂಬುದನ್ನು ಅರಿಯಬೇಕು ಮತ್ತು ಅವರಿಗೆ ಅಗತ್ಯ ಆರ್ಥಿಕ ನೆರವು ನೀಡಬೇಕೆಂದು ಸಿಪಿಐಎಂ ಮರಳಿ ಒತ್ತಾಯಿಸುತ್ತದೆ.

ಹಕ್ಕೊತ್ತಾಯಗಳು :

1. ಹಣಕಾಸು ಉತ್ತೇಜನೆ ಪ್ಯಾಕೇಜನ್ನು ಈಗಿರುವ 0.8% ಜಿ.ಡಿ.ಪಿ.ಯಿಂದ ಕನಿಷ್ಟ 5% ಜಿ.ಡಿ.ಪಿ.ಗೆ ಏರಿಸುವುದು. ರಾಜ್ಯ ಸರಕಾರಗಳಿಗೆ ಉದಾರ ನಿಧಿ ಒದಗಿಸಬೇಕು.
2. ಅಗತ್ಯ ಪಿ.ಪಿ.ಇ.ಗಳನ್ನು ಖರೀದಿಸಿ ತಪಾಸಣೆಗಳನ್ನು ತ್ವರಿತವಾಗಿ ವಿಸ್ತರಿಸಿರಿ. ಆಶಾ, ಅಂಗನವಾಡಿ ಮತ್ತಿತರೇ ಆರೋಗ್ಯ ಕಾರ್ಯಕರ್ತರಿಗೆ ವಿಮೆ ಹಾಗೂ ಸುರಕ್ಷತಾ ಕ್ರಮ ಒದಗಿಸಬೇಕು.
3. ತಕ್ಷಣವೇ ಎಲ್ಲಾ ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಬರದ ಜನಗಳಿಗೆ ರೂ.7500 ನಗದು ವರ್ಗಾವಣೆ ಮಾಡಿರಿ.
4. ಆಹಾರದ ಅಗತ್ಯವಿರುವ ಎಲ್ಲರಿಗೂ ಅಗತ್ಯದಷ್ಠು ಆಹಾರ ಧಾನ್ಯಗಳು ಮತ್ತು ಆರೋಗ್ಯ ಸುರಕ್ಷತಾ ಪರಿಕರಗಳನ್ನು ಮನೆ ಮನೆಗೆ ಉಚಿತ ವಿತರಣೆ ಮಾಡಿರಿ.
5. ಮಾರುಕಟ್ಟೆ ತೊಂದರೆಯಿಂದ ನಷ್ಠ ಹೊಂದಿದ ರೈತರ ಗಣತಿ ಮಾಡಿ ಪರಿಹಾರ ನೀಡಿರಿ. ಘೋಷಿತ ಸಿ2+50% ಬೆಂಬಲ ಬೆಲೆಗಳಲ್ಲಿ ಕಟಾವು ಆಗಿರುವ ಬೆಳೆಗಳ ಖರೀದಿ, ಮತ್ತು ಮನರೇಗ ಸ್ಕೀಮಿನ ಅಡಿಯಲ್ಲಿ ದಾಖಲಾಗಿರುವ ಎಲ್ಲರಿಗೂ ಕೆಲಸವಿದ್ದರೂ, ಇಲ್ಲದಿದ್ದರೂ ಕೂಲಿ ಪಾವತಿಸಿರಿ.
6. ಕಾರ್ಮಿಕರನ್ನು ಉದ್ಯೋಗ ನಷ್ಟ, ಸಂಬಳ ಕಡಿತದಿಂದ ರಕ್ಷಿಸಲು ಉದ್ಯೋಗದಾತರಿಗೆ ಹಣಕಾಸು ನೆರವು ನೀಡಿರಿ. ಅದೇ ರೀತಿ, ಕೆಲಸದ ಅವಧಿಯ ವಿಸ್ತರಣೆ ಬೇಡಾ. ಹಾಗೂ ಅದಕ್ಕಾಗಿ ಕಾಯ್ದೆಗೆ ತಿದ್ದುಪಡಿ ಮಾಡುವುದು ಬೇಡಾ! ಹಾಗೇ ಇಎಸ್‌ಐ ಹಾಗೂ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ ದುರ್ಬಳಕೆ ಮಾಡುವುದು ಬೇಡಾ!
7. ವಲಸೆ ಕಾರ್ಮಿಕರು ತಮ್ಮ ಮನೆಗಳಿಗೆ ಮರಳಲು ಅಗತ್ಯ ವ್ಯವಸ್ಥೆ ಮಾಡಿರಿ.
8. ಎಲ್ಲಾ ಪಿಂಚಣಿ ಹಾಗೂ ಮಾಸಿಕ ಸಹಾಯಧನ ಪಡೆಯುವವರಿಗೆ ಹಳೆಯ ಬಾಕಿಯೂ ಸೇರಿದಂತೆ ಎರಡು ತಿಂಗಳ ಮುಂಗಡ ಹಣ ತಕ್ಷಣ ಒದಗಿಸಬೇಕು.
9. ಮಕ್ಕಳಿಲ್ಲದ ವಯೋವೃದ್ಧರು, ಅನಾಥರು, ಅಂಗವಿಕಲರು, ಸೌಖ್ಯವಿಲ್ಲದವರು, ಭಿಕ್ಷುಕರು, ಮತ್ತಿತರೆ ನಿರಾಶ್ರಿತರಿಗೆ ಪ್ರತಿ ದಿನ ಆಹಾರ ಸರಬರಾಜು ಮಾಡಲು ಅಗತ್ಯ ಕ್ರಮ ವಹಿಸಿರಿ.
10. ಮುಸ್ಲಿಂ ಅಲ್ಪ ಸಂಖ್ಯಾತರ ವಿರುದ್ಧದ ಹಿಂದೂ ಮತಾಂಧರ ದ್ವೇಷ ಪೂರಿತ ಅಪ ಪ್ರಚಾರವನ್ನು ತಡೆಯಲು ಪರಿಣಾಮಕಾರಿ ಕಠಿಣ ಕಾನೂನಿನ ಕ್ರಮ ಕೈಗೊಳ್ಳಬೇಕು.

ಯು. ಬಸವರಾಜ, ಕಾರ್ಯದರ್ಶಿ
(21–04–2020)

ಪೌರಕಾರ್ಮಿಕರ ಮೇಲೆ ಹಲ್ಲೆ ಸಿಐಟಿಯು ಖಂಡನೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಂಗಳೂರು ಮುನಿಸಿಪಾಲಿಟಿಯ 14ನೇ ವಾರ್ಡ್‌ನ ಉಪ್ಪಳ್ಳಿಯಲ್ಲಿ ಪ್ರಾರ್ಥನ ಮಂದಿರದ ಬಳಿ ಕಸದ ಟಿಪ್ಪರ್ ಗಾಡಿಗೆ ಕಸ ತುಂಬುತ್ತಿದ್ದ ಪೌರಕಾರ್ಮಿಕರಾದ ಮಂಜುನಾಥ ಅವರೊಂದಿಗೆ ಕಾರಿನಲ್ಲಿ ಬಂದ ಯುವಕ ಕಾರು ಮುಂದೆ ಸಾಗಲು ಟಿಪ್ಪರನ್ನು ತೆಗೆಯಲು ಒತ್ತಾಯಿಸಿದ್ದಾನೆ. ಎರಡು ನಿಮಿಷ ಕಾಯಿರಿ ಕಸ ಹಾಕಿಕೊಂಡು ಹೋಗುತ್ತೇವೆ ಎಂದಾಗ ಏಕಾಏಕಿ ಅವರ ಮೇಲೆ ತೀವ್ರತರ ಹಲ್ಲೆ ನಡೆಸಿರುವುದು ಅಲ್ಲದೆ ಸಹಾಯಕಿ ಗೀತಾ ಅವರನ್ನು ತಳ್ಳಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಘಟನೆಯನ್ನು ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ ಸಿಐಟಿಯು ತೀವ್ರವಾಗಿ ಖಂಡಿಸಿದೆ. ಈ ಘಟನೆಯಲ್ಲಿ ತಪ್ಪಿತಸ್ಥರನ್ನು ಈ ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

ಕೋಲಾರ ಜಿಲ್ಲೆಯಲ್ಲಿ ಕೋಲಾರ ಮುನಿಸಿಪಾಲಿಟಿಯ 23 ನೇ ವಾರ್ಡಿನಲ್ಲಿ ಯುಜಿಡಿ ಸ್ವಚ್ಛತಾ ಕಾರ್ಮಿಕರ ಜೊತೆ ಜಗಳ ತೆಗೆದಿರುವ ಮಹಿಳಾ ಕೌನ್ಸಿಲರ್ ಪತಿ ಡ್ರೈವರ್ ಮುನಿಯಪ್ಪ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿ ನೂಕಾಟ ತಳ್ಳಾಟ ನಡೆಸಿ ಹಲ್ಲೆಗೆ ಯತ್ನಿಸಿರುವ ಘಟನೆಯನ್ನು ಸಂಘ ಖಂಡಿಸಿದೆ. ಇತ್ತೀಚೆಗೆ ನಾಗರಿಕ ಸೇವೆ ಒದಗಿಸುವ ನೌಕರರ ಮೇಲಿನ ಹಲ್ಲೆಗಳು ಹೆಚ್ಚುತ್ತಿರುವುದು ಖಂಡನಾರ್ಹ ವಿಚಾರವಾಗಿದೆ. ಕೊರೊನದಂತಹ ಮಾರಣಾಂತಿಕ ಕಾಯಿಲೆಯ ವ್ಯಾಪಕ ಕರಾಳತೆಯ ನಡುವೆಯೂ ಕೆಲಸ ನಿರ್ವಹಿಸುವ ಕಾರ್ಮಿಕರ ಮೇಲಿನ ಹಲ್ಲೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವಂತೆ ಸಂಘವು ಆಗ್ರಹಿಸುತ್ತದೆ.

ಈ ನಡುವೆ ಮನೆಮನೆಗೆ ಹಾಲು ವಿತರಿಸುವ ಸಂದರ್ಭದಲ್ಲೂ ಹಾಲು ಸಿಗದೆ ಇರುವ ಕುಟುಂಬಗಳು ವಿವಿಧೆಡೆಯಲ್ಲಿ ವಿತರಣಾ ಕೆಲಸದಲ್ಲಿ ನಿರತರಾಗಿರುವ ಮುನಿಸಿಪಲ್ ಕಾರ್ಮಿಕರ ಮೇಲೆ ಅವಾಚ್ಯ ಶಬ್ದಗಳ ನಿಂದನೆ ನಿರಂತರವಾಗಿ ನಡೆಯುತ್ತಿರುವುದನ್ನು ಸಹ ಸರ್ಕಾರ ಗಮನಿಸುವಂತೆ ಸಂಘ ಒತ್ತಾಯಿಸಿದೆ.

ಸುರಕ್ಷತೆ ಹಾಗೂ ಬಾಕಿ ಸಂಬಳ ನೀಡಲು ಆಗ್ರಹ

ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರವೇ ಸ್ವತಃ ಮುನಿಸಿಪಲ್ ಕಾರ್ಮಿಕರನ್ನು ಬೆಳಗ್ಗೆ 6 ರಿಂದ 10 ಗಂಟೆಯವರೆಗೆ ಮಾತ್ರ ದುಡಿಸಿಕೊಳ್ಳಲಾಗುತ್ತದೆ ಎಂದು ಹೇಳಿದ್ದಾಗ್ಯೂ ಈ ಸಂಬಂಧ ಸುತ್ತೋಲೆಯನ್ನು ಸರ್ಕಾರ ಹೊಡಡಿಸಿದ್ದಾಗ್ಯೂ ರಾಜ್ಯದ ಹಲವು ಕಡೆಗಳಲ್ಲಿ ಇದನ್ನು ಪಾಲಿಸುತ್ತಿಲ್ಲ ಎಂದು ಸಂಘ ಆರೋಪಿಸಿದೆ. ಸುರಕ್ಷತಾ ಸಲಕರಣೆಗಳಾದ ಮಾಸ್ಕ್, ಸ್ಯಾನಿಟೈಜರ್, ಗಮ್ ಬೂಟ್, ಗುರುತಿನ ಚೀಟಿ, ಸಮವಸ್ತ್ರ ಇಲ್ಲದೆ ಮುನಿಸಿಪಲ್ ಕಾರ್ಮಿಕರು ಹಲವೆಡೆ ಸಮಸ್ಯೆಗೆ ಸಿಲುಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕುಡಚಿ ಮಾದರಿಯಲ್ಲಿ ಎಲ್ಲಾ ಪೌರಕಾರ್ಮಿಕರಿಗೂ ಸುರಕ್ಷತಾ ಸೂಟ್ ಸೌಲಭ್ಯವನ್ನು ನೀಡಬೇಕು.ಈ ಬಗ್ಗೆ ಸರ್ಕಾರ ದೃಢವಾದಂತಹ ಕ್ರಮ ಕೈಗೊಳ್ಳುವಂತೆ ಸಂಘ ಆಗ್ರಹಿಸುತ್ತದೆ.

ವಿಜಯಪುರ, ರಾಯಚೂರು ಮತ್ತಿತರ ಕಡೆಗಳಲ್ಲಿ ಆರು ತಿಂಗಳಿಂದ 8 ತಿಂಗಳ ಕಾಲ ವೇತನ ನೀಡದೆ ಬಾಕಿ ಉಳಿಸಿಕೊಳ್ಳಲಾಗಿದೆ. ಪೌರಕಾರ್ಮಿಖರು, ವಾಟರ್‌ಮ್ಯಾನ್‌ಗಳು, ಕಟ್ಟಡ, ಅಟೋ ಚಾಲಕರು ಮತ್ತು ಸಹಾಯಕರು ಯುಜಿಡಿ ಕಾರ್ಮಿಕರಿಗೆ ಬಾಕಿ ಇರುವ ಸಂಬಳವನ್ನು ಈ ಕೂಡಲೇ ನೀಡುವಂತೆ ಸಂಘ ಆಗ್ರಹಿಸಿದೆ.

ಹರೀಶ್ ನಾಯಕ್ ಅಧ್ಯಕ್ಷರು, ಸಿ. ವೆಂಕಟೇಶ್
ಖಜಾಂಚಿ, ಸೈಯದ್ ಮುಜೀಬ್ ಪ್ರಧಾನ
ಕಾರ್ಯದರ್ಶಿ (22-04-2020)

ಪಾದರಾಯನಪುರದ ಪಾಠ

ಇತ್ತೀಚೆಗೆ ಬೆಂಗಳೂರಿನ ಪಾದರಾಯನಪುರದಲ್ಲಿ ಕೆಲವು ಮುಸ್ಲಿಂ ವ್ಯಕ್ತಿಗಳು ನಡೆಸಿದ ದಾಂಧಲೆಯನ್ನು ವಿವೇಕಿಗಳಾರೂ ಒಪ್ಪಲು ಸಾಧ್ಯವಿಲ್ಲ. ತಲ್ಲೀಗ್ ಹಗರಣದ ನಂತರವೂ ಕೆಲವರಿಗೆ ಬುದ್ಧಿ ಬಂದಿಲ್ಲ ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. ಪಾದರಾಯನಪುರದ ನಂತರ ಮೈಸೂರಿನಲ್ಲಿ ಆಶಾ ಕಾರ್ಯಕರ್ತೆಯರ ಮೇಲೆ ಹಲ್ಲೆ ಪ್ರಯತ್ನವಾಗಿದೆ. ಚಿಕ್ಕಮಗಳೂರಿನಲ್ಲಿ ಪಾಪದ ಪೌರಕಾರ್ಮಿಕರ ಮೇಲೆ ಹಲ್ಲೆ ಮಾಡಲಾಗಿದೆ. ಇಂತಹ ಕೃತ್ಯಗಳನ್ನು ಯಾವುದೇ ಜಾತಿ, ಧರ್ಮಗಳ ರಿಯಾಯಿತಿಯಿಲ್ಲದೆ ಬಂಡಾಯ ಸಾಹಿತ್ಯ ಸಂಘಟನೆಯು ಖಂಡಿಸುತ್ತದೆ. ಇದೇ ಸಂದರ್ಭದಲ್ಲಿ, ಪಾದರಾಯನಪುರದ ಘಟನೆಯಿಂದ ಎಲ್ಲ ಧರ್ಮ ಮತ್ತು ಪಕ್ಷೀಯರು ಪಾಠ ಕಲಿಯುವ ಅಗತ್ಯವಿದೆ. ಈ ಒಂದು ಘಟನೆಯಿಂದ ಇಡೀ ಒಂದು ಸಮುದಾಯದ ಬಗ್ಗೆ ದ್ವೇಷವನ್ನು ಪ್ರಚೋದಿಸಬಾರದು ಎಂಬುದು ನಾಗರಿಕ ಸಮಾಜದ ಪ್ರಥಮ ಪಾಠ. ಯಾವುದೇ ರಾಜಕೀಯ ಪಕ್ಷವು ಇಂಥ ಘಟನೆಗಳನ್ನು ಓಟಿನ ನೋಟದಲ್ಲಿ ಗ್ರಹಿಸಬಾರದು ಎಂಬುದು ಎರಡನೇ ಪಾಠ. ಬಹುಮುಖ್ಯವಾಗಿ ಅಲ್ಪಸಂಖ್ಯಾತ ನೇತಾರರು ಕಲಿಯಬೇಕಾದ ಪಾಠವೊಂದಿದೆ. ಈಗ ಬಹುಪಾಲು ಏಕಮುಖೀ ಚರ್ಚೆ-ಚಿಂತನೆಗಳ ಪ್ರಚಾರ ಪ್ರವೃತ್ತಿ ಅಧಿಕವಾಗಿರುವ ಕಾಲದಲ್ಲಿ ನಾವಿದ್ದೇವೆ. ಜನಸಾಮಾನ್ಯರು, ಸಂದರ್ಭಾನುಸಾರ ಸ್ಥೂಲ ತಿಳುವಳಿಕೆಗಳಿಗೆ ತುತ್ತಾಗುತ್ತಿದ್ದಾರೆ. ಅಲ್ಪಸಂಖ್ಯಾತ ವ್ಯಕ್ತಿಗಳು ಅಥವಾ ಗುಂಪಿನ ಕಿಡಿಗೇಡಿ ಕೃತ್ಯಗಳಿಗೆ ಸಾಮುದಾಯಿಕ ಮುದ್ರೆ ಒತ್ತಲು ಕೋಮುವಾದಿಗಳು ಕಾಯುತ್ತ ಕೂತಿರುತ್ತಾರೆ. ಹಾಗಾಗಿ ಪಾದರಾಯನಪುರದ ಘಟನೆಯು ಸಮಾಜಘಾತಕವಷ್ಟೇ ಅಲ್ಲ, ಅಲ್ಪಸಂಖ್ಯಾತರಿಗೆ ಆತ್ಮಘಾತಕವೂ ಆಗುತ್ತದೆ. ಆದ್ದರಿಂದ ಕೋಮುವಾದಿಗಳ ಕೈಗೆ ಬಣ್ಣ ಮತ್ತು ಬ್ರಷ್ ಕೊಡದಂತೆ ವಿವೇಕಯುತ ವಾತಾವರಣವನ್ನು ನಿರ್ಮಿಸುವ ಜವಾಬ್ದಾರಿಯನ್ನು ಅಲ್ಪಸಂಖ್ಯಾತ ನಾಯಕರು ನಿರ್ವಹಿಸಬೇಕಾಗಿದೆ. ಪಾದರಾಯನಪುರದ ಪುಂಡುತನವು ಪ್ರತಿಮಾರೂಪ ತಾಳದಂತೆ ಎಲ್ಲ ವಿವೇಕಿಗಳೂ ಎಚ್ಚರ ವಹಿಸಬೇಕಾಗಿದೆ. ಸರ್ಕಾರವು ಗಲಭೆಕೋರರನ್ನು ಬಂಧಿಸಿರುವ ಸೂಕ್ತ ಕ್ರಮ ಕೈಗೊಂಡಿದ್ದು ಇನ್ನಾದರೂ ಇದಕ್ಕೆ ಧರ್ಮದ್ವೇಷದ ದೃಷ್ಟಿ ಬೆಳೆಯದಂತೆ ಎಲ್ಲ ಪಕ್ಷ ಮತ್ತು ಧರ್ಮದವರೂ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕು. ಧರ್ಮದ್ವೇಷ ಬಿತ್ತುವವರ ವಿರುದ್ಧವೂ ಸೂಕ್ತ ಕ್ರಮ ಕೈಗೊಳ್ಳಬೇಕು. ಕೊರೊನಾ ವಿರುದ್ಧ ಹೋರಾಡುತ್ತಿರುವ ವೈದ್ಯರು, ದಾದಿಯರು, ಆಶಾ ಕಾರ್ಯಕರ್ತೆಯರಾದಿಯಾಗಿ ಎಲ್ಲರಿಗೂ ರಕ್ಷಣೆ ನೀಡುವುದರ ಜೊತೆಗೆ, ವಲಸಿಗರು, ನಿರ್ಗತಿಕರು, ಕೂಲಿಕಾರರೇ ಮುಂತಾದವರ ಬಾಳರಕ್ಷಣೆಗೆ ಸರ್ಕಾರ ಮತ್ತು ಸಮಾಜ ಆದ್ಯತೆ ನೀಡಬೇಕು. ಇದು ನಮ್ಮ ಸಂಘಟನೆಯ ಒತ್ತಾಯ.

– ಬರಗೂರು ರಾಮಚಂದ್ರಪ್ಪ
ಬೆಂಗಳೂರು.

ಜನರ ಕೈಯಲ್ಲಿ ಹಣವಿದ್ದರೆ ಆರ್ಥಿಕ ಧಾಳಿ ಹಿಮ್ಮೆಟ್ಟಿಸಬಹುದು

ಮಾನ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ, ಕಲಬುರಗಿ. (18.4.2020)

ಗ್ರಾಮೀಣ ಪ್ರದೇಶದಲ್ಲಿ ಜನತೆಯು ಆರ್ಥಿಕವಾಗಿ ಬಹಳ ಸಂಕಷ್ಟದಲ್ಲಿರುವರು. ಈಗಾಗಲೇ ನಗರ ಪ್ರದೇಶದಲ್ಲಿರುವವರು ಸಹ ವಾಪಾಸು ಹಳ್ಳಿಗಳಿಗೆ ಹೋಗಿದ್ದಾರೆ. ಪ್ರತಿ ಕುಟುಂಬದಲ್ಲಿ ಆರ್ಥಿಕ ಹೊರೆ ಹೆಚ್ಚಾಗಿದೆ. ಇಂತಹ ಸಮಯದಲ್ಲಿ ಕೊರೊನಾ ವೈರಸ್ ಧಾಳಿಯ ಕಾರಣವಾಗಿ ಲಾಕ್ ಡೌನ್ ಸಹ ಜಾರಿಯಲ್ಲಿದೆ. ತುಂಬ ಮುತುವರ್ಜಿ ಮತ್ತು ಜವಾಬ್ದಾರಿಯಿಂದ ನಾವು ಲಾಕ್ ಡೌನ್ ಪಾಲಿಸಬೇಕಿದೆ. ಗ್ರಾಮಗಳಲ್ಲಿಯೂ ಜನತೆ ಪಾಲಿಸುತ್ತಿದ್ದಾರೆ. ಆದರೆ ಇದೇ ಹೊತ್ತಿನಲ್ಲಿ ಕೃಷಿ ಕೂಲಿಕಾರ್ಮಿಕರು, ಬಡ ರೈತರು, ನಿರುದ್ಯೋಗ ಯುವಜನಾಂಗ ಹೊಟ್ಟೆತುಂಬ ಊಟವೂ ಮಾಡಲಾಗುತ್ತಿಲ್ಲ. ಇದನ್ನು ಅರಿತ ಸರಕಾರವು ಈಗಾಗಲೇ ಮಾರ್ಚ್ ತಿಂಗಳಾಂತ್ಯದಲ್ಲಿ ದಿ.26.3.2020 ರಂದು (ಉಲ್ಲೇಖ: ಗ್ರಾಅಪ:251 ಉಖಾಯೊ 2019) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಯುಕ್ತರ ಮೂಲಕ ಸುತ್ತೋಲೆ ಹೊರಡಿಸಿ ಕೂಡಲೇ ಜನರಿಗೆ ಮರನೇಗಾದಡಿ ಕೆಲಸ ಕೊಡಬೇಕೆಂದು ಆದೇಶಿಸಿದೆ. ಮತ್ತು ದೈಹಿಕ ಅಂತರ ಕಾಪಾಡುತ್ತಲೇ ಮನರೇಗಾದಡಿ ಕೆಲಸ ಮಾಡಿಸುವ ಕುರಿತು ಸಹ ನಿರ್ದೇಶನ ಮಾಡಿದೆ. ಆದರೆ ತಳಹಂತದಲ್ಲಿ ಅಂದರೆ ಗ್ರಾಮ ಮಟ್ಟದಲ್ಲಿ ಮನರೇಗಾದಡಿ ಜನರಿಗೆ ಕೆಲಸ ಕೊಡುವ ಕುರಿತು ಗ್ರಾಮ ಪಂಚಾಯತಗಳಿಗೆ ಒಂದಂಶವೂ ಆಸಕ್ತಿ ಮತ್ತು ಕಾಳಜಿ ಇಲ್ಲವಾಗಿದೆ. ಆದ್ದರಿಂದಲೇ ಅವಶ್ಯಕ ಇರುವವರಿಗಾಗಿ ಕೂಡಲೇ ಎನ್ ಎಂ ಆರ್ ಜನರೇಟ್ ಮಾಡಿ ಕೆಲಸ ಒದಗಿಸುತ್ತಿಲ್ಲ.

ನಮ್ಮ ಆಗ್ರಹವೇನೆಂದರೆ;

ಕೂಡಲೇ ಉದ್ಯೋಗ ಖಾತ್ರಿ ಕೆಲಸ ಆರಂಭಿಸುವ ಮೂಲಕ ಮುಂದೆ ಬರುವ ಆರ್ಥಿಕ ಧಾಳಿಯನ್ನು ಎದುರಿಸಲು ಸಾಧ್ಯ. ಜನರ ಕೈಯಲ್ಲಿ ಹಣವಿದ್ದರೆ ಆರ್ಥಿಕ ಧಾಳಿ ಹಿಮ್ಮೆಟ್ಟಿಸಬಹುದು. ಆದ್ದರಿಂದ ಗ್ರಾಮಗಳಲ್ಲಿರುವ ಜನರ ಕೈಗೆ ಕೆಲಸ ಒದಗಿಸುವುದೆಂದರೆ ಕುಸಿಯುತ್ತಿರುವ ಆರ್ಥಿಕತೆಗೆ ಕೊಂಚವಾದರೂ ಆಸರೆಯಾದಂತೆಯಾಗುವುದು.

ಸರಕಾರವು ಈಗಾಗಲೇ ಹಿಂದೆ ಮಾಡಿದ ಕೆಲಸದ ಬಾಕಿಯನ್ನು ಅನೇಕ ಕಡೆ ಪಾವತಿ ಮಾಡಿಲ್ಲ. ಅಂತಹ ಕಡೆ ಕೂಡಲೇ ಬಾಕಿ ಹಣವನ್ನು ಪಾವತಿ ಮಾಡಬೇಕು. ಹಾಗೂ

1. ಸುತ್ತೋಲೆಯ ಪ್ರಕಾರ ಸರಕಾರದ ಆದೇಶದ ಪ್ರಕಾರ ಕೂಡಲೇ ಉದ್ಯೋಗ ಖಾತ್ರಿ ಕೆಲಸ ಆರಂಭಿಸಬೇಕು. ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಮನರೇಗಾ ಕೆಲಸ ಆರಂಭಿವಾಗಿರುವುದನ್ನು ಗಮನಿಸಬೇಕು.
2. ಇಪ್ಪತ್ತು ಜನರ ಬದಲಿಗೆ ಐದು ಜನರ ತಂಡ ಮಾಡಿ ಸಾಕಷ್ಟು ಅಂತರವಿರುವಂತೆ ನಿಗಾ ವಹಿಸಿ ಕೆಲಸ ಕೊಡಬೇಕು.
3. ಕೆಲಸ ಪ್ರಾರಂಭವಾಗುವ ಮುನ್ನ ಕೋವಿಡ್-19 ರ ಕುರಿತಂತೆ ಜಾಗೃತಿ ಮೂಡಿಸಿಯೇ ಕನಿಷ್ಠ ಮೂರರಿಂದ ಐದು ಫೀಟು ಅಂತರದಲ್ಲಿ ಕೆಲಸ ಕೊಡುವುದು.
4. ಗ್ರಾಮ ಪಂಚಾಯತ್ ಸಿಬ್ಬಂದಿಯೇ ಮನೆ ಮನೆಗೆ ಹೋಗಿ ಕೆಲಸ ಬಯಸುವವರ ಪಟ್ಟಿ ತಂದು ಎನ್ ಎಂ ಆರ್ ಜನರೇಟ್ ಮಾಡಬೇಕು.
5. ಉದ್ಯೋಗ ಚೀಟಿ ಇಲ್ಲದವರಿಗೆ ತುರ್ತಾಗಿ ಒದಗಿಸಬೇಕು ಹಾಗೂ ಅರ್ಜಿ ಸಲ್ಲಿಸಿದ ಕೂಡಲೇ ವಿಳಂಬವಿಲ್ಲದೆ ಕೆಲಸ ಒದಗಿಸಬೇಕೆಂದು ಎಂಬುದು ಸರಕಾರವೇ ಸುತ್ತೋಲೆಯಲ್ಲಿ ಸೂಚಿಸಿದ್ದನ್ನು ಜಾರಿ ಮಾಡಬೇಕು.
6. ಕೆಲಸಗಾರರಿಗೆ ಮುಖಗವಸು ಕಡ್ಡಾಯ ಗೊಳಿಸಬೇಕು. ಹಾಗೂ ಸರಕಾರವೇ ಹೇಳಿದಂತೆ ಕೆಲಸದ ಸ್ಥಳದಲ್ಲಿ ಕೈ ತೊಳೆದುಕೊಳ್ಳಲು ಸಾಬೂನು ಮತ್ತು ನೀರಿನ ವ್ಯವಸ್ಥೆ ಮಾಡಬೇಕು. ಹಾಗೂ ಈಗಾಗಲೇ ಕೆಲಸದ ಸ್ಥಳದಲ್ಲಿರಬೇಕಾದ ಸೌಕರ್ಯಗಳನ್ನು ಚಾಚೂ ತಪ್ಪದೆ ಒದಗಿಸಬೇಕು.
7. ಕೂಲಿಕಾರ್ಮಿಕರಲ್ಲಿ ಆರೋಗ್ಯದ ಕುರಿತು ಗ್ರಾಮ ಪಂಚಾಯತ್ ನಿಗಾ ವಹಿಸಬೇಕು.
8. ಇದನ್ನೆಲ್ಲ ಜಾರಿ ಮಾಡಲಿಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿಯೂ ಕೊರೊನಾ ಸೈನಿಕರನ್ನು ಗುರುತಿಸಿ ಮನರೇಗಾಕ್ಕಾಗಿಯೇ ಜಾಗೃತಿ ಅಭಿಯಾನ ತೀವ್ರಗೊಳಿಸಬೇಕು.
9. ಸರಕಾರವು ನೂರು ದಿನಗಳ ಕೂಲಿ ಹಣವನ್ನು ಮುಂಚಿತವಾಗಿಯೇ ಪಾವತಿಸಿ ಮುಂದಕ್ಕೆ ಕೆಲಸ ಮಾಡಿಸಿಕೊಳ್ಳಬೇಕು. ಇದರಿಂದ ಹೊಟ್ಟೆ ತುಂಬ ಊಟವಾದರೂ ಮಾಡಲೂ ಸಾಧ್ಯವಾಗುವುದು. ಗ್ರಾಮೀಣ ಜನರ ಕೈಯಲ್ಲಿ ಹಣವೇ ಇಲ್ಲವಾಗಿದೆ.

ಮೇಲಿನ ಎಲ್ಲ ಹಕ್ಕೊತ್ತಾಯಗಳನ್ನು ಜಿಲ್ಲಾ ಪಂಚಾಯತ್ತು ಕೂಡಲೇ ಜಾರಿ ಮಾಡಬೇಕೆಂದು ಆಗ್ರಹಿಸುತ್ತೇವೆ.

ಕೆ ನೀಲಾ, *ರಾಜ್ಯ ಉಪಾಧ್ಯಕ್ಷೆ, ಜೆಎಂಎಸ್ ಮತ್ತು ಉಖಾಕಾಸ,*
ಡಾ. ಪ್ರಭು ಖಾನಾಪುರೆ, *ಪ್ರಜ್ಞಾ ಕಾನೂನು ಸಲಹಾ ಸಮಿತಿ,*
ಕಲ್ಯಾಣಿ ತುಕ್ಕಾಣಿ, *ಉದ್ಯೋಗ ಖಾತ್ರಿ ಕಾಯಕ ಜೀವಿಗಳ ಸಂಘಟನೆ,*
ಅಮೀನಾ ಬೇಗಂ, *ಜಿಲ್ಲಾ ಅಧ್ಯಕ್ಷೆ, ಜೆಎಂಎಸ್.*



ಹೆಣ ರಾಜಕೀಯ

ಕೊರೋನ ಪೀಡಿತ ವೃದ್ದೆಯ ಶವ ದಹನಕ್ಕೆ ಅವಕಾಶ ನೀಡಬಾರದು ಎಂದು ಪಚ್ಚನಾಡಿ ಸ್ಮಶಾನದಲ್ಲಿ ಗುಂಪು ಸೇರಿದವರಲ್ಲಿ ಸಂಘಪರಿವಾರದ (ಹಿಂದುತ್ವ !) ಸಂಘಟನೆಗಳ ಸ್ಥಳೀಯ ಕಾರ್ಯಕರ್ತರು ಮುಂಚೂಣಿಯಲ್ಲಿದ್ದರು ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಮಂಗಳೂರಿನ ಎಲ್ಲಾ ಸ್ಮಶಾನಗಳ ಸಮೀಪ ನಿನ್ನೆ ರಾತ್ರಿ ಜನ ಗುಂಪು ಸೇರಿದ್ದರು. ಈ ರೀತಿ ವ್ಯವಸ್ಥಿತವಾಗಿ ಜನ ಸೇರಿಸಿದ್ದು ಯಾಕೆ? ಮಂಗಳೂರಿನ ಎಲ್ಲೆಡೆ ಪ್ರಬಲ ಜಾಲ ಹೊಂದಿರುವ, ಯುವಜನರ ಮೇಲೆ ಉಕ್ಕಿನ ಹಿಡಿತ ಹೊಂದಿರುವ ಸಂಘದ ಸಾಮೂಹಿಕ ಸಂಘಟನೆಗಳ ಬೆಂಬಲ ಇಲ್ಲದೆ ಈ ರೀತಿ ಲಾಕ್ ಡೌನ್ ಉಲ್ಲಂಘಿಸಿ ಜನ ಸೇರಲು ಸಾಧ್ಯವೆ ? ಬಿಜೆಪಿಯ ಹಿಂದುತ್ವದ ರಾಜಕಾರಣ ಇಷ್ಟು ಟೊಳ್ಳೆ ! ಅಥವಾ, ದಶಕಗಳಿಂದ ನಡೆಸಿಕೊಂಡು ಬಂದ ದ್ವೇಷದ ರಾಜಕಾರಣ ಜನರ ಮನಸ್ಸನ್ನು ಇಷ್ಟು ಬರಡಾಗಿಸಿತೆ? ಏನೇ ಆದರೂ, ಜನರಿಗೆ ಮನವರಿಕೆ ಮಾಡಿಕೊಡಲು ಯತ್ನಿಸದ, ಸ್ವತಹ ಇವರ ಜನಪ್ರತಿನಿಧಿಗಳೇ "ಹೆಣ ಸುಡಲು ಅವಕಾಶ ನೀಡಲಾರೆವು" ಎಂದು ಅಬ್ಬರಿಸಿದ್ದಂತೂ ತುಳುನಾಡಿನ ಇತಿಹಾಸದ ಕರಾಳ ಅಧ್ಯಾಯ. ಈ ಮಟ್ಟಿಗಿನ ಹೆಣ ರಾಜಕೀಯ ಮುಂದಕ್ಕೆ ಬಿಜೆಪಿಯ ಪಾಲಿಗೆ ಅತಿ ದುಬಾರಿಯಾಗುವುದು ಖಂಡಿತ.

* ಎಪ್ರಿಲ್ 20, 5 ಗಂಟೆ ಸಂಜೆ

"ಕೊರೋನ ಪೀಡಿತರ ಅಂತ್ಯ ಸಂಸ್ಕಾರಕ್ಕೆ ನನ್ನ ಫಾರ್ಮ್ ಹೌಸ್ ಬಳಸಿ" ಎಂದು ಬಂಟ್ವಾಳ ಬಿಜೆಪಿ ಶಾಸಕ ರಾಜೇಶ್ ನಾಯ್ಕ್ ಹೇಳಿದ್ದಾರೆ ಎಂದು ಕೆಲವರು ಅವರನ್ನು ಸಿಕ್ಕಾಪಟ್ಟೆ ಹೊಗಳುತ್ತಿದ್ದಾರೆ. ನನ್ನ ಮಟ್ಟಿಗೆ ಇದು ಸರಿಯಾದ ನಡೆ ಅಲ್ಲ. ಕೊರೋನ ಪೀಡಿತರ ಅಂತ್ಯಸಂಸ್ಕಾರದಿಂದ (ಕ್ರಮ ಬದ್ದ) ಕೊರೋನ ಹರಡುವುದಿಲ್ಲ ಎಂದಾದ ಮೇಲೆ, ಶವ ಸಂಸ್ಕಾರಕ್ಕೆ ಸಾರ್ವಜನಿಕ ಸ್ಮಶಾನಗಳಲ್ಲಿ ಅಡ್ಡಿ ಉಂಟಾಗಬಾರದು. ಆ ರೀತಿ ಖಾತರಿ ಪಡಿಸುವುವುದು ಜಿಲ್ಲಾಡಳಿತದ ಜಬಾಬ್ದಾರಿ. ಆಡಳಿತ ಪಕ್ಷದ ಶಾಸಕ ಜಿಲ್ಲಾಡಳಿತದ ಪ್ರಧಾನ ಭಾಗ. ಜನರಲ್ಲಿರುವ ತಪ್ಪು ತಿಳುವಳಿಕೆ ಹೋಗಲಾಡಿಸುವುದು, ನಿಯಮಗಳನ್ನು ಜಾರಿಗೊಳಿಸುವುದು, ಮೃತ ದೇಹಕ್ಕೆ ಗೌರವ ಪೂರ್ವಕ ಅಂತ್ಯ ಸಂಸ್ಕಾರಕ್ಕೆ ಏರ್ಪಾಡು ಮಾಡುವುದು ಅವರ ಕರ್ತವ್ಯ.ಅಂತಹ ವ್ಯವಸ್ಥೆಗೆ ಬಿಜೆಪಿ ಪಕ್ಷದ ಸಹ ಶಾಸಕರುಗಳೇ ಅಡ್ಡಿ ಪಡಿಸುತ್ತಿರುವಾಗ, ಬಂಟ್ವಾಳದ ರಾಜೇಶ್ ನಾಯ್ಕರು ಈ ರೀತಿ ಭಾವುಕ ಮಾತುಗಳನ್ನು ಆಡಿ ಜನರ ಕಣ್ಣಂಚು ಒದ್ದೆ ಮಾಡುವುದು ಕರ್ತವ್ಯ ನಿರ್ವಹಣೆ ಅಲ್ಲ. ರಾಜೇಶ್ ನಾಯ್ಕರ ಕಾಳಜಿ ನೈಜವಾದದ್ದಾದರೆ ಸ್ವಪಕ್ಷದ ನಾಯಕರ ಅತಿರೇಕಗಳನ್ನು ಖಂಡಿಸಲಿ. ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಆಗ್ರಹಿಸಲಿ.

* ಎಪ್ರಿಲ್ 20, 8 ಗಂಟೆ ಸಂಜೆ

– ಮುನೀರ್ ಕಾಟಿಪಳ್ಳ

ಪಾಲಿಕೆಯ ಬಜೆಟ್ ಕೊರೋನಾ ಪೀಡೆಯ ಕಡೆಗಣನೆ–ಜನವಾದಿ ಖಂಡನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಜೆಟ್ ಮಂಡನೆಯಾಗಿದೆ. ಯಥಾಪ್ರಕಾರ ಮುಂಬರುವ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮಂಡಿಸಿದ ಬಜೆಟ್ ಎನ್ನುವುದು ಮೇಲ್ನೋಟಕ್ಕೇ ಕಾಣುತ್ತಿದೆ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸುತ್ತದೆ.

ಮಹಿಳೆಯರ ಸಲುವಾಗಿ ಪ್ರತಿವಾರ್ಡಿಗೆ ತಲಾ ಐದು ಲಕ್ಷ ವಿಶೇಷ ಅನುದಾನ ಹಂಚಿಕೆ ಮಾಡಲಾಗಿದೆ. ಅದಕ್ಕಾಗಿ 9.90 ಕೋಟಿ ಮೀಸಲಿಡಲಾಗಿದೆ. ಆದರೆ ಹಣ ಹಂಚಿಕೆಗೆ ಮಾನದಂಡವಿಲ್ಲ. ನಿರ್ದಿಷ್ಟ ಕಾರ್ಯಕ್ರಮಗಳಿಲ್ಲ. ಇದು ನಾಳೆ ಎಲ್ಲಿ ಹೇಗೆ ವೆಚ್ಚವಾಗುತ್ತದೆ ಎಂಬ ಖಚಿತ ಮಾಹಿತಿಗಳೂ ಇಲ್ಲ. ಇದಾವ ರೀತಿಯ ಮಹಿಳಾಪರತೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಪ್ರಶ್ನೆ ಮಾಡುತ್ತದೆ.

ಕೊವಿಡ್ 19ರ ಸಂದರ್ಭದಲ್ಲಿ ಕೊವಿಡ್ ವಾರಿಯರ್ಸ್ ಆಗಿ ಕೆಲಸ ನಿರ್ವಹಿಸುತ್ತಿರುವ ಜನವಾದಿಯ ಕಾರ್ಯಕರ್ತರ ನೆಲದ ಅನುಭವದಂತೆ ಮನೆಗೆಲಸದ ಮಹಿಳೆಯರು, ಬೀದಿ ಬದಿ ವ್ಯಾಪಾರಿಗಳು, ಮತ್ತಿತರ ಅಸಂಘಟಿತ ವಲಯದ ಕೆಲಸಗಾರರು, ಪೌರ ಕಾರ್ಮಿಕರು ಅತೀವ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರಿಗೆ ನೆರವಾಗಲು ಮಹಾನಗರ ಪಾಲಿಕೆಗೆ ಒತ್ತಾಯಿಸುತ್ತೇವೆ.

ಮಹಾ ನಗರ ಪಾಲಿಕೆ ಮಹಿಳೆಯರ ಸಲುವಾಗಿ ಮೀಸಲಿಟ್ಟ ಹಣವನ್ನು ಕೊವಿಡ್ ನಿಂದ ಕೆಲಸವಿಲ್ಲದೇ ಮನೆಯಲ್ಲಿದ್ದು ಸಂಬಳ ಸಿಗಲಾರದ ಸ್ಥಿತಿಗೆ ನೂಕಲ್ಪಟ್ಟ ಮನೆಗೆಲಸದ ಮಹಿಳೆಯರು, ಬೀದಿ ಬದಿ ವ್ಯಾಪಾರದಲ್ಲಿ ತೊಡಗಿರುವ ಮಹಿಳೆಯರು, ಇವರುಗಳಿಗೆ ಕನಿಷ್ಟ ಜೀವನ ನಿರ್ವಹಣೆಗೆ ಅಗತ್ಯವಾದ ನಗದು ಹಣವನ್ನು ವರ್ಗಾವಣೆ ಮಾಡಿ ಅವರ ಬದುಕಿಗೆ ಆಧಾರ ಒದಗಿಸಬೇಕೆಂದು ಒತ್ತಾಯಿಸುತ್ತೇವೆ.

ಕರ್ನಾಟಕದಲ್ಲಿ ಈ ಕ್ಷಣದ ವರೆಗೆ ಬೆಂಗಳೂರು ಕೋವಿಡ್ ಪೀಡನೆಗೆ ಹೆಚ್ಚು ಒಳಗಾಗಿರುವ ಜಿಲ್ಲೆ. ಅದನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ ವಲಯಕ್ಕೆ ಹೆಚ್ಚು ಗಮನ ಕೊಡಬೇಕಾದ ಅಗತ್ಯವಿತ್ತು. ಅಲ್ಲದೇ ಕೋವಿಡ್ 19 ರ ಪರಿಣಾಮ ಇನ್ನೂ ಸಾಕಷ್ಟು ಕಾಲ ಉಳಿದಿರುತ್ತದೆ ಎಂಬುದು ತಜ್ಞರ ಅಭಿಮತ, ಹಾಗೆಂದರೆ ಪಾಲಿಕೆಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ, ಈ ಕ್ಷಣಕ್ಕೆ ಅಗತ್ಯ ಮೂಲಸೌಲಭ್ಯಗಳಿಗಾಗಿ, ಕಾರ್ಪೊರೇಷನ್ ವಾರ್ಡ್‌ಗಳ ಸುಸ್ಥಿತಿಗಾಗಿ ಆಲೋಚನೆ ಮಾಡುವ ಅಗತ್ಯವಿತ್ತು. ಆದರೆ ಬಜೆಟ್ ನ ಕೇವಲ 1% ಆರೋಗ್ಯಕ್ಕೆ ಮೀಸಲಿಡಲಾಗಿದೆ. ಇದು ಮಹಾನಗರ ಪಾಲಿಕೆಗೆ ನಗರದ ಜನರ ಆರೋಗ್ಯದ ಬಗ್ಗೆ ಯಾವುದೇ ಆಸಕ್ತಿ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದೆ.

ದೆಹಲಿ ಮಾದರಿಯಲ್ಲಿ ಉಚಿತ ನೀರು ಪೂರೈಕೆಗೆ ಹೊರಟಿರುವ ಬಿ.ಬಿ.ಎಂ.ಪಿಗೆ ಕನಿಷ್ಟ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದ ಎಷ್ಟೋ ಪ್ರದೇಶಗಳು ತಮ್ಮ ವ್ಯಾಪ್ತಿಯಲ್ಲಿ ಇದೆ ಎಂಬ ಕನಿಷ್ಟ ಪರಿಜ್ಞಾನವೂ ಇಲ್ಲ ಎಂಬುದು ಸಾಬೀತಾಗಿದೆ.

ಅನಂತ್ ಕುಮಾರ್ ಹೆಸರಿನಲ್ಲಿ ಉಚಿತ ಲ್ಯಾಪ್‌ಟಾಪ್ ವಿತರಣೆ ಮಾಡುವ ಪ್ರಸ್ತಾಪವಿಟ್ಟು ವಾರ್ಡಿಗೆ 15 ಲ್ಯಾಪ್‌ಟಾಪ್ ಹಂಚಿಕೆ ಮಾಡುವುದಾಗಿ ಹೇಳಿದೆ. ಇದೂ ಕೂಡ ಮೂಗಿಗೆ ಸವರುವ ತುಪ್ಪವಾಗಿದೆ.

ವಾರ್ಡ್‌ಗಳ ಅಭಿವೃದ್ಧಿಯ 2 ಕೋಟಿಯಲ್ಲಿ 25 ಲಕ್ಷ ಮುಖ್ಯಮಂತ್ರಿ ಪರಿಹಾರ ನಿಧಿಗೆ ಕೊಡುವ ಪ್ರಸ್ತಾಪವಿದೆ. ಬೆಂಗಳೂರು ನಗರಗಳ ಹಲವಾರು ವಾರ್ಡ್‌ಗಳು ಅಭಿವೃದ್ಧಿಯ ಹೆಸರೇ ಕೇಳದಂತೆ ಇವೆ. ಅಂಥಾದ್ದರಲ್ಲಿ ಮಹಾನಗರ ಪಾಲಿಕೆ ಇರುವ ಹಣವನ್ನೂ ಮುಖ್ಯಮಂತ್ರಿಗಳ ನಿಧಿಗೆ ಕೊಡಬೇಕಾದ ಅಗತ್ಯವೇನಿತ್ತು ಎಂಬುದು ನಮ್ಮ ಪ್ರಶ್ನೆಯಾಗಿದೆ.

ಈ ಹಿನ್ನೆಲೆಯಲ್ಲಿ ಮಂಡನೆಯಾದ ಬಜೆಟ್‌ನಲ್ಲಿ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿ ಅಂಗೀಕರಿಸಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಒತ್ತಾಯಿಸುತ್ತದೆ. ನಗರವನ್ನು ಸುಸ್ಥಿತಿಯಲ್ಲಿಡುವ ಹೊಣೆಗಾರಿಕೆಯ ಮಹಾನಗರ ಪಾಲಿಕೆ ಬಜೆಟ್‌ನಲ್ಲಿ ಅದನ್ನು ತೋರಿಸಿಕೊಡಬೇಕೆಂದು ಒತ್ತಾಯಿಸಿದೆ.

ಗೌರಮ್ಮ ಪ್ರಧಾನ ಕಾರ್ಯದರ್ಶಿ, ಲಲಿತಾ ರತ್ನಾಕರ್ ಜಿಲ್ಲಾ ಕಾಯದರ್ಶಿ, ಬಸಮ್ಮ ಸಂಚಾಲಕರು



ಕಾ. ಆರ್. ಶ್ರೀನಿವಾಸ್ ರವರ ಪತ್ನಿ ರಾಜೇಶ್ವರಿ ನಿಧನ

ಸಿಪಿಐ(ಎಂ) ನ ಉತ್ತರ ಜಿಲ್ಲಾ ಕಾರ್ಯದರ್ಶಿ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು, ಸಿಐಟಿಯು ರಾಜ್ಯ ಸಮಿತಿ ಸದಸ್ಯರಾದ ಕಾಂ. ಆರ್.ಎಸ್. ಎಂದೇ ಚಿರ ಪರಿಚಿತರಾದ ಕಾಂ. ಆರ್.ಎಸ್. ರವರ ಪತ್ನಿ 23 ಏಪ್ರೀಲ್ 2020 ರಂದು ಬೆಳಿಗ್ಗೆ 5.45 ಕ್ಕೆ ಮಯ್ಯ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 60 ವರ್ಷ ವಯಸ್ಸು. ಕಾಂ. ಆರ್.ಎಸ್. ರವರನ್ನು 25–05–1986 ರಲ್ಲಿ ಮದುವೆಯಾಗಿ ಬಂದಂದಿನಿಂದ ಮೂರು ಮಕ್ಕಳಿಗೆ ತಾಯಿಯಾಗಿ ಆರ್.ಎಸ್. ರ ಸಂಘಟನೆಯ ಕೆಲಸಗಳಿಗೆ ಒತ್ತಾಸೆಯಾಗಿ ಸಂಸಾರದ ಜವಾಬ್ದಾರಿ ಹೊತ್ತ ಮಹಿಳೆ. ಬಿಪಿಎಲ್ ಹೋರಾಟದಲ್ಲಿ ಕಾಂ. ಆರ್.ಎಸ್. ರವರು ಮಾಲೀಕರ ಕುತಂತ್ರದಿಂದ 1999 ಮಾರ್ಚ್‌ನಲ್ಲಿ ಜೈಲು ಸೇರಿದಂದಿನಿಂದ 2016 ಆಗಸ್ಟ್ ನಲ್ಲಿ ಅವರ ಬಿಡುಗಡೆಯಾಗುವವರೆವಿಗೂ ಇಡಿ ಸಂಸಾರದ ಜವಾಬ್ದಾರಿ ಹೊತ್ತು ಧೃತಿಗೆಡದೆ ಎಲ್ಲರಿಗೂ ಧೈರ್ಯ ಹೇಳಿದಂತವರು. ಸಂಘಟನೆಯಲ್ಲಿರುವ ಸಂಗಾತಿಗಳೂ ಯಾರೇ ಅವರ ಮನೆಗೆ ಹೋದರೂ, ಕಾಂ. ಆರ್.ಎಸ್. ರವರ ಅನುಪಸ್ಥಿತಿಯಲ್ಲಿಯೂ ಸಹ ಪ್ರೀತಿ ವಿಶ್ವಾಸದಿಂದ ಮಾತನಾಡಿಸಿ ಊಟ ಅಥವಾ ತಿಂಡಿ ತಿನ್ನದೆ ಕಳುಹಿಸುತ್ತಿರಲಿಲ್ಲ. ಅಂತಹ ಮಮತಾಮಯಿ ಕಾಂ. ರಾಜೇಶ್ವರಿ ಎಂದರೂ ತಪ್ಪಾಗಲಿಕ್ಕಿಲ್ಲ ಕಾಂ. ಆರ್.ಎಸ್. ನಿಧನಕ್ಕಿಂತ ಮೊದಲೇ ಅವರಿಗೆ ಕ್ಯಾನ್ಸರ್ ಖಾಯಿಲೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಕಾಲ ಕಾಲಕ್ಕೆ ಆಸ್ಪತ್ರೆಗೆ ತೋರಿಸಿದರೂ ಸಹ ವಾಸಿಯಾಗದೆ ಆ ಖಾಯಿಲೆ ಅವರ ಜೀವವನ್ನು ನುಂಗಿ ಹಾಕಿತು. ಕಡೆಯ 5 ದಿನಗಳು ಆಸ್ಪತ್ರೆಯಲ್ಲಿ ಜೀವನ್ಮರಣದ ಹೋರಾಟ ನಡೆಸಿ ಕಾಲನ ಕರೆಗೆ ಓಗೊಟ್ಟರು, ಕಾಂ ಆರ್. ಎಸ್. ನಿಧನರಾದ 6 ತಿಂಗಳಿಗೆ ತಾಯಿಯನ್ನು ಸಹಾ ಕಳೆದುಕೊಂಡ ಮಕ್ಕಳು ಇಂದು ಅಕ್ಷರಶಃ ಅನಾಥರಾಗಿದ್ದಾರೆ ಎಂದರೂ ತಪ್ಪಾಗಲಿಕ್ಕಿಲ್ಲ ಒಂದು ಅರ್ಥದಲ್ಲಿ ನಾವುಗಳು ಸಹ ಅಂತಹ ಮಮತಾಮಯಿಯನ್ನು ಕಳೆದುಕೊಂಡಿದ್ದೇವೆ. ಇನ್ನು ಅವರು ಬರಿಯ ನೆನಪು ಅಷ್ಟೆ.

ಕೊರೊನಾ ಬಾಧೆ ಹರಡಿದ ಕಾರಣದಿಂದ ಲೋಕ್ ಡೌನ್ ಘೋಷಿಸಿದ್ದರ ಪರಿಣಾಮವಾಗಿ ವ್ಯಾಪಾರ ವಹಿವಾಟು ಸಂಪೂರ್ಣ ಸ್ಥಗಿತವಾಗಿದೆ ಕೊಡಗಿನಲ್ಲಿ ವಿವಿಧ ವಿಭಾಗಗಳಿಗೆ ಸೇರಿದ ಕಾರ್ಮಿಕರು, ರೈತರು, ಸಣ್ಣ ಮಧ್ಯಮ ವ್ಯಾಪಾರಿಗಳು ಎಲ್ಲರೂ ಆರ್ಥಿಕ ಸಂಕಷ್ಟವನ್ನೊಳಗೊಂಡು ಹಲವು ರೀತಿಯ ಸಂಕಷ್ಟಗಳಿಗೆ ಒಳಗಾಗಿದ್ದಾರೆ

ಕೊಡಗು ಜಿಲ್ಲೆಯ
ಮಾನ್ಯ ತಹಸೀಲ್ದಾರ್‌ರವರ ಮೂಲಕ

ಮಾನ್ಯ ಮುಖ್ಯ ಮಂತ್ರಿಯವರಿಗೆ,
ಕರ್ನಾಟಕ..

ಆಶಾ ಕಾರ್ಯಕರ್ತೆಯರು, ತೋಟ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಪಂಚಾಯತ್ ನೌಕರರು, ಆಸ್ಪತ್ರೆಯಲ್ಲಿ ಸ್ವಚ್ಛತೆಯ ಕೆಲಸ ಮಾಡುವವರು, ಅಂಗನವಾಡಿ ಕಾರ್ಯಕರ್ತೆಯರು, ಬಿಸಿ ಊಟ ತಯಾರಿಸುವವರು, ಕೃಷಿ ಕೂಲಿಗಾರರು ಮಾತ್ರವಲ್ಲದೆ ಬೀದಿ ಬದಿಗಳಲ್ಲಿ ವ್ಯಾಪಾರ ಮಾಡುವವರು, ಸಣ್ಣ– ಮಧ್ಯಮ ವ್ಯಾಪಾರಿಗಳು, ಕ್ಷೌರಿಕರು, ಡೋಬಿಯವವರು,ಆಟೋ ರೀಕ್ಷ ಓಡಿಸುವವರು, ಕಾರು ಚಾಲಕರು,ಪ್ರೆಸ್ ಕೆಲಸಗಾರರು,ಮನೆ ಕೆಲಸ ಮಾಡುವವರು, ಮೆಕಾನಿಕ್ ಗಳು,ದರ್ಜಿಗಳು,ಪ್ರೆಸ್ ಕೆಲಸಗಾರರು – ಎಲ್ಲರೂ ಕೆಲಸವಿಲ್ಲದೆ, ಸಂಪಾದನೆ ಇಲ್ಲದೆ ದೈನಂದಿನ ಜೀವನ ನಿರ್ವಹಣೆಯೂ ಕಷ್ಟಕರವಾಗಿ ಬಳಲಿ ಹೋಗಿದ್ದಾರೆ ಇವರೆಲ್ಲರೂ ದಿನ ದಿನ ದುಡಿದು ಜೀವಿಸುವವರಾಗಿದ್ದಾರೆ. ಬುಡಕಟ್ಟು ಜನರೂ ಕೆಲಸವಿಲ್ಲದೆ, ಎಲ್ಲಿಗೂ ಹೋಗಲು ಸಾಧ್ಯವಿಲ್ಲದೆ ಕಷ್ಟದಲ್ಲಿದ್ದಾರೆ. ಕೆಲವು ಬೆಳೆಗಳು ಕೊಯ್ಯುವ ಸ್ಥಿತಿಗೆ ಬಂದಿದ್ದು ಮಾರುಕಟ್ಟೆಗೆ ಕೊಂಡೊಯ್ಯಲು ಸಾಧ್ಯವಾಗದೆ, ಬೆಲೆ ಇಲ್ಲದಾಗಿ ರೈತರು ಬೆಳೆಗಳನ್ನು ನಾಶ ಮಾಡುತಿದ್ದಾರೆ.. (ಕಾಯಿ ಮೆಣಸು, ಚೆಂಡು ಹೂ. ಇತ್ಯಾದಿ)

ಕಟ್ಟಡ ಕಾರ್ಮಿಕರು ದಿನ ದಿನ ದುಡಿದು ಕುಟುಂಬ ನಿರ್ವಹಣೆ ಮಾಡುವವರಾಗಿದ್ದಾರೆ. ಸರಕಾರ ಈಗ 2000 ರೂ ಕೊಡುತ್ತಿದ್ದು ಅದು ಏನೇನೂ ಸಾಲದು ತೋಟಗಳಲ್ಲಿ ದುಡಿಯುವವರು ದೂರದೂರಗಳಲ್ಲಿ ವಾಹನಗಳಲ್ಲಿ ಕೆಲಸಕ್ಕೆ ಹೋಗುತ್ತಿದ್ದರು.ಈಗ ವಾಹನ ಸಂಚಾರದ ಮೇಲಿನ ನಿರ್ಬಂಧದಿಂದ ತಾವು ಕೆಲಸ ಮಾಡುವಲ್ಲಿಗೆ ಹೋಗಲು ಸಾಧ್ಯವಾಗದೆ ದುಡಿಮೆ ಇಲ್ಲದಾಗಿದ್ದಾರೆ. ಇತರರೂ ಕೆಲಸವಿಲ್ಲದಾಗಿದ್ದಾರೆ. ಹಮಾಲಿ ಕಾರ್ಮಿಕರು ಅಂಗಡಿ, ಗೋಡೌನ್ ಗಳಲ್ಲಿ ಸರಕುಗಳನ್ನು ಇಳಿಸುವ, ಮೇಲಿಡುವ ಕೆಲಸವನ್ನು ಮಾಡಿ ಜೀವಿಸುತ್ತಿದ್ದವರು. ಸರಕಾರೀ ಆಸ್ಪತ್ರೆಗಳಲ್ಲಿ ಸ್ವಚ್ಛತೆಯನ್ನು ಮಾಡುವ ಸಿಬ್ಬಂಧಿಯವರನ್ನು ಡಿ.ಗ್ರೂಪ್ ನೌಕರರೆಂದು ಪರಿಗಣಿಸಬೇಕು. ಆದರೆ ಆ ಉದ್ಯೋಗವನ್ನು ಸರಕಾರ ಗುತ್ತಿಗೆಗೆ ಕೊಟ್ಟದ್ದರಿಂದ ಈ ಕೆಲಸಗಾರರು ಗುತ್ತಿಗೆದಾರರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಅವರು ದೂರ ದೂರದಲ್ಲಿ ವಾಸಿಸುತ್ತಿರುವುದರಿಂದ ತಾವು ಕೆಲಸ ಮಾಡುವಲ್ಲಿಗೆ ತಲುಪಲು ಬಸ್ ನಲ್ಲಿ ಬರುತ್ತಿದ್ದರು. ಈಗ ಬಸ್‌ಗಳು ಓಡುತ್ತಿಲ್ಲವಾದ್ದರಿಂದ ಕೆಲಸಕ್ಕೆ ಹೋಗಲು ಕಷ್ಟವಾಗುತ್ತಿದೆ. ಕೆಲಸಕ್ಕೆ ಬರದಿದ್ದರೆ ಗುತ್ತಿಗೆದಾದರು ಸಂಬಳ ಕೊಡುವುದಿಲ್ಲ.; ಇಂದಿನ ಪರಿಸ್ಥಿತಿಯಲ್ಲಿ ಸ್ವಚ್ಛತೆಗೆ ವಿಶೇಷ ಗಮನ ಕೊಡಬೇಕಾಗಿರುವುದರಿಂದ ಇವರಿಗೆ ಕೆಲಸ ಹೆಚ್ಚಾಗಿದೆ. ಆದರೆ ಇವರಿಗೆ ಕೊಡುತ್ತಿರುವ ತುಚ್ಛ ಸಂಬಳವನ್ನೂ ಕ್ಲಪ್ತಕಾಲದಲ್ಲಿ ಕೊಡುತ್ತಿಲ್ಲ. ಇವರಿಗೆ ಕೊಡುತ್ತಿದ್ದ ರಜೆಯನ್ನೂ ಕಡಿತಗೊಳಿಸಿದ್ದಾರೆ. ಇಂದಿನ ಸಂದರ್ಭದ ಲಾಭ ಪಡೆದು ಇವರನ್ನು ಶೋಷಿಸುವುದು ಹೆಚ್ಚಾಗಿದೆ.

ಬಿಸಿ ಊಟ ತಯಾರಕರಿಗೆ ಕೊಡುವ ಸಂಬಳ ಅತ್ಯಂತ ತುಚ್ಛವಾಗಿದೆ (ಮುಖ್ಯ ಅಡಿಗೆಯವರಿಗೆ ತಿಂಗಳಿಗೆ 2700 ಮತ್ತು ಸಹಾಯಕರಿಗೆ 2,600 ರೂ) ಅದನ್ನೂ ಕ್ಲಪ್ತಕಾಲದಲ್ಲೆ ಕೊಡುವುದಿಲ್ಲ, ವರ್ಷದಲ್ಲಿ ಎರಡು ತಿಂಗಳ ಕಾಲ ಶಾಲೆಗಳಿಗೆ ರಜೆ ಇರುವಾಗ ಆ ತಿಂಗಳುಗಳಿಗೆ ಅವರಿಗೆ ಸಂಬಳ ಕೊಡುವುದಿಲ್ಲ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು ದಿನದಲ್ಲಿ ಹಲವಾರು ಕೆಲಸಗಳನ್ನು ಮಾಡಬೇಕು. ಗರ್ಭಿಣಿಯರಿಗೆ, ಬಾಣಂತಿಯರಿಗೆ ಪೌಷ್ಠಿಕ ಆಹಾರ ತಲುಪಿಸಬೇಕು, ಶಾಲೆಗಳಿಗೆ ರಜೆಯಾದ್ದರಿಂದ ಮಕ್ಕಳಿಗೆ ಬರುವ ಆಹಾರವನ್ನು ಅವರ ಮನೆಗಳಿಗೆ ತಲುಪಿಸಬೇಕು. ಈಗ ಇವರುಗಳು ಆ ಕೆಲಸಗಳೊಂದಿಗೆ ಮನೆ ಮನೆಗೆ ಹೋಗಿ ಅರೋಗ್ಯ ವಿಚಾರಿಸಬೇಕು ಮತ್ತು ವರದಿ ಮಾಡಬೇಕು. ಬುಡಕಟ್ಟು ಜನರು ಕಾರ್ಮಿಕರಾಗಿದ್ದಾರೆ. ಅವರಿಗೆ ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ, ಇವರ ಬವಣೆ ಹೇಳಿ ತೀರದು. ಸಣ್ಣ, ಮಧ್ಯಮ ವ್ಯಾಪಾರಿಗಳು ಸಾಲ ಮಾಡಿ ವ್ಯಾಪಾರ ಮಾಡುತ್ತಿದ್ದವರು ಇಂದಿನ ಅನಿರೀಕ್ಷಿತ ಬೆಳವಣಿಗೆಯಿಂದ ತತ್ತರಿಸಿಹೋಗಿದ್ದಾರೆ. ಸರಕಾರ ಈಗ ಲೋಕ್ ಡೌನನ್ನು ಮತ್ತೆ ವಿಸ್ತರಿಸಿದೆ ಇದರಿಂದಾಗಿ ಈ ಎಲ್ಲಾ ವಿಭಾಗಗಳವರೂ ದೊಡ್ಡ ರೀತಿಯಲ್ಲಿ ಬಿಕ್ಕಟ್ಟಿಗೊಳಗಾಗುವುದು ಖಂಡಿತ.

ಇಂದಿನ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ರೇಶನ್ ಅಂಗಡಿಗಳಲ್ಲಿ ಕೆಲವರು ಗ್ರಾಹಕರಿಂದ ಹೆಚ್ಚು ಹಣ ವಸೂಲು ಮಾಡುತ್ತಿದ್ದಾರೆ. ಸರಕಾರದ ಅಧಿಕಾರಿಗಳಿಗೆ ವಿಷಯ ತಿಳಿಸಿದರೂ ಪ್ರಯೋಜನವಾಗುತ್ತಿಲ್ಲ. ಅಧಿಕಾರದಲ್ಲಿರುವ ಪಕ್ಷದವರೇ ರೇಶನ್ ಅಂಗಡಿ ನಡೆಸುತ್ತಿರುವವರು ಹೆಚ್ಚು ಹಣ ಪಡೆದು ಅವರದೇ ಸರಕಾರದ ಆದೇಶವನ್ನು ಉಲ್ಲಂಘಿಸುತ್ತಿದ್ದಾರೆ.

ಮಾರ್ಚ್ ತಿಂಗಳಲ್ಲಿ ಕಾರ್ಡ್ ಸಿಕ್ಕಿದವರಿಗೂ ರೇಶನ್ ಕೊಡಬೇಕೆಂದು ಸರಕಾರದ ಆದೇಶವಿದ್ದರೂ ಕೆಲವು ಅಂಗಡಿಗಳವರು ಅದನ್ನು ಪಾಲಿಸುತ್ತಿಲ್ಲ.

ಅಂಗಡಿಗಳಲ್ಲಿ ದುಬಾರಿ ಬೆಲೆ ವಸೂಲಿ ಮಾಡುತ್ತಿರುವರೆಂಬ ಪುಕಾರುಗಳೂ ಕೇಳಿ ಬರುತ್ತಿವೆ.

ಎಲ್ಲಾ ವಿಭಾಗಗಳ ಕಾರ್ಮಿಕರ, ಸಣ್ಣ– ಮಧ್ಯಮ ರೈತರ, ಸಣ್ಣ–ಮಧ್ಯಮ ವ್ಯಾಪಾರಿಗಳ ಬುಡಕಟ್ಟು ಜನರ ಮತ್ತಿತರ ಸಾಮಾನ್ಯ ಜನರ ಸಹಾಯಕ್ಕೆ ಬರುವುದು ಸರಕಾರದ ಕರ್ತವ್ಯವಾಗಿದೆ. ಕೊಡಗು ಕೊರೊನ ಮುಕ್ತ ಜಿಲ್ಲೆ ಎಂದು ಮಾನ್ಯ ಜಿಲ್ಲಾಧಿಕಾರಿಯವರು ಘೋಷಿಸಿರುವುದರಿಂದ ಕೊಡಗಿನಲ್ಲಿ ಆಂತರಿಕವಾಗಿ ನಿಯಮಗಳನ್ನು ಸಡಿಲಿಸಬಹುದಿತ್ತು. ಕೊಡಗಿಗೆ ಹೊರಗಿನಿಂದ ಯಾರೂ ಪ್ರವೇಶಿಸದಂತೆ ಕಠಿಣ ನಿರ್ಬಂಧ ಹೇರಿ ಅದನ್ನು ಅನುಷ್ಠಾನಕ್ಕೆ ತರಬೇಕು. ಜಿಲ್ಲೆಯೊಳಗೆ ಆಂತರಿಕವಾಗಿ ಜನರಿಗೆ ಓಡಾಟಕ್ಕೆ ಅನುವು ಮಾಡಿ ಕೊಡಬಹುದಿತ್ತು. ಎಂದು ಪಕ್ಷ ಅಭಿಪ್ರಾಯಪಡುತ್ತದೆ.

ಆಹಾರಧಾನ್ಯ, ಔಷಧಗಳ ಸಾಗಣಿಕೆಗೆ ಅನುಮತಿ ಕೊಡಬೇಕು. ಬಸ್ ಓಡಾಟವನ್ನು ಸ್ಥಗಿತದಲ್ಲಿಟ್ಟು ಉಳಿದ ವಾಹನಗಳನ್ನು ಓಡಾಡಲು ಬಿಡಬಹುದು.

ಇಂದಿನ ಗಂಭೀರ ಪರಿಸ್ಥಿತಿಯಲ್ಲಿ ಆಸ್ಪತ್ರೆಗಳಲ್ಲಿ ಸ್ವಚ್ಛತೆಯ ಕೆಲಸ ಮಾಡುತ್ತಿರುವ ಸ್ವಚ್ಛತಾ ಸಿಬ್ಬಂಧಿ, ಮನೆ ಮನೆಗೆ ಹೋಗಿ ದುಡಿಯುತ್ತಿರುವ, ಆಶಾ, ಅಂಗನವಾಡಿ ಕಾರ್ಯಕರ್ತೆಯರ ದುಡಿಮೆಯನ್ನು ವಿಶೇಷವಾಗಿ ಗಮನಕ್ಕೆ ತೆಗೆದುಕೊಂಡು ಅವರುಗಳಿಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಸರಕಾರ ವಿಶೇಷ ಗಮನ ಕೊಡಬೇಕು. ಅವರ ಮೇಲಿನ ಶೋಷಣೆಯನ್ನು ತಡೆಯಲು ಕ್ರಮ ತೆಗೆದುಕೊಳ್ಳದಿರುವುದು ಅಕ್ಷಮ್ಯ ಅಪರಾಧವಾಗಿದೆ.

ಅವರಿಗೆ ಕೊಡುತ್ತಿರುವ ಸಂಬಳ ತುಂಬಾ ಕಡಿಮೆ ಇದೆ. ಅವರಿಗೆ ಪಿಂಚಣಿ ಇಲ್ಲ, ಇತರ ಸೌಕರ್ಯಗಳಿಲ್ಲ–ಆಶಾ,ಅಂಗನವಾಡಿ, ಸರಕಾರೀ ಆಸ್ಪತ್ರಗೆಳಲ್ಲಿ ಕೆಲಸ ಮಾಡುವ ಸ್ವಚ್ಛತಾ ಸಿಬ್ಬಂಧಿಯವರ ಸಂಬಳ ಹೆಚ್ಚಿಸಬೇಕು, ಪಿಂಚಣಿ ಕೊಡಬೇಕು.

ಇದರೊಂದಿಗೇ,

ದಿನ ದಿನ ದುಡಿದು ಜೀವಿಸುವ ಕಾರ್ಮಿಕರು, ಬುಡಕಟ್ಟು ಜನರು ಬೀದಿ ಬದಿ ವ್ಯಾಪಾರಿಗಳು, ಸಣ್ಣ–ಮಧ್ಯಮ ವ್ಯಾಪಾರಿಗಳಿಗೆ ಸರಕಾರ ಆಹಾರ ಧಾನ್ಯಗಳು ಮತ್ತು ನಿತ್ಯೋಪೋಗಿ ಸರಕುಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸಬೇಕು. ಎ.ಪಿ.ಎಲ್–ಬಿ–ಪಿ.ಎಲ್ ತಾರತಮ್ಯ ತೋರದೆ ಎಲ್ಲರಿಗೂ ಪ್ರತಿ ತಿಂಗಳಿಗೆ 35 ಕೆ.ಜಿ. ಅಕ್ಕಿ ಮತ್ತು ನಿತ್ಯೋಪಯೋಗಿ ಸರಕುಗಳನ್ನು ನ್ಯಾಯಬೆಲೆಯಲ್ಲಿ ಒದಗಿಸಬೇಕು.

ಬುಡಕಟ್ಟು ಜನರನ್ನು ಒಳಗೊಂಡು ದುಡಿಯುವ ಎಲ್ಲಾ ವಿಭಾಗಗಳ ಪ್ರತಿಯೊಂದು ಕುಟುಂಬಕ್ಕೆ ಸರಕಾರ ಒಂದು ತಿಂಗಳಿಗೆ 6,000 ರೂ ಸಹಾಯಧನ ತಕ್ಷಣದಿಂದಲೇ ಕೊಡಬೇಕು.;

ಕಟಾವಿಗೆ ಬಂದ ಬೆಳೆಗಳನ್ನು ಬೆಳೆಗಾರರು ನಾಶ ಮಾಡಲು ಬಿಡದೆ ಅವುಗಳನ್ನು ನ್ಯಾಯವಾದ ಬೆಲೆಯಲ್ಲಿ ಅವರಿಂದ ಕೊಂಡು ಮಾರುಕಟ್ಟೆಗೆ ತಲುಪಿಸಲು ಸರಕಾರ ಸೂಕ್ತ ವ್ಯವಸ್ಥೆ ಮಾಡಬೇಕು.

ರೈತರು ಬೆಳೆದ ಬೆಳೆಗೆ ಸರಕಾರ ಲಾಭದಾಯಕ ಬೆಲೆ ಘೋಷಿಸಿ ಘೋಷಿಸಿದ ಬೆಲೆಯಲ್ಲಿ ಅವುಗಳನ್ನು ಅವರಿಂದ ಕೊಂಡುಕೊಂಡು ನ್ಯಾಯಬೆಲೆಯ ಅಂಗಡಿಗಳ ಮೂಲಕ ಗ್ರಾಹಕರಿಗೆ ಹಂಚಬೇಕು.

ಸಣ್ಣ, ಮಧ್ಯಮ ಬೆಳೆಗಾರರ, ರೈತರ ಎಲ್ಲಾ ಸಾಲವನ್ನು ರದ್ದು ಮಾಡಬೇಕು ಮತ್ತು ಸುಲಭದ ಕಂತಿನಲ್ಲಿ ಬಡ್ಡಿ ರಹಿತ ಸಾಲ ಕೊಡಬೇಕು.

ಕರಿಮೆಣಸು ಆಮದನ್ನು ತಡೆಯುವಂತೆ ಕೇಂದ್ರ ಸರಕಾರವನ್ನು ಪ್ರೇರೇಪಿಸಬೇಕು.

ಸಣ್ಣ, ಮಧ್ಯಮ ವ್ಯಾಪಾರಿಗಳ ವ್ಯಾಪಾರ ಸಂಬಂಧ ಸಾಲಗಳನ್ನು ಮನ್ನಾ ಮಾಡಬೇಕು ಮತ್ತು ಹೊಸದಾಗಿ ಬಡ್ಡಿರಹಿತ ಸಾಲ ಕೊಡಬೇಕು.

ತೋಟ ಕಾರ್ಮಿಕರನ್ನು ಒಳಗೊಂಡು ಕಾರ್ಮಿಕರ ಸಂಬಳ ಕಡಿತ ಮಾಡಬಾರದು. ಅವರಿಗೆ ಸಂಬಳ ಸಹಿತ ರಜ ಕೊಡಬೇಕು

ಬುಡಕಟ್ಟು ಜನರಿಗೆ ಈಗ ಪಡಿತರದಲ್ಲಿ ಕೇವಲ 10 ಕೆ.ಜಿ.ಅಕ್ಕಿ ಮತ್ತು ಒಂದು ಕೆ.ಜಿ ಉಪ್ಪು ಕೊಡಲಾಗುತ್ತಿದೆ. ಅವರಿಗೆ ಇತರೆಲ್ಲಾ ನಿತ್ಯೋಪಯೋಗಿ ಸರಕುಗಳನ್ನು ವಿತರಿಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕೊಡಗು ಘಟಕ ಸರಕಾರವನ್ನು ಒತ್ತಾಯಿಸುತ್ತದೆ.

ಇ.ರ. ದುರ್ಗಾ ಪ್ರಸಾದ್,
ಜಿಲ್ಲಾ ಕಾರ್ಯದರ್ಶಿ (16–4–2020)

ಪ್ರಧಾನ ಮಂತ್ರಿಗಳ ಟ್ವೀಟ್, 'ಹಿಂದುತ್ವ' ಮಂದಿಯ 'ಕೊರೊನ ಜಿಹಾದ್' ಮತ್ತು ಮಧ್ಯಪೂರ್ವದ ಪ್ರತಿಷ್ಠಿತರ ಎಚ್ಚರಿಕೆ

ನ್ಯೂ ಇಂಡಿಯ ನ್ಯೂಸ್

"ಕೊವಿಡ್–19 ಮೇಲೆರಗುವ ಮುನ್ನ ಜನಾಂಗ, ಧರ್ಮ, ಬಣ್ಣ, ಜಾತಿ, ಭಾಷೆ ಅಥವ ಗಡಿಯನ್ನು ನೋಡುವುದಿಲ್ಲ. ಆನಂತರ ನಮ್ಮ ಸ್ಪಂದನೆ ಮತ್ತು ವರ್ತನೆ ಐಕ್ಯತೆ ಮತ್ತು ಸೋದರತ್ವಕ್ಕೆ ಆದ್ಯತೆ ಕೊಡಬೇಕು. ನಾವು ಇದರಲ್ಲಿ ಜತೆಯಾಗಿದ್ದೇವೆ"

ಹೌದು, ಇದು ಪ್ರಧಾನ ಮಂತ್ರಿಗಳ ಉದ್ಗಾರ.

"ಭಾರತವನ್ನು ಸರ್ವನಾಶ ಮಾಡಲು ಕೊರೊನ ಜಿಹಾದ್..! ಸಂಶಯವೇ ಬೇಡ..ಇದು ಕಟು ಸತ್ಯ..! ಇದುವೆ ಕಠೋರ ವಾಸ್ತವ..!"

ಇದು ಅವರದ್ದೇ ಪಕ್ಷದ ಒಬ್ಬ ಪ್ರಮುಖ ಮುಂಖಡರಾಗಿರುವ ಉತ್ತರ ಕನ್ನಡ ಕ್ಷೇತ್ರದ ಸಂಸದರ ಘೋಷಣೆ.

ಮೊದಲು ಪ್ರಧಾನ ಮಂತ್ರಿಗಳ ಉದ್ಗಾರದ ಕುರಿತು– ಇದನ್ನು ಅವರು ಯಾವಾಗ ಹೇಳಿದ್ದು.

–ಮಾರ್ಚ್ 19ರಂದು ಕೊವಿಡ್–19ರ ವಿರುದ್ಧ 'ಜನತಾ ಕರ್ಫ್ಯೂ', ಚಪ್ಪಾಳೆ–ಜಾಗಟೆಗೆ ಕರೆ ನೀಡಿದ ಮೊದಲ ಪ್ರಸಾರ ಭಾಷಣದಲ್ಲಿಯೇ? ಅಲ್ಲ.

–ಮಾರ್ಚ್ 24 ರಂದು 21 ದಿನಗಳ ಲಾಕ್‌ಡೌನ್ ಪ್ರಕಟಿಸಿದ ಎರಡನೇ ಪ್ರಸಾರ ಭಾಷಣದಲ್ಲಿಯೇ? ಅಲ್ಲ.

–ಎಪ್ರಿಲ್ 3ರಂದು, ಎರಡು ದಿನಗಳ ನಂತರ ಲೈಟ್ ಆರಿಸಿ 9 ನಿಮಿಷ ಮೊಂಬತ್ತಿ ಹಚ್ಚಲು ಕರೆ ನೀಡಿದ ವಿಶೇಷ ರೇಡಿಯೋ ಭಾಷಣದಲ್ಲಿಯೇ? ಅಲ್ಲ

–ಎಪ್ರಿಲ್ 14 ರಂದು ಲಾಕ್‌ಡೌನಿನ ವಿಸ್ತರಣೆಯನ್ನು ಪ್ರಕಟಿಸಿ ಜನಗಳಿಗೆ ಸಪ್ತಪದಿಯನ್ನು ಬೋಧಿಸಿದ ಮೂರನೇ ಪ್ರಸಾರ ಭಾಷಣದಲ್ಲಿಯೇ? ಆಗಲೂ ಅಲ್ಲ.

ವಾಸ್ತವವಾಗಿ ಇದು ಯಾವ ಪ್ರಸಾರ ಭಾಷಣದಲ್ಲಿಯೂ ಹೇಳಿದ ಮಾತಲ್ಲ. ಇದು ಎಪ್ರಿಲ್ 19ರಂದು ಮಾನ್ಯ ಪ್ರಧಾನ ಮಂತ್ರಿಗಳ ಒಂದು ಟ್ವೀಟ್‌ನಲ್ಲಿನ ಉದ್ಗಾರ.

ಇದು ತಬ್ಲಿಘ್ ಜಮಾತ್‌ನ ಬೇಜವಾಬ್ದಾರಿ ಗೋಷ್ಠಿಯ ಸುದ್ದಿ ಪ್ರಕಟವಾದ ನಂತರ ಅದನ್ನೇ ನೆಪ ಮಾಡಿಕೊಂಡು 'ಕೊರೊನ ಜಿಹಾದ್' ಎಂಬ ಹೊಸದೊಂದು ಪದ ಹುಟ್ಟಿಕೊಂಡು ದೇಶಾದ್ಯಂತ ಮುಸ್ಲಿಮರನ್ನು ಗುರಿಯಾಗಿಟ್ಟುಕೊಂಡು ನಡೆಯುತ್ತಿರುವ ವಿಷಭರಿತ ಅಪಪ್ರಚಾರದ ಹಿನ್ನೆಲೆಯಲ್ಲಿ ಬಂದಿರುವ ಟ್ವೀಟ್ ಎಂಬುದು ಸ್ವಯಂವೇದ್ಯ.

ಆದರೆ ಕೇವಲ 5 ದಿನಗಳ ಹಿಂದೆಯಷ್ಟೇ ಮಾಡಿದ ಪ್ರಸಾರ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ದೇಶಬಾಂಧವರಿಗೆ ಬೋಧಿಸಿದ ಸಪ್ತಪದಿಯಲ್ಲಿ ಇದಕ್ಕೆ ಸ್ಥಾನವಿರಲಿಲ್ಲ; ಅದರಲ್ಲಿ ಮೊದಲನೆಯದು ಕುಟುಂಬದಲ್ಲಿನ ಹಿರಿಯ ನಾಗರಿಕರರೊಂದಿಗೆ ಗೌರವಪೂರ್ಣವಾಗಿ ವರ್ತಿಸಿರಿ ಎಂಬುದು. ಆ ವೇಳೆಗಾಗಲೇ ಈ ವಿಷಪ್ರಚಾರದ ವಿರುದ್ಧ ದೇಶಾದ್ಯಂತ ಹಲವು ಕಳವಳದ, ಆತಂಕದ ದನಿಗಳೆದ್ದಿದ್ದರೂ, ನಮ್ಮ ಸಹನಾಗರಿಕರೊಂದಿಗೂ ಗೌರವಪೂರ್ಣವಾಗಿ ವರ್ತಿಸಬೇಕೆಂಬ ಸಲಹೆಯೂ ಇಲ್ಲ, ಅವರ ಭಾಷಣದಲ್ಲಿ ಅದರ ಪ್ರಸ್ತಾಪವೂ ಇಲ್ಲ. ಮಾತ್ರವಲ್ಲ ನಂತರ ಸ್ವತಃ ಸರಕಾರದ ಕೋವಿಡ್ ಕುರಿತ ದೈನಂದಿನ ಪತ್ರಿಕಾಗೋಷ್ಠಿಗಳಲ್ಲೂ ವಿಶ್ವ ಆರೋಗ್ಯ ಸಂಘಟನೆಯ ನಿರ್ದೇಶನಗಳಿಗೆ ವಿರುದ್ಧವಾಗಿ ತಬ್ಲಿಘ್‌ನಿಂದಾಗಿ ಉಂಟಾದ ಸೋಂಕುಗಳನ್ನು ಪ್ರತ್ಯೇಕವಾಗಿ ಬಿಂಬಿಸುತ್ತಿದ್ದಾಗಲೂ ಪ್ರಧಾನ ಮಂತ್ರಿಗಳು ಮೌನವಾಗಿದ್ದರು.

ಇದ್ದಕ್ಕಿದಂತೆ ಇಂತಹ ಉದಾತ್ತತೆ ಹೇಗೆ ಹುಟ್ಟಿಕೊಂಡಿತು ಎಂಬುದು ಈಗ ಎಲ್ಲರಿಗೂ ಗೊತ್ತಿದೆ. 'ಕೊರೊನ ಜಿಹಾದ'ನ ವಿಷಪ್ರಚಾರಕ್ಕೆ ಅರಬ್ ಜಗತ್ತಿನಲ್ಲಿ, ಅದರಲ್ಲೂ ಅದರ ಮೇಲ್ಪದರದಲ್ಲಿ ಇದರ ವಿರುದ್ಧ ಮಾತ್ರವಲ್ಲ, ಒಟ್ಟಾರೆಯಾಗಿ ಹಿಂದುತ್ವ ಮಂದಿಯ ವಿರುದ್ಧವೂ ವ್ಯಕ್ತಗೊಂಡ ಅಭೂತಪೂರ್ವ ಆಕ್ರೋಶದ ಫಲಿತಾಂಶ.

ಮರುದಿನ ಯು.ಎ.ಇ.ಯಲ್ಲಿ ಭಾರತದ ರಾಯಭಾರಿಗಳು ಕೂಡ "ಭಾರತ ಮತ್ತು ಯುಎಇ ಬೇಧಭಾವ ರಾಹಿತ್ಯದ ಮೌಲ್ಯವನ್ನು ಹಂಚಿಕೊಂಡಿವೆ. ತಾರತಮ್ಯ ಮಾಡುವುದು ನಮ್ಮ ನೈತಿಕ ಹಂದರಕ್ಕೆ ಮತ್ತು ಕಾನೂನಿನ ಆಳ್ವಿಕೆಗೆ ವಿರುದ್ಧವಾದದ್ದು. ಇದನ್ನು ಕೊಲ್ಲಿಯಲ್ಲಿರುವ ಭಾರತೀಯರು ನೆನಪಿನಲ್ಲಿ ಇಟ್ಟುಕೊಳ್ಳಬೇಕು" ಎಂದು ಹೇಳಿಕೆ ನೀಡಿದರು.


ಇದು 'ಹಿಂದುತ್ವ' ಅಪಪ್ರಚಾರದ ಘಟಾನುಘಟಿಗಳನ್ನು, ಹಿರಿಯ–ಕಿರಿಯ ಟ್ರಾಲ್‌ಗಳನ್ನು ಸದ್ಯಕ್ಕೆ ಕಕಾಬಿಕ್ಕಿಯಾಗಿಸಿರುವಂತೆ ಕಾಣುತ್ತದೆ. ನಮ್ಮ 'ಸುಪರಿಚಿತ' ಟ್ವೀಟ್ ಪ್ರಚಾರಕರಾದ ತೇಜಸ್ವಿ ಸೂರ್ಯ, ಸೂಲಿಬೆಲೆ ಮುಂತಾದವರೂ ಸೇರಿದಂತೆ ಹಲವರು ತಮ್ಮ ಈ ದರ್ಜೆಯ ಟ್ವೀಟ್‌ಗಳನ್ನು ತರಾತುರಿಯಿಂದ ಡಿಲೀಟ್ ಮಾಡುವಂತಾಗಿದೆ.

ಯು.ಎ.ಇ.ಯ ಒಂದು ಭಾಗವಾದ ಶಾರ್ಜಾದ ರಾಜಕುಮಾರಿ ಹೆಂದ್ ಅಲ್ ಖಾಸ್ಸಿಮಿ ದುಬಾಯ್‌ನಲ್ಲಿ ಒಂದು ಕೋಟಿ ಡಾಲರುಗಳ ಕಂಪನಿಯ ಮಾಲಿಕನಾದ ಸೌರಭ್ ಉಪಾಧ್ಯಾಯ ಎಂಬಾತ 'ಕೊರೊನ ಜಿಹಾದ್' ಅಪಪ್ರಚಾರದ ಹಿನ್ನೆಲೆಯಲ್ಲಿ ಮುಸ್ಲಿಮರ ವಿರುದ್ಧ ಸಾರಾಸಗಟಾಗಿ ಮಾಡಿದ್ದ ಹೊಲಸು ಟೀಕೆಗೆ ಉತ್ತರಿಸುತ್ತ "ಯು.ಎ.ಇ.ಯಲ್ಲಿ ಯಾರಾದರೂ ಬಹಿರಂಗವಾಗಿಯೇ ಜನಾಂಗವಾದಿ ಮಾತು ಮತ್ತು ತಾರತಮ್ಯದ ಮಾತಾಡುತ್ತಿದ್ದರೆ ಅಂತವರಿಗೆ ದಂಡ ವಿಧಿಸಲಾಗುವುದು ಮತ್ತು ಹೊರಟು ಹೋಗುವಂತೆ ಮಾಡಲಾಗುವುದು, ಒಂದು ಉದಾಹರಣೆ...ನಿಮ್ಮ ಒರಟುತನಕ್ಕೆ ಇಲ್ಲಿ ಸ್ವಾಗತವಿಲ್ಲ. ಈ ನೆಲದಲ್ಲಿ ಅನ್ನ ಸಂಪಾದಿಸುತ್ತಿರಿ, ಈ ನೆಲವನ್ನೇ ತುಚ್ಚೀಕರಿಸುತ್ತೀರಿ, ನಿಮ್ಮ ಅಪಹಾಸ್ಯವನ್ನು ಗಮನಿಸದೇ ಇಲ್ಲ" ಎಂದು ಟ್ವೀಟ್ ಮಾಡಿದ ಕೂಡಲೇ, ತನ್ನ ಮಾತನ್ನು ಸಮರ್ಥಿಸಿಕೊಳ್ಳುವ ಧೈರ್ಯ ಪ್ರದರ್ಶಿಸುವ ಬದಲು ಸೌರಭ್ ಉಪಾಧ್ಯಾಯ ತನ್ನೆಲ್ಲ ಸಾಮಾಜಿಕ ಮಾಧ್ಯಮ ಅಕೌಂಟ್‌ಗಳನ್ನು ಮುಚ್ಚಿ ಬಿಟ್ಟರಂತೆ.

ಈ ಸಂದರ್ಭದಲ್ಲಿ , ಈ ಹಿಂದೆ ನಿರ್ಲಕ್ಷಿಸಿದ್ದ ಹಲವು 'ಹಿಂದುತ್ವ' ಅಪಪ್ರಚಾರಕರ ಸಾಮಾಜಿಕ ಮಾಧ್ಯಮ ಹೇಳಿಕೆಗಳು ಮತ್ತೆ ಜೀವ ಪಡೆದುಕೊಂಡು ಕಟು ಟೀಕೆಗಳಿಗೆ ಒಳಗಾಗಿವೆ, ಅದರಿಂದಾಗಿ ನಂತರ ಮಾಯವಾಗಿವೆ. ಇವುಗಳಲ್ಲಿ ನಮ್ಮ ಬೆಂಗಳೂರು ದಕ್ಷಿಣದ 'ಮಾನ್ಯ' ಸಂಸದ್ ಸದಸ್ಯ ತೇಜಸ್ವಿ ಸೂರ್ಯ 2015ರಲ್ಲಿ ಅರಬ್ ಮಹಿಳೆಯರ ಬಗ್ಗೆ ಮಾಡಿದ್ದ ಅತ್ಯಂತ ಕುತ್ಸಿತ ಎನ್ನಬಹುದಾದ ಟೀಕೆ ಮತ್ತೆ ಎಲ್ಲರ ಗಮನ ಸೆಳೆದಿದೆ.

ಈ ಬಗ್ಗೆ ಪ್ರತಿಕ್ರಿಯಿಸುತ್ತ ನೂರಾ ಅಲ್ ಘುರೇರ್ ಎಂಬಾಕೆ "ನಿಮ್ಮ ಪಾಲನೆ–ಪೋಷಣೆಯ ಬಗ್ಗೆ ನಾನು ಕನಿಕರ ಪಡುತ್ತೇನೆ. ಭಾರತ ಹಲವು ಮಹಾನ್ ಮಹಿಳಾ ನೇತಾರರನ್ನು ಪಡೆದಿದ್ದರೂ ನಿಮ್ಮಲ್ಲಿ ಮಹಿಳೆಯರ ಬಗ್ಗೆ ಗೌರವವನ್ನು ಬೆಳೆಸಲಾಗಲಿಲ್ಲ. ಮುಂದೊಂದು ದಿನ ನಿಮ್ಮ ಸರಕಾರ ನಿಮಗೆ ವಿದೇಶಾಂಗ ಮಂತ್ರಾಲಯವನ್ನು ಕೊಡಮಾಡಿದರೆ, ಅರಬ್ ನೆಲಗಳಿಗೆ ಬರದಂತೆ ನೊಡಿಕೊಳ್ಳಿ. ನಿಮಗೆ ಇಲ್ಲಿ ಸ್ವಾಗತವಿಲ್ಲ. ಇದನ್ನು ನೆನಪಿನಲ್ಲಿಟ್ಟುಕೊಳ್ಳಲಾಗುವುದು "ಎಂದು ಕಪಾಳಕ್ಕೆ ಹೊಡೆಯುವಂತೆ ಬರೆದಿರುವುದನ್ನು ನಾವು ಗಮನಿಸಬೇಕು.

ಇದನ್ನು ಅನುಸರಿಸಿ ಒಂದು ಪ್ರತಿಷ್ಠಿತ ಅರಬ್ ಟ್ವಿಟರ್ ಹ್ಯಾಂಡಲ್ ನಮ್ಮ ಪ್ರಧಾನ ಮಂತ್ರಿಗಳನ್ನು ಉದ್ದೇಶಿಸಿ ಹೀಗೆಂದು ಟ್ವೀಟ್ ಮಾಡಿದೆ– "ಮಾನ್ಯ ಪ್ರಧಾನ ಮಂತ್ರಿಗಳೇ, ಅರಬ್ ಜಗತ್ತಿನೊಂದಿಗೆ ಭಾರತದ ಸಂಬಂಧ ಪರಸ್ಪರ ಗೌರವದಿಂದ ಕೂಡಿದೆ. ನಿಮ್ಮ ಸಾಂಸದ ನಮ್ಮ ಮಹಿಳೆಯರನ್ನು ಸಾರ್ವಜನಿಕವಾಗಿ ಅವಮಾನ ಮಾಡುವುದಕ್ಕೆ ನೀವು



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಬಿಡುತ್ತೀರಾ? ಆತನ ನಾಚಿಕೆಗೆಟ್ಟ ಟಿಪ್ಪಣಿಗೆ ಆತನನ್ನು ಕೂಡಲೇ ಶಿಕ್ಷಿಸುತ್ತೀರಿ ಎಂದು ನಿರೀಕ್ಷಿಸುತ್ತೇವೆ."

ಅರಬ್ ಮಹಿಳೆಯರ ಬಗ್ಗೆ ಈ ಕುತ್ಸಿತ ಹೇಳಿಕೆ ಮಾತ್ರವಲ್ಲ, ಭಾರತದ ಮಹಿಳೆಯರ ಬಗ್ಗೆಯೂ ಆತನ ನಿಲುವು ಬಹಳ ಭಿನ್ನವಾಗಿಲ್ಲ. ಭಾರತದಲ್ಲಿ ಮಹಿಳಾ ಮೀಸಲಾತಿ ವಾಸ್ತವಗೊಳ್ಳುವ ಆ ದಿನ ಭಯಾನಕವಾಗಿರುತ್ತದೆ ಎಂದೂ ಈತ ಟ್ವಿಟ್ ಮಾಡಿದ್ದರಂತೆ.(ದಿ ಪ್ರಿಂಟ್, ಎಪ್ರಿಲ್20). ಇದು ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಿಗೆ ತಿಳಿಯದ ವಿಷಯವೇನಲ್ಲ. ನೂರಾ ಅವರು ಹೇಳಿರುವಂತೆ ಇದು ಅವರ ಲಾಲನೆ–ಪಾಲನೆಯಲ್ಲೇ(ಅಂದರೆ ಸಂಘಟನಾ/ಸೈದ್ಧಾಂತಿಕ ಹಿನ್ನೆಲೆಯಲ್ಲಿ?) ಇರುವ ದೋಷ. ಆರು ವರ್ಷಗಳಾದರೂ ಮಹಿಳಾ ಮೀಸಲಾತಿ ವಾಸ್ತವವಾಗುವ ಆತನ 'ಭಯಾನಕ' ದಿನ ಬಂದಿಲ್ಲ ಎಂಬುದೂ ಗಮನಾರ್ಹ. ಬಹುಶಃ ಆತನ ಇವೆಲ್ಲ 'ಸಾಧನೆ'ಗಳಿಂದಾಗಿಯೇ 2019ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆಯಾದರು. ಅದಾದ 24 ಗಂಟೆಗಳೊಳಗೆ ಈ ಟ್ವೀಟನ್ನು ಅಳಿಸಿಹಾಕಲಾಯಿತಂತೆ.

ಈಗ ಶಾರ್ಜಾದ ರಾಜಕುಮಾರಿಯ ಛೀಮಾರಿಯ ನಂತರ ತರಾತುರಿಯಲ್ಲಿ ಅರಬ್ ಮಹಿಳೆಯರನ್ನು ಕುರಿತಾದ ಟ್ವೀಟ್ ಕೂಡ ಮಾಯವಾಗಿದೆ.

ಆದರೂ ನಮ್ಮ ಪ್ರಧಾನ ಮಂತ್ರಿಗಳು ಈಗಲಾದರೂ ಅರಬ್ ಪ್ರತಿಷ್ಠಿತರ ನಿರೀಕ್ಷೆಯನ್ನು ಈಡೇರಿಸುತ್ತಾರೆ ಎಂದು ಭಾರತದಲ್ಲಂತೂ ಯಾರಿಗೂ ನಿರೀಕ್ಷೆ ಇಲ್ಲ ಎಂದು ಖಂಡಿತ ಹೇಳಬಹುದು. 'ಉದಾತ್ತ' ಹೇಳಿಕೆ ನೀಡಿದ್ದಾರೆ, ಅಷ್ಟು ಸಾಲದೇ?

ಮೂರು ದಿನಗಳ ನಂತರ ಉತ್ತರ ಕನ್ನಡದ ಸಾಂಸದರ ಮೇಲೆ ಹೇಳಿದ ಘೋಷಣೆ ಅದಕ್ಕೆ 'ಜ್ವಲಂತ' ಸಾಕ್ಷಿ!

ಆದರೆ ಈ ಪ್ರಕರಣ ಈ ಎಲ್ಲ ಮಂದಿ ಭಾವಿಸಿರುವಂತೆ ಈ ಅಪಪ್ರಚಾರ ನಿರಾತಂಕವಾಗಿ, ಅಬಾಧಿತವಾಗಿ, ಚಿರಕಾಲ ಸಾಗುವಂತದ್ದಲ್ಲ ಎಂದು ಇವರನ್ನು ಎಚ್ಚರಿಸಿದೆಯೇ? 'ಹಿಂದುತ್ವ'ಕ್ಕೆ ಅಂತರ್‍ರಾಷ್ಟ್ರೀಯವಾಗಿಯಾದರೂ ಬೆಲೆ ತೆರಬೇಕಾಗುತ್ತದೆ ಎಂದು ಇವರಿಗೆಲ್ಲ ಅರಿವಾಗುತ್ತಿದೆಯೇ? ನಾವು ತೈಲಕ್ಕಾಗಿ ಅವಲಂಬಿಸಬೇಕಾದ, ಅದರಿಂದಾಗಿಯೇ ಪ್ರಧಾನಿಗಳು ಬಹುವಾಗಿ ಓಲೈಸುತ್ತಿರುವ ಮಧ್ಯಪೂರ್ವದ ಪ್ರತಿಷ್ಠಿತರಂತೂ ಈಗ ಎಚ್ಚರಿಸಿದ್ದಾರೆ.

ಕೋವಿಡ್ ವಿರುದ್ಧ ಸಮರದಲ್ಲಿ ಆಳುವ ಪಕ್ಷದ 'ಮಾದರಿ' ರಾಜ್ಯಗಳ 'ಸಾಧನೆ' ಗುಣಮುಖರ ಪ್ರಮಾಣ ಅತೀ ಕಡಿಮೆ, ಮರಣ ಪ್ರಮಾಣ ಅತೀ ಹೆಚ್ಚು

ಪ್ರಧಾನ ಮಂತ್ರಿಗಳ 'ಮಾದರಿ' ರಾಜ್ಯ ಗುಜರಾತಿನಲ್ಲಿ ಕೊವಿಡ್–19ರ ಸೋಂಕಿತರಲ್ಲಿ ಗುಣಮುಖರಾದವರ ಪ್ರಮಾಣ ದೇಶದಲ್ಲಿಯೇ ಅತಿ ಕಡಿಮೆ ಎಂದೊಬ್ಬ ಗುಜರಾತಿನ ಪತ್ರಕರ್ತರು ಬೇಸರದಿಂದ ಹೇಳುತ್ತಾರೆ. ಇದಕ್ಕೆ ಕಾರಣವೇನು ಎಂದೂ ಅವರು ಕೇಳುತ್ತಾರೆ. ಎಪ್ರಿಲ್ 24ರ ಸಂಜೆಯ ವೇಳೆಗೆ ದೇಶದ ಸರಾಸರಿ ಪ್ರಮಾಣ 20.5% ವಾಗಿದ್ದರೆ, ಗುಜರಾತಿನದ್ದು ಕೇವಲ 9.83.%, ದೇಶದಲ್ಲೇ ಅತಿ ಕಡಿಮೆ. ಮರಣ ಪ್ರಮಾಣದಲ್ಲೂ ಬಹಳ ಕೆಳಗೇ ಅದರ ಸ್ಥಾನ. ದೇಶದ ಸರಾಸರಿ 3.08%ವಾಗಿದ್ದರೆ, ಗುಜರಾತಿನದ್ದು 4.27%.

ಇದಕ್ಕೆ ಅತೀ ಸಮೀಪದ ಪ್ರತಿಸ್ಪರ್ಧಿ ಎಂದರೆ ಪಕ್ಕದ ಮಧ್ಯಪ್ರದೇಶ. ಇಲ್ಲಿ ಗುಣಮುಖರಾದವರ ಪ್ರಮಾಣ ಗುಜರಾತಿಗಿಂತ ತುಸು ಉತ್ತಮ, 11%.ಆದರೆ ಮರಣ ಪ್ರಮಾಣವೂ ಹೆಚ್ಚು, 4.48%.

ಇದಕ್ಕೆ ಹೋಲಿಸಿದರೆ ಕರ್ನಾಟಕದ ಪರಿಸ್ಥಿತಿಯೂ ಉತ್ತಮವಾಗಿದೆ. ಗುಣಮುಖರಾದವರ ಪ್ರಮಾಣ 32.4% ಮತ್ತು ಮರಣದರ 3.9%, ನಿಜ ದೇಶದ ಸರಾಸರಿಗಿಂತ ಹೆಚ್ಚು.

ಗುಣಮುಖರಾದವರ ಪ್ರಮಾಣದಲ್ಲಿ ಮೊದಲ ಸ್ಥಾನದಲ್ಲಿರುವ, ಮತ್ತು ಮರಣ ಪ್ರಮಾಣದಲ್ಲಿ ಅತೀಕೆಳಗೆ ಇರುವ ರಾಜ್ಯ ಕೇರಳ ಎಂದು ಬೇರೆ ಹೇಳಬೇಕಾಗಿಲ್ಲ. ಇಲ್ಲಿ ಗುಣಮುಖರಾದವರ ಪ್ರಮಾಣ 72.32%ವಾಗಿದ್ದರೆ, ಮರಣ ಪ್ರಮಾಣ ಕೇವಲ 0.65%.

ಇದಕ್ಕೆ ಮುಖ್ಯ ಕಾರಣ ಅಲ್ಲಿಯ ಎಲ್‌ಡಿಎಫ್ ಸರಕಾರದ ಯೋಜನಾಬದ್ಧ, ವೈಜ್ಞಾನಿಕ ಕ್ರಮಗಳು ಎಂದು ಈಗ ಎಲ್ಲರೂ ಒಪ್ಪುತ್ತಾರೆ. ಇದರಲ್ಲಿ ಅದರ ನೆರವಿಗೆ ಬಂದದ್ದು ದಶಕಗಳ ಶ್ರಮದಿಂದ ಬೆಳೆಸಿದ ಅಲ್ಲಿಯ ಸಾರ್ವಜನಿಕ ಆರೊಗ್ಯ ವ್ಯವಸ್ಥೆ ಎಂಬುದನ್ನೂ ಕೆಲವರಾದರೂ ಒಪ್ಪುತ್ತಾರೆ.


ಗುಜರಾತ್‌ನದ್ದು ತದ್ವಿರುದ್ಧ ಅನುಭವ. ಇಲ್ಲಿ ಕಳೆದ ಎರಡು ದಶಕಗಳಿಂದ ಬಿಜೆಪಿಯ ಆಳ್ವಿಕೆ ಇದೆ. ಅದರಲ್ಲಿ ಸುಮಾರು ಒಂದೂವರೆ ದಶಕ ಈಗಿನ ನಮ್ಮ ಪ್ರಧಾನ ಮಂತ್ರಿಗಳದ್ದೇ ಸಾರಥ್ಯ. ಆಗ 'ವೈಬ್ರಂಟ್ ಗುಜರಾತ' ಎಂಬ ಹೆಸರಲ್ಲಿ ಹಲವಾರು ಹೂಡಿಕೆದಾರರ ಶೃಂಗ ಸಭೆಗಳು ನಡೆದವು. ಇದನ್ನು ಗುಜರಾತ್ ಮಾದರಿ ಎನ್ನಲಾಯಿತು. ಖಾಸಗೀಕರಣ ಈ ಮಾದರಿಯ ಜೀವಾಳವಾಗಿತ್ತು. ಅದರಿಂದಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸಂಪೂರ್ಣ ಕೆಟ್ಟು ಹೊಗಿದ್ದರಲ್ಲಿ ಆಶ್ಚರ್ಯವಿಲ್ಲ. ಅದರ ದುಷ್ಪರಿಣಾಮವೇ ಮೇಲಿನ ಅಂಕಿ–ಅಂಶಗಳು ಎನ್ನುತ್ತಾರೆ ಆರೋಗ್ಯ ಪರಿಣಿತರು.

ಮಧ್ಯಪ್ರದೇಶದ್ದೂ ಅದೇ ಕತೆ. ಸತತ 15ವರ್ಷಗಳ ಕಾಲ ಬಿಜೆಪಿ ಆಳ್ವಿಕೆಯಲ್ಲಿದ್ದ ರಾಜ್ಯವಿದು. ಈ ಬಾರಿ ಅಧಿಕಾರ ಕಳಕೊಂಡಿತು. ಆದರೆ ಈ ಕೋವಿಡ್–19 ಹಾವಳಿ ನಡೆಯುತ್ತಿದ್ದಾಗಲೇ ಇಲ್ಲಿ ಕುದುರೆ ವ್ಯಾಪಾರ ನಡೆಯುತ್ತಿತ್ತು. ಆಗಿನ ಕಾಂಗ್ರೆಸ್ ಮಂತ್ರಿಮಂಡಳದಲ್ಲಿ ಆರೋಗ್ಯ ಮಂತ್ರಿಯಾಗಿದ್ದವರು ಮುಂಬಯಿಯಲ್ಲಿ ಅಷ್ಟ ತಾರಾ ರೆಸಾರ್ಟಿನಲ್ಲಿ ಬಿಜೆಪಿಯ ಆತಿಥ್ಯ ಪಡೆಯುತ್ತಿದ್ದರು.

ವಾಸ್ತವವಾಗಿ ಮಧ್ಯಪ್ರದೇಶದಲ್ಲಿ ಚುನಾಯಿತ ಸರಕಾರವನ್ನು ಉರುಳಿಸಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರುವ ಪ್ರಯತ್ನದಿಂದಾಗಿಯೇ ದೇಶದಲ್ಲಿ ಕೋವಿಡ್ ವಿರುದ್ಧ ಸಮರವನ್ನು ಮುಂದೂಡಲಾಯಿತು ಎಂದೂ ಹೇಳಲಾಗುತ್ತಿದೆ. ಇಲ್ಲಿ ಬಿಜೆಪಿ ಮುಖ್ಯಮಂತ್ರಿ ಅಧಿಕಾರ ವಹಿಸಿದ ಮೇಲೆಯೇ ಲಾಕ್‌ಡೌನಿಗೆ ಪೂರ್ವಭಾವಿಯಾಗಿ 'ಜನತಾ ಕರ್ಫ್ಯೂ' ನಡೆದದ್ದು ಎಂಬುದು ಗಮನಾರ್ಹ.

ಇದರಿಂದಾಗಿ ಇತ್ತೀಚಿನ ವರೆಗೂ ಇಲ್ಲಿ ಮಂತ್ರಿಮಂಡಳವೇ ಇರಲಿಲ್ಲ. ಆದ್ದರಿಂದ ಆರೋಗ್ಯ ಮಂತ್ರಿಗಳೂ ಇರಲಿಲ್ಲ. ಆರೋಗ್ಯ ಇಲಾಖೆಯ ಅಧಿಕಾರಿಗಳಲ್ಲಿ ಬಹಳಷ್ಟು ಮಂದಿ ಕೋವಿಡ್ ಸೋಂಕಿತರಾಗಿ ಮನೆಯಲ್ಲಿದ್ದ ವಿಶಿಷ್ಟತೆ ಈ ರಾಜ್ಯದ್ದು. ಹೀಗಿರುವಾಗ ಅದರ ಅಂಕಿ–ಅಂಶಗಳು ಉತ್ತಮವಾಗಿರಲು ಹೇಗೆ ಸಾಧ್ಯ ಎಂದೂ ಆರೋಗ್ಯ ಪರಿಣಿತರು ಕೇಳುತ್ತಾರೆ.

ಎರಡು ಪ್ಲೇಗುಗಳು ಕಾಶ್ಮೀರವನ್ನು ಕಾಡುತ್ತಿವೆ



ಪ್ರಕಾಶ ಕಾರಟ್



ಜಮ್ಮು ಮತ್ತು ಕಾಶ್ಮೀರದಲ್ಲಿ ಲಾಕ್‌ಡೌನ್ ಭಾರತಕ್ಕಿಂತ ಪೂರ್ಣ ಎಂಟು ತಿಂಗಳ ಮೊದಲೇ ಆರಂಭವಾಯಿತು. ಅದು ಯಾವುದೇ ಸಾಂಕ್ರಾಮಿಕ ಅಥವ ಆರೋಗ್ಯ ತುರ್ತು ಪರಿಸ್ಥಿತಿಯಿಂದಾಗಿ ಬಂದದ್ದಲ್ಲ. ಅದೊಂದು ರಾಜಕೀಯ ಲಾಕ್‌ಡೌನ್, ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಒಂದು ಪ್ರಹಾರದೊಂದಿಗೆ ಅದು ಬಂತು. ಭಾರತದ ಇತರ ಭಾಗಗಳೊಡನೆ ಮಾರ್ಚ್ 25ರಂದು ಆರಂಭವಾದ ಎರಡನೇ ಲಾಕ್‌ಡೌನಿನಲ್ಲಿ ಈ ಪ್ರಹಾರ ತೀವ್ರಗೊಂಡಿದೆ. ಜಮ್ಮು ಮತ್ತು ಕಾಶ್ಮೀರದ ಜನತೆಯ ಅಸ್ಮತೆ ಮತ್ತು ರಾಜಕೀಯ ವ್ಯವಸ್ಥೆಯನ್ನು ಬದಲಿಸುವ ಕ್ರಮಗಳನ್ನು ಬಲವಂತದಿಂದ ತರಲಿಕ್ಕಾಗಿ ಇದನ್ನು ಬಳಸಿಕೊಳ್ಳಲಾಗುತ್ತಿದೆ. ಕಾಶ್ಮೀರದ ಜನತೆ ತಮ್ಮನ್ನು ಕಾಡುತ್ತಿರುವ ಎರಡು ಪೀಡೆಗಳಾದ ಕೊರೊನ ವೈರಸ್ ಮತ್ತು ಪ್ರಜಾಪ್ರಭುತ್ವದ ದಮನದ ನಡುವೆ ವ್ಯತ್ಯಾಸವನ್ನೇ ಕಾಣಲಾರದವರಾಗಿದ್ದಾರೆ.

ಈ ಮಹಾಮಾರಿಯ ದಿನಗಳಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಏನಾಗುತ್ತಿದೆ ಎಂದು ಹೆಚ್ಚೇನೂ ಕೇಳ ಬರುತ್ತಿಲ್ಲ. ಆದರೆ ಅಲ್ಲಿನ ಜನಗಳು ಕೊರೊನ ವೈರಸ್ ಹರಡಿಕೆಯ ಬಗ್ಗೆ ಗಂಭೀರ ಆತಂಕಕ್ಕೆ ಒಳಗಾಗಿರುವಾಗಲೂ ಆಳುವ ಹಿಂದುತ್ವ ಮಂದಿ ಈಗ ಜಮ್ಮು ಮತ್ತು ಕಾಶ್ಮೀರದ "ಕೇಂದ್ರಾಡಳಿತ ಪ್ರದೇಶ" ಎಂದೇನು ಹೇಳುತ್ತಿದ್ದಾರೋ ಅದನ್ನು ರೂಪಿಸುವಲ್ಲಿ ಮಗ್ನರಾಗಿದ್ದಾರೆ. ಕಾಶ್ಮೀರ ಕಣಿವೆಯ ಜನಗಳ ಮಟ್ಟಿಗೆ, ಆಗಸ್ಟ್ 2019ರಿಂದ ಅವರು ಅನುಭವಿಸುತ್ತಿರುವ ದಮನ–ದಬ್ಬಾಳಿಕೆಗಳು ಹಾಗೆಯೇ ಮುಂದುವರೆಯುತ್ತಿವೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಲಾಕ್‌ಡೌನ್ ಭಾರತಕ್ಕಿಂತ ಪೂರ್ಣ ಎಂಟು ತಿಂಗಳ ಮೊದಲೇ ಆರಂಭವಾಯಿತು. ಅದು ಯಾವುದೇ ಸಾಂಕ್ರಾಮಿಕ ಅಥವ ಆರೋಗ್ಯ ತುರ್ತು ಪರಿಸ್ಥಿತಿಯಿಂದಾಗಿ ಬಂದದ್ದಲ್ಲ. ಅದೊಂದು ರಾಜಕೀಯ ಲಾಕ್‌ಡೌನ್, ಜಮ್ಮು ಮತ್ತು ಕಾಶ್ಮೀರದ ಜನಗಳ ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಒಂದು ಪ್ರಹಾರದೊಂದಿಗೆ ಅದು ಬಂತು. ಅದರ ಫಲಿತಾಂಶವಾಗಿ ಮೋದಿ ಸರಕಾರ ಈ ರಾಜ್ಯವನ್ನು ಮತ್ತು ಕಲಮು 370ರ ಅಡಿಯಲ್ಲಿ ಅದಕ್ಕಿದ್ದ ವಿಶೇಷ ಸ್ಥಾನಮಾನವನ್ನು ಕಳಚಿ ಹಾಕಿತು. ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳ ಮೇಲೆ ಸಂಪೂರ್ಣ ನಿರ್ಬಂಧ, ಸಾವಿರಾರು ರಾಜಕೀಯ ಮುಖಂಡರುಗಳು ಮತ್ತು ಕಾರ್ಯಕರ್ತರ ಬಂಧನ, ಇಂಟರ್ನೆಟ್ ಬಂದ್ ಮತ್ತು ಪತ್ರಿಕೆಗಳ ಬಾಯಿಗೆ ಬೀಗ ಹಾಗೂ ಶಾಲೆಗಳ, ಜನಗಳ ಚಲನವಲನ ಬಂದ್ ಇವೆಲ್ಲ ಈ ಅವಧಿಯಲ್ಲಿ ಎದ್ದು ಕಂಡಿರುವ ಸಂಗತಿಗಳು.

ಭಾರತದ ಇತರ ಭಾಗಗಳೊಡನೆ ಮಾರ್ಚ್ 25ರಂದು ಆರಂಭವಾದ ಎರಡನೇ ಲಾಕ್‌ಡೌನಿನಲ್ಲಿ ಈ ಪ್ರಹಾರ ತೀವ್ರಗೊಂಡಿದೆ. ಜನಗಳು ವೈರಸ್ ವಿರುದ್ಧ ಹೆಣಗುತ್ತಿರುವ ಸಮಯದಲ್ಲಿ ಕೇಂದ್ರ ಗೃಹ ಮಂತ್ರಾಲಯ ನೇರವಾಗಿ ನಡೆಸುತ್ತಿರುವ ಈ ಕೇಂದ್ರಾಡಳಿತ ಪ್ರದೇಶದ ಆಡಳಿತ ಕಾಶ್ಮೀರಿ ಅಸ್ಮಿತೆಯನ್ನು ಮತ್ತು ರಾಜಕೀಯ ವ್ಯವಸ್ಥೆಯನ್ನು ಕಳಚಿ ಹಾಕುವಲ್ಲಿ ಮಗ್ನವಾಗಿದೆ, ಅದಕ್ಕಾಗಿ ಜನಸಂಖ್ಯೆಯ ಸಂಯೋಜನೆಯಲ್ಲಿ ಬದಲಾವಣೆಗೆ ಅಡಿಗಲ್ಲು ಹಾಕುತ್ತಿದೆ. ಭವಿಷ್ಯದ ಮೊಟಕು ವಿಧಾನಸಭೆಯ ಕ್ಷೇತ್ರಗಳ ಮರುವಿಂಗಡಣೆಯ ಮೂಲಕ ರಾಜಕೀಯ ಸ್ವರೂಪವನ್ನು ಪುನರ್ರಚಿಸುವ ಮತ್ತು ಒಂದು ಕೈಗೊಂಬೆ ರಾಜಕೀಯ ಪಕ್ಷವನ್ನು ಕಡೆದು ನಿಲ್ಲಿಸುವ ರಾಜಕೀಯ ಪರಿಯೋಜನೆಯೂ ಜಾರಿಯಲ್ಲಿದೆ.



ಕೊರೊನ ಮಹಾಮಾರಿ –ಸಂಪೂರ್ಣ ಸಂವೇದನಾಶೂನ್ಯ

ಕೊರೊನ ಮಹಾಮಾರಿಯನ್ನು ನಿಭಾಯಿಸುವ ಆಡಳಿತವು ಜನಗಳ ಸಂಕಟಗಳಿಗೆ ಸಂಪೂರ್ಣವಾಗಿ ಸಂವೇದನಾಶೂನ್ಯವಾಗಿದೆ. ಎಪ್ರಿಲ್ 22 ರ ವರೆಗೆ ಇಲ್ಲಿ 407 ಸೋಂಕಿತರನ್ನು ಗುರುತಿಸಲಾಗಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಜನಸಂಖ್ಯೆಯ ಪ್ರಮಾಣದಲ್ಲಿ ಇದು ಬಹಳ ಹೆಚ್ಚೇ. ಇಲ್ಲಿನ ಆರೋಗ್ಯ ವ್ಯವಸ್ಥೆ ಸಾಂಕ್ರಾಮಿಕವೊಂದನ್ನು ನಿಭಾಯಿಸಲು ಏನೇನೂ ಸಾಲದು. 70 ಲಕ್ಷ ಜನಸಂಖ್ಯೆಯಿರುವ ಕಣಿವೆ ಪ್ರದೇಶದಲ್ಲಿ ಲಭ್ಯವಿರುವ ವೆಂಟಿಲೇಟರುಗಳು ಕೇವಲ 97 ಎಂದು ವರದಿಯಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಒದಗಿಸಿರುವ ಆರ್ಥಿಕ ಪರಿಹಾರವು ಅಲ್ಪವೇ. ದೇಶದ ಬೇರೆ ರಾಜ್ಯಗಳಿಗೆ ಕೊಟ್ಟಿರುವುದಕ್ಕಿಂತಲೂ ಬಹಳ ಕಡಿಮೆ. ಬಿಪಿಎಲ್ ಕುಟುಂಬಗಳಿಗೆ ಉಚಿತ ರೇಷನ್ ಮತ್ತು ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿಯಿಂದ ಅವರಿಗೆ 1000ರೂ. ಮಾತ್ರ ಪ್ರಕಟಿಸಲಾಗಿದೆ ಮತ್ತು ಭಾಗಶಃ ಜಾರಿಯಾಗಿದೆ. ತಮ್ಮ ಜೀವನೋಪಾಯವನ್ನು ಕಳಕೊಂಡಿರುವ ಸಾವಿರಾರು ಕಾರ್ಮಿಕರು ಮತ್ತು ಕುಶಲಕರ್ಮಿಗಳಿಗೆ ನಗದು ಅನುದಾನವಿಲ್ಲ, ಬಡಕುಟುಂಬಗಳಿಗೆ ಯಾವುದೇ ರೀತಿಯ ಆದಾಯ ಬೆಂಬಲವಿಲ್ಲ.

ಮೊದಲ ಲಾಕ್‌ಡೌನ್ ನಲ್ಲೇ ಪ್ರವಾಸೋದ್ಯಮ ಮತ್ತು ಕರಕುಶಲ ವಲಯಗಳಲ್ಲಿ ಹತ್ತಾರು ಸಾವಿರ ಮಂದಿ ಕೆಲಸ ಕಳಕೊಂಡರು. ಹವಾಮಾನ ವೈಪರೀತ್ಯ, ಸಾಗಾಣಿಕೆ ಮತ್ತು ಮಾರಾಟದ ಸೌಲಭ್ಯಗಳ ಕೊರತೆಯಿಂದಾಗಿ ಸೇಬು, ಕೇಸರಿ ಮುಂತಾದ ತೋಟದ ಉತ್ಪನ್ನಗಳು ತೀವ್ರ ನಷ್ಟಗಳನ್ನು ಅನುಭವಿಸಿದವು.

ಎರಡನೇ ಲಾಕ್‌ಡೌನ್ ಈ ಬಿಕ್ಕಟ್ಟು ಮತ್ತು ನಷ್ಟಗಳನ್ನು ಇನ್ನಷ್ಟು ಆಳಗೊಳಿಸಿದೆಯಷ್ಟೇ. ಆದರೂ ಕೇಂದ್ರದಿಂದ ನಡೆಯುವ ಆಡಳಿತ ಕೇವಲ ಜನಗಳ ಮೇಲೆ ಪೋಲಿಸ್ ನಿಗಾ ಇಡುವ ಮತ್ತು ಭಿನ್ನಮತದ ಎಲ್ಲ ಸಂಕೇತಗಳನ್ನೂ ಹೊಸಕಿ ಹಾಕುವದರ ಮೇಲೆಯೇ ಗಮನ ಕೇಂದ್ರೀಕರಿಸಿದೆ.

ಕಳೆದ ವಾರ ಮೂವರು ಪತ್ರಕರ್ತರ ಮೇಲೆ ಗುರಿಯಿಡಲಾಗಿದೆ, ಅವರಲ್ಲಿ ಒಬ್ಬರು ಮಹಿಳಾ ಫೊಟೋ–ಪತ್ರಕರ್ತೆ ಮಸ್ರತ್ ಝುಹ್ರಾ ಅವರ ಮೇಲೆ ಕರಾಳ 'ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ'(ಯುಎಪಿಎ) ಅಡಿಯಲ್ಲಿ ಯಾವುದೋ ನಿರ್ದಿಷ್ಟಪಡಿಸದ ಫೇಸ್‌ಬುಕ್ ಪೋಸ್ಟಿಗಾಗಿ ಮೊಕದ್ದಮೆ ಹಾಕಲಾಗಿದೆ. ಕಾಶ್ಮೀರದಲ್ಲಿ ಕೇಂದ್ರ ಸರಕಾರವನ್ನು ಅಥವ ಮೋದಿ–ಷಾ ಜೋಡಿಯನ್ನು ಟೀಕಿಸಿದರೆ ಅದು ಪತ್ರಕರ್ತರಿಗೆ ಭಯೋತ್ಪಾದನೆಯ ಆರೋಪವನ್ನು ತರುತ್ತದೆ.

ಜನಸಂಖ್ಯಾ ಸಂಯೋಜನೆಯನ್ನೇ ಬದಲಿಸಲು

ಕಣಿವೆಯಲ್ಲಿ ಜನಸಂಖ್ಯಾ ಸಂಯೋಜನೆಯನ್ನೇ ಬದಲಿಸಲು ಅನುವು ಮಾಡಿಕೊಡುವ ಒಂದು ಕ್ರಮವನ್ನು ಕೈಗೊಂಡಿರುವಾಗ ಮಾಧ್ಯಮಗಳ ಕತ್ತು ಹಿಸುಕುವ ಈ ಪ್ರಯತ್ನ ನಡೆಯುತ್ತಿದೆ. ಎಪ್ರಿಲ್ 1 ರಂದು ಹೊರಡಿಸಿದ ಒಂದು ಅಧಿಸೂಚನೆ ಜಮ್ಮು ಮತ್ತು ಕಾಶ್ಮೀರದಲ್ಲಿ ವಾಸದ ಸ್ಥಾನಮಾನದ ಸ್ವರೂಪ ಮತ್ತು ವ್ಯಾಪ್ತಿಯನ್ನು ಬದಲಿಸಿದೆ. ಈ ಮೊದಲು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಮಾತ್ರವೇ ಯಾರು ಖಾಯಂ ನಿವಾಸಿಗಳು ಎಂದು ನಿರ್ಧರಿಸಲು ಸಾಧ್ಯವಿತ್ತು. ಅದನ್ನೀಗ ಬದಲಿಸಲಾಗಿದೆ, ಆಡಳಿತ ಮಟ್ಟದಲ್ಲೇ ವಾಸದ ಸ್ಥಾನಮಾನವನ್ನು ಕೊಡಬಹುದಾಗಿದೆ. ನಿಯಮಗಳನ್ನು ಬದಲಿಸಲಾಗಿದೆ. 15 ವರ್ಷಗಳ ಕಾಲ ಈ ಪ್ರದೇಶದಲ್ಲಿ ವಾಸವಾಗಿದ್ದವರು ವಾಸದ ಸ್ಥಾನಮಾನವನ್ನು ಪಡೆಯಬಹುದಾಗಿದೆ. ಅದೇ ರೀತಿಯಲ್ಲಿ ಕೇಂದ್ರ ಸರಕಾರ ಅಥವ ಕೇಂದ್ರೀಯ ಸಾರ್ವಜನಿಕ ವಲಯದ ಘಟಕದ ಒಬ್ಬ ನೌಕರ ಹತ್ತು ವರ್ಷ ಇಲ್ಲಿದ್ದರೆ ಆತ ಅಥವ ಆಕೆ ವಾಸದ ಸ್ಥಾನಮಾನವನ್ನು ಪಡೆಯಲು ಅರ್ಹರಾಗುತ್ತಾರೆ, ಅವರ ಮಕ್ಕಳೂ ಅರ್ಹರಾಗುತ್ತಾರೆ. ನಾಲ್ಕನೇ ದರ್ಜೆಯ ನೌಕರಿಗಳು ವಾಸದ ಸ್ಥಾನಮಾನ ಪಡೆದ ವ್ಯಕ್ತಿಗಳಿಗೆ ಮೀಸಲಾಗಿರುತ್ತವೆ ಎಂದು ಈ ಅಧಿಸೂಚನೆ ಹೇಳಿದೆ. ಇದರ ಅರ್ಥ ಈ ಪ್ರದೇಶದ ಹೊರಗಿನವರನ್ನು ಇತರ ಹುದ್ದೆಗಳಿಗೆ ನೇಮಿಸಿಕೊಳ್ಳಬಹುದಾಗಿದೆ.

ಈ ಅಧಿಸೂಚನೆ ಅಲ್ಲೋಲ ಕಲ್ಲೋಲ ಉಂಟು ಮಾಡಿತು. ಜಮ್ಮುವಿನಿಂದಲೂ ಸೇರಿದಂತೆ ಎಲ್ಲ ವಿಭಾಗಗಳ ಜನರು ಇದನ್ನು ವಿರೋಧಿಸಿದರು. ಅದರಿಂದಾಗಿ, ಎರಡು ದಿನಗಳ ನಂತರ ನಿಯಮಗಳನ್ನ ತಿದ್ದುಪಡಿ ಮಾಡಲಾಯಿತು, ಆ ಮೂಲಕ ಎಲ್ಲ ದರ್ಜೆಗಳ ನೌಕರಿಗಳು ಸ್ಥಳೀಯರಿಗೆ ಮತ್ತು ವಾಸದ ಸ್ಥಾನಮಾನ ಪಡೆದವರಿಗೆ ಮೀಸಲಾಯಿತು. ಆದರೆ ವಾಸದ ಸ್ಥಾನಮಾನದ ನಿರೂಪಣೆಯನ್ನು ಮಾತ್ರ ಬದಲಿಸಲಿಲ್ಲ. ಈ ಹೊಸ ಕಾನೂನಿನ ಪ್ರಕಾರ ಜಮ್ಮು ಮತ್ತು ಕಾಶ್ಮೀರದ ಹೊರಗಿನ ಜನಗಳು ವಾಸದ ಸ್ಥಾನಮಾನ ಪಡೆಯಬಹುದು, ಉದ್ಯೋಗಗಳನ್ನು ಪಡೆಯಬಹುದು ಮತ್ತು ಜಮೀನನ್ನೂ ಖರೀದಿಸಬಹುದು. ಇದು ಮಾಜಿ ಸೈನಿಕರು ಇಲ್ಲಿ ನೆಲೆಯೂರಲು ಮತ್ತು ಜಮೀನು ಖರೀದಿಸಲು ದಾರಿ ತೆರೆದು ಕೊಡುತ್ತದೆ. ಇದು ಬಿಜೆಪಿ ಮತ್ತು ಆರೆಸ್ಸೆಸ್ ಬಹಳ ಕಾಲದಿಂದ ಪ್ರಯತ್ನಿಸುತ್ತಿದ್ದ ಯೋಜನೆ.

ಆಕ್ರಮಿಸಿಕೊಂಡ ಆಡಳಿತದ ರೀತಿ

ಲಾಕ್‌ಡೌನನ್ನು ಇಂತಹ ಕ್ರಮಗಳನ್ನು ಬಲವಂತದಿಂದ ತರಲಿಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಇರುವ ನೌಕರಶಾಹಿ–ಸರ್ವಾಧಿಕಾರಶಾಹಿ ಆಳ್ವಿಕೆ ಒಂದು ಆಕ್ರಮಿಸಿಕೊಂಡ ಆಡಳಿತದ ರೀತಿಯಲ್ಲಿ ವರ್ತಿಸುತ್ತಿದೆ. ಬಂಧನಕ್ಕೊಳಗಾದವರಲ್ಲಿ ನೂರಾರು ಮಂದಿಯನ್ನು ಹೊರಗಿನ, ಮುಖ್ಯವಾಗಿ ಉತ್ತರಪ್ರದೇಶ ಮತ್ತು ಹರ್ಯಾಣದ ಜೈಲುಗಳಿಗೆ ಕಳಿಸಲಾಗಿದೆ. ಕೊರೊನ ಮಹಾಮಾರಿಯ ನಂತರ ಅವರನ್ನೆಲ್ಲ ಬಿಡುಗಡೆ ಮಾಡಬೇಕೆಂಬ ಸಾರ್ವಜನಿಕ ಒತ್ತಾಯ ಹೆಚ್ಚುತ್ತಿದೆ. ಕಳೆದ ತಿಂಗಳಿಂದ ಸಾರ್ವಜನಿಕ ಸುರಕ್ಷತೆಯ ಕಾಯ್ದೆಯ ಅಡಿಯಲ್ಲಿ ಮಾಡಿದ ಬಂಧನದ ಆದೇಶಗಳನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಆರಂಭವಾಯಿತು, ಉತ್ತರಪ್ರದೇಶ ಮತ್ತು ಹರ್ಯಾಣದಲ್ಲಿದ್ದ ನೂರಕ್ಕೂ ಹೆಚ್ಚು ಬಂಧಿಗಳು ಬಿಡುಗಡೆ ಆದೇಶಗಳನ್ನು ಪಡೆದರು.

ಆದರೆ ಇಲ್ಲಿಯೂ ಅಮಾನವೀಯತೆ ಕಾಣಬರುತ್ತಿದೆ. ಉತ್ತರಪ್ರದೇಶದಲ್ಲಿ ಬಂಧಿಗಳ ಕುಟುಂಬದವರು ಬಿಡುಗಡೆ ಆದೇಶದೊಂದಿಗೆ ಬರಬೇಕು, ಮತ್ತು ಕಾಶ್ಮೀರಕ್ಕೆ ಬಿಡುಗಡೆಯಾದವರೊಂದಿಗೆ ಹಿಂದಿರುಗಲು ತಾವೇ ವ್ಯವಸ್ಥೆಮಾಡಬೇಕು ಎಂದು ಹೇಳಲಾಯಿತು. ಹತ್ತಾರು ಇಂತಹ ಕುಟಂಬಗಳು ರಸ್ತೆ ಮಾರ್ಗವಾಗಿ ಉತ್ತರಪ್ರದೇಶಕ್ಕೆ ಹೋಗಲು ಮತ್ತು ಬಿಡುಗಡೆ ಹೊಂದಿದವರೊಂದಿಗೆ ಮರಳಲು ಬಹಳಷ್ಟು ಕಷ್ಟ ಪಡಬೇಕಾಯಿತು. ಅಂತರ–ರಾಜ್ಯ ನಿರ್ಬಂಧಗಳನ್ನು ನಿವಾರಿಸಕೊಳ್ಳಬೇಕು, ಸಾರಿಗೆಗೆ ಬಹಳಷ್ಟು ಹಣ ಖರ್ಚು ಮಾಡಬೇಕು. ಅವರನ್ನು ಬಂಧಿಸಿದ್ದು ಮತ್ತು ದೂರದ 'ಜೈಲುಗಳಿಗೆ ರವಾನೆ ಮಾಡಿದ್ದು ಸರಕಾರ. ಆದ್ದರಿಂದ ಅವರನ್ನು ಹಿಂದಕ್ಕೆ ಕರೆಸಿಕೊಳ್ಳುವ ಹೊಣೆ ಸರಕಾರದ್ದೇ ಆಗಬೇಕಿತ್ತು. ಅಲ್ಲದೆ, ಜಮ್ಮು ಮತ್ತು ಕಾಶ್ಮೀರದ ಜೈಲುಗಳಲ್ಲಿ ಬಂಧನದಲ್ಲಿ ಇರುವವರನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಇದು ವೈರಸ್‌ನ ಹರಡಿಕೆಯಿಂದ ಅವರ ಜೀವಕ್ಕೆ ಅಪಾಯವನ್ನು ಉಂಟುಮಾಡಿದೆ.

ಈ ನಡುವೆ, ಉಗ್ರಗಾಮಿ ಚಟುವಟಿಕೆಗಳು, ದಾಳಿಗಳು ಭುಗಿಲೆದ್ದಿವೆ, ಎಲ್ಲ ಪ್ರಜಾಪ್ರಭುತ್ವ ಹಕ್ಕುಗಳ ಅಮಾನುಷ ದಮನದ ಹಿನ್ನೆಲೆಯಲ್ಲಿ ಇದು ನಿರೀಕ್ಷಿತವೇ. ಯಾವುದೇ ರಾಜಕಿಯ ಪ್ರಕ್ರಿಯೆಯ ಮತ್ತು ಪ್ರಜಾಪ್ರಭುತ್ವ ಚಟುವಟಿಕೆಗಳ ಅಭಾವ ಹಿಂಸೆ ಮತ್ತು ಪ್ರತಿಹಿಂಸೆಯ ವಿಷ ವರ್ತುಲಕ್ಕೆ ಈಡು ಮಾಡುತ್ತದೆ. ಇದರಿಂದ ಕಷ್ಟ–ನಷ್ಟಗಳನ್ನು ಅನುಭವಿಸುವವರು ಸಾಮಾನ್ಯ ಜನರೇ. ಕಾಶ್ಮೀರದ ಜನತೆ ತಮ್ಮನ್ನು ಕಾಡುತ್ತಿರುವ ಎರಡು ಪೀಡೆಗಳಾದ ಕೊರೊನ ವೈರಸ್ ಮತ್ತು ಪ್ರಜಾಪ್ರಭುತ್ವದ ದಮನದ ನಡುವೆ ವ್ಯತ್ಯಾಸವನ್ನೇ ಕಾಣಲಾರದವರಾಗಿದ್ದಾರೆ.







ಭಾಷಣ ಸಾಕು – ವೇತನ ಬೇಕು – ನೆರವು ಬೇಕು

ರಾಜ್ಯಾದ್ಯಂತ ಮನೆಯ ಮುಂದೆ ಪ್ರತಿಭಟನೆ



ಭಾಷಣ ಸಾಕು ನೆರವು ಬೇಕು, ಉದ್ಯೋಗ ಉಳಿಸಿ ಆರ್ಥಿಕತೆ ರಕ್ಷಿಸಿ, ಆಹಾರ ಒದಗಿಸಿ ಬದುಕು ಉಳಿಸಿ, ದಿನದ 8 ರಿಂದ 12 ಗಂಟೆಗಳ ಹೆಚ್ಚಳ ಬೇಡ ಎಂದು ಸಿಪಿಐ(ಎಂ) ಸೇರಿದಂತೆ ಸಿಐಟಿಯು, ಕೆಪಿಆರ್‌ಎಸ್, ಎಐಎಡಬ್ಲ್ಯೂಯು, ಜೆಎಂಎಸ್ ಎಲ್ಲಾ ಸಂಘಟನೆಗಳೂ ಸೇರಿ ಕಾರ್ಮಿಕರಿಗೆ 14 ಅಗತ್ಯ ವಸ್ತುಗಳ ಕಿಟ್ ಮತ್ತು ಪ್ರತಿ ಕುಟುಂಬಕ್ಕೆ 5000 ರೂ. ವಿತರಿಸಬೇಕು. ಕೇರಳ ಮಾದರಿಯಲ್ಲಿ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿರಾಜ್ಯಾದ್ಯಂತ ಮನೆಯ ಮುಂದೆಯೆ ಪ್ರತಿಭಟನೆಗಳನ್ನು 21 ಏಪ್ರಿಲ್ 2020 ರಂದು ನಡೆಸಲಾಯಿತು.

ಲಾಕ್ ಡೌನ್ ನಂತರ ಕಾರ್ಮಿರಿಗೆ ಮಾರ್ಚ್ ತಿಂಗಳ ಸಂಬಳ



ನೀಡದೇ ಮಾಲೀಕರು ಪ್ರಧಾನಿಗಳು ಹಾಗೂ ಮುಖ್ಯಮಂತ್ರಿಗಳ ಮನವಿಯನ್ನು ಉಲ್ಲಂಘಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಪರಿಹಾರ ಪ್ರಕಟಿಸದೆ ಲಾಕ್‌ಡೌನ್ ಮುಂದುವರೆಸಿವೆ. ಕೆಲವೆಡೆ ನಿಯಮಿತ ಕಾರ್ಮಿಕರನ್ನು ತೆಗೆದು ಹಾಕಿದ್ದಾರೆ. ಸಾರ್ವಜನಿಕ ವಲಯದಲ್ಲಿಯೂ ಹಲವೆಡೆಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಮತ್ತು ಕ್ಯಾಜುವೆಲ್ ಕಾರ್ಮಿಕರನ್ನು ತೆಗೆದುಹಾಕಲಾಗಿದೆ.

ಮಾಲೀಕರ ಸಂಘಗಳು ಲಾಕ್ಡೌನ್ ಕಾಲಾವಧಿಯ ವೇತನ ನೀಡುವ ಹೊಣೆಗಾರಿಕೆಯಿಂದ ನುಣಿಚಿಕೊಳ್ಳಲು, ರಾಷ್ಟ್ರದ 3.5 ಕೋಟಿ ಇ.ಎಸ್.ಐ. ಸೌಲಭ್ಯವಿರುವ ಕಾರ್ಮಿಕರಿಗೆ ಇ.ಎಸ್.ಐ. ನಿಂದ 75 ಶೇಕಡ ವೇತನ ನೀಡಬೇಕೆಂದಿವೆ. ಅದರಂತೆ ಇಎಸ್‌ಐ ನಲ್ಲಿರುವ 85,000 ಸಾವಿರ ಕೋಟಿ ರೂ.ಗಳ ನಿಧಿ ಬಳಸಿ 2 ತಿಂಗಳ ವೇತನ ನೀಡಲು ಸೂಚಿಸಿವೆ.

ಲಾಕ್‌ಡೌನ್‌ನಿಂದ ಕಟ್ಟಡ ಹಮಾಲಿ, ಆಟೋ, ಕೃಷಿ ಕಾರ್ಮಿಕರು ಸೇರಿದಂತೆ ಇತರೆ ಅಸಂಘಟಿತ ಕಾರ್ಮಿಕರು ದುಡಿಮೆ ಇಲ್ಲದೆ ಸಂಕಷ್ಟದಲ್ಲಿದ್ದಾರೆ. ಅಂದೇ ದುಡಿದು ಜೀವನ ಸಾಗುಸುತ್ತಿದ್ದ ಕಾರ್ಮಿಕರ ಬದುಕು ನಡೆಸುವುದು ದುಸ್ತರವಾಗಿದೆ.

ಲಾಕ್‌ಡೌನ್ ಆದ ನಂತರ ರೈತರು ಬೆಳೆದ ಬೆಳೆಗಳು ಜಮೀನಿನಲ್ಲಿಯೆ ನಾಶವಾಗುತ್ತಿದ್ದು ಸೂಕ್ತ ವ್ಯವಸ್ಥೆಗಳನ್ನು ಮಾಡಿ ಬೆಳೆಗಳಿಗೆ ಬೆಂಬಲ ಬೆಲೆ ನೀಡಿ ಸರ್ಕಾರವು ಖರೀದಿಸಬೇಕು ಮತ್ತು ಸಾಗಣೆಗೆ ಅವಕಾಶಗಳನ್ನು ಮಾಡಬೇಕು.

ಪುಟ 16 ಕ್ಕೆ











ಕೊರೊನಾ ಬಿಕ್ಕಟ್ಟು ಮುನ್ನೆಲೆಗೆ ತಳ್ಳಿದ ಹತ್ತು ಪ್ರಶ್ನೆಗಳು

ಆರೋಗ್ಯ, ಆರ್ಥಿಕ, ಸಾಮಾಜಿಕ, ರಾಜಕೀಯ – ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಕೊರೊನಾ ಮಹಾಮಾರಿತಂದ ತೀವ್ರ ಬಿಕ್ಕಟ್ಟು ಹಲವು ಪ್ರಶ್ನೆಗಳನ್ನು ಮುನ್ನೆಲೆಗೆ ತಂದಿದೆ. ಇದುವರೆಗೆ ಈ ಎಲ್ಲಾ ಪ್ರಶ್ನೆಗಳ ಕುರಿತು ಒಂದು ರೀತಿಯ 'ಸಹಮತ'ವನ್ನು ಸಾಧಿಸಲಾಗಿದೆ ಎಂಬ ಭಾವನೆ ಇತ್ತು. ಆದರೆ ನಿಜವಾಗಿಯೂ 1990ರ ದಶಕದ ಆರಂಭದಲ್ಲಿ ಬಂದ ತ್ರಿಮೂರ್ತಿ (ಐ.ಎಂ.ಎಫ್, ವಿಶ್ವ ಬ್ಯಾಂಕ್, ಡಬ್ಲ್ಯೂ.ಟಿ.ಒ.) ಪ್ರಣೀತ ನೀತಿಗಳ ಗೊಂಚಲಿನ ಭಾಗವಾಗಿ ಈ 'ಸಹಮತ'ವನ್ನು ಹೊರಿಸಲಾಗಿತ್ತು ಎನ್ನುವುದು ಹೆಚ್ಚು ಸರಿಯಾದೀತು. ಈ 'ಸಹಮತ'ವನ್ನು ಕೊರೊನಾ ಬಿಕ್ಕಟ್ಟು ಚಿಂದಿ ಚಿಂದಿ ಮಾಡಿಬಿಟ್ಟಿದ್ದು, ಮತ್ತೆ ಈ ಪ್ರಶ್ನೆಗಳು ಮುನ್ನೆಲೆಗೆ ಬರುತ್ತಿವೆ. ಎಲ್ಲೆಡೆ, ಅದರಲ್ಲಿಯೂ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ, ದುಡಿಯುವ ಜನರು ಈ 'ಸಹಮತ'ದ ಲಕ್ಷ್ಮಣ ರೇಖೆ ದಾಟಿ ಬರುವ ಲಕ್ಷಣಗಳಿವೆ. ಈ ಅವಕಾಶವನ್ನು ಪ್ರಗತಿಪರ ಶಕ್ತಿಗಳು ತುರ್ತಾಗಿ ಬಳಸಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಆಳುವ ವರ್ಗಗಳು ಹಳೆಯ 'ಸಹಮತ'ವನ್ನು ಮತ್ತೆ ಸ್ಥಾಪಿಸುವ ಅಥವಾ ಬಿಕ್ಕಟ್ಟಿನ ಆತಂಕದಲ್ಲಿ ಇನ್ನೂ ತೀವ್ರವಾದ ಜನ-ವಿರೋಧಿ ಉತ್ತರಗಳನ್ನು ಹೊರಿಸುವ ಹುನ್ನಾರದಲ್ಲಿ ಖಂಡಿತ ತೊಡಗಲಿವೆ. ಇಂತಹ ಹಲವು ಪ್ರಶ್ನೆಗಳಲ್ಲಿ ಹತ್ತು ಪ್ರಶ್ನೆಗಳು ಪ್ರಮುಖವಾದುವು. ಈ ಹತ್ತು ಪ್ರಶ್ನೆಗಳು ಪರಸ್ಪರ ಹೆಣೆದುಕೊಂಡಿರುವಂಥವೂ ಕೂಡಾ. ಆದ್ದರಿಂದ ಹೊಸ 'ಸಹಮತ' ಸಹ ಈ ಹತ್ತು ಪ್ರಶ್ನೆಗಳನ್ನು ಸಮಗ್ರವಾಗಿ ಉತ್ತರಿಸುವಂಥದ್ದು ಆಗಿರಬೇಕಾಗುತ್ತದೆ.

ಆ ಹತ್ತು ಪ್ರಮುಖ ಪ್ರಶ್ನೆಗಳೆಂದರೆ :

1. ಸಾರ್ವಜನಿಕ ಆರೋಗ್ಯ ವ್ಯವಸ್ಥೆ
2. ಸಾಮಾಜಿಕ ಭದ್ರತೆ
3. ಉದ್ಯೋಗ ಭದ್ರತೆ
4. ಜೀವನಾವಶ್ಯಕ ಆದಾಯ
5. ಜಾಗತೀಕರಣ
6. ವೈಜ್ಞಾನಿಕ ದೃಷ್ಟಿಕೋಣ
7. ಮಾನವೀಯತೆಯ ಆಧಾರಿತ ಐಕ್ಯತೆ
8. ಪ್ರಭುತ್ವದ ಸರ್ವಾಧಿಕಾರಿ ಪ್ರವೃತ್ತಿ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು
9. ಸಾರ್ವಜನಿಕ ಮಾಧ್ಯಮದ ಪಾತ್ರ
10. ಪ್ರಕೃತಿ ಸಂರಕ್ಷಣೆ ಜತೆ ಸಮತೋಲಿತ ಬೆಳವಣಿಗೆ

ಈ ದೀರ್ಘ ಲೇಖನದ ಮೊದಲ ಭಾಗದಲ್ಲಿ, ಮೊದಲ ಐದು ಪ್ರಶ್ನೆಗಳ ಸ್ಥೂಲ ಪರಿಚಯ ಹಾಗೂ ಈಗಿರುವ ಮತ್ತು ಮೂಡಿಸಬೇಕಾದ ಹೊಸ 'ಸಹಮತ'ದ ಸ್ವರೂಪಗಳನ್ನು ನೋಡೋಣ.



ನ್ಯೂಯಾರ್ಕ್ ಆಸ್ಪತ್ರೆಯೊಂದರಲ್ಲಿ ಹೆಣಗಳ ಬ್ಯಾಗುಗಳು ಜಾಗವಿಲ್ಲದೆ ಕಾರಿಡಾರಿನಲ್ಲಿ ಬಿದ್ದಿರುವುದು

ವಸಂತರಾಜ ಎನ್.ಕೆ.

ಕೊರೊನಾ ಮಹಾಮಾರಿ ಜಾಗತಿಕವಾಗಿ ಹರಡಿ ಅಭೂತಪೂರ್ವ ಸಾವು–ನೋವುಗಳನ್ನು ಉಂಟು ಮಾಡುತ್ತಿದೆ. ಆರೋಗ್ಯ, ಆರ್ಥಿಕ, ಸಾಮಾಜಿಕ, ರಾಜಕೀಯ – ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಇದು ತಂದ ತೀವ್ರ ಬಿಕ್ಕಟ್ಟು ಹಲವು ಪ್ರಶ್ನೆಗಳನ್ನು ಮುನ್ನೆಲೆಗೆ ತಂದಿದೆ. ಇವು ಈಗಾಗಲೇ ಬಹುಚರ್ಚಿತ ಮತ್ತು ವಿವಾದಿತವಾದ ಪ್ರಶ್ನೆಗಳೇ. ಇವೆಲ್ಲವೂ ಈ ಎಲ್ಲಾ ಕ್ಷೇತ್ರಗಳಲ್ಲಿ ಸಾರ್ವಜನಿಕ ನೀತಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಪ್ರಶ್ನೆಗಳೇ. ಆದರೆ ಇದುವರೆಗೆ ಈ ಎಲ್ಲಾ ಪ್ರಶ್ನೆಗಳ ಕುರಿತು ಒಂದು ರೀತಿಯ 'ಸಹಮತ'ವನ್ನು ಸಾಧಿಸಲಾಗಿದೆ ಎಂಬ ಭಾವನೆ ಇತ್ತು. ಆದರೆ ನಿಜವಾಗಿಯೂ 1990ರ ದಶಕದ ಆರಂಭದಲ್ಲಿ ಬಂದ ತ್ರಿಮೂರ್ತಿ (ಐ.ಎಂ.ಎಫ್, ವಿಶ್ವ ಬ್ಯಾಂಕ್, ಡಬ್ಲ್ಯೂ.ಟಿ.ಒ.) ಪ್ರಣೀತ ನೀತಿಗಳ ಗೊಂಚಲಿನ ಭಾಗವಾಗಿ ಈ 'ಸಹಮತ'ವನ್ನು ಹೊರಿಸಲಾಗಿತ್ತು ಎನ್ನುವುದು ಹೆಚ್ಚು ಸರಿಯಾದೀತು.

ಈ 'ಸಹಮತ'ವನ್ನು ಕೊರೊನಾ ಬಿಕ್ಕಟ್ಟು ಚಿಂದಿ ಚಿಂದಿ ಮಾಡಿಬಿಟ್ಟಿದ್ದು, ಮತ್ತೆ ಈ ಪ್ರಶ್ನೆಗಳು ಮುನ್ನೆಲೆಗೆ ಬರುತ್ತಿವೆ. ಅವುಗಳಿಗೆ ಹೊಸ ಉತ್ತರ ಹುಡುಕಲು ಮತ್ತು ಅವುಗಳನ್ನು ಜನಪ್ರಿಯಗೊಳಿಸಿ ಒಂದು ಹೊಸ ಜನಪರ ಜೀವಪರ ಪ್ರಗತಿಪರ 'ಸಹಮತ' ಸ್ಥಾಪಿಸಲು ಇದು ಸಕಾಲ. ಏಕೆಂದರೆ 1930ರ ಮಹಾಕುಸಿತದ ನಂತರದ ಹಿಂದಿನ ಯಾವ ಬಿಕ್ಕಟ್ಟೂ ಅಭಿವೃದ್ಧ ದೇಶಗಳ ಕಾರ್ಮಿಕರ ದುಡಿಯುವ ಜನರ ಜೀವನಕ್ಕೆ ಇಂತಹ ಶಾಕ್‌ಗಳನ್ನು ಕೊಟ್ಟಿದ್ದಿಲ್ಲ, ಇಡೀ ಜಗತ್ತನ್ನು ಈ ರೀತಿ ವಿನಾಶದ ಅಂಚಿಗೆ ತಂದು ನಿಲ್ಲಿಸಿದ್ದೂ ಇಲ್ಲ.ಈ ಶಾಕ್ ನಿಂದಾಗಿ ಎಲ್ಲೆಡೆ, ಅದರಲ್ಲಿಯೂ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ, ದುಡಿಯುವ ಜನರು ಈ 'ಸಹಮತ'ದ ಲಕ್ಷ್ಮಣ ರೇಖೆ ದಾಟಿ ಬರುವ ಲಕ್ಷಣಗಳಿವೆ. ಈ ಅವಕಾಶವನ್ನು ಪ್ರಗತಿಪರ ಶಕ್ತಿಗಳು ತುರ್ತಾಗಿ ಬಳಸಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಆಳುವ ವರ್ಗಗಳು ಹಳೆಯ 'ಸಹಮತ'ವನ್ನು ಮತ್ತೆ ಸ್ಥಾಪಿಸುವ ಅಥವಾ ಬಿಕ್ಕಟ್ಟಿನ ಆತಂಕದಲ್ಲಿ ಇನ್ನೂ ತೀವ್ರವಾದ ಜನ-ವಿರೋಧಿ ಉತ್ತರಗಳನ್ನು ಹೊರಿಸುವ ಹುನ್ನಾರದಲ್ಲಿ ಖಂಡಿತ ತೊಡಗಲಿವೆ. ಇಂತಹ ಹಲವು ಪ್ರಶ್ನೆಗಳಲ್ಲಿ ಹತ್ತು ಪ್ರಶ್ನೆಗಳು ಪ್ರಮುಖವಾದುವು. ಈ ಹತ್ತು ಪ್ರಶ್ನೆಗಳು ಪರಸ್ಪರ ಹೆಣೆದುಕೊಂಡಿರುವಂಥವೂ ಕೂಡಾ. ಆದ್ದರಿಂದ ಹೊಸ 'ಸಹಮತ' ಸಹ ಈ ಹತ್ತು ಪ್ರಶ್ನೆಗಳನ್ನು ಸಮಗ್ರವಾಗಿ ಉತ್ತರಿಸುವಂಥದ್ದು ಆಗಿರಬೇಕಾಗುತ್ತದೆ.

ಆ ಹತ್ತು ಪ್ರಮುಖ ಪ್ರಶ್ನೆಗಳೆಂದರೆ:

1. ಸಾರ್ವಜನಿಕ ಆರೋಗ್ಯ ವ್ಯವಸ್ಥೆ 2. ಸಾಮಾಜಿಕ ಭದ್ರತೆ 3. ಉದ್ಯೋಗ ಭದ್ರತೆ 4. ಜೀವನಾವಶ್ಯಕ ಆದಾಯ 5. ಜಾಗತೀಕರಣ 6. ವೈಜ್ಞಾನಿಕ ದೃಷ್ಟಿಕೋಣ 7. ಮಾನವೀಯತೆಯ ಆಧಾರಿತ ಐಕ್ಯತೆ 8. ಪ್ರಭುತ್ವದ ಸರ್ವಾಧಿಕಾರಿ ಪ್ರವೃತ್ತಿ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು 9. ಸಾರ್ವಜನಿಕ ಮಾಧ್ಯಮದ ಪಾತ್ರ10. ಪ್ರಕೃತಿ ಸಂರಕ್ಷಣೆ ಜತೆ ಸಮತೋಲಿತ ಬೆಳವಣಿಗೆ

ಮುನ್ನೆಲೆಗೆ ಬಂದ ಆ ಹತ್ತು ಪ್ರಶ್ನೆಗಳ ಸ್ಥೂಲ ಪರಿಚಯ ಹಾಗೂ ಈಗಿರುವ ಮತ್ತು ಮೂಡಿಸಬೇಕಾದ ಹೊಸ 'ಸಹಮತ'ದ ಸ್ವರೂಪಗಳನ್ನು ಈಗ ನೋಡೋಣ.

1. ಸಾರ್ವಜನಿಕ ಆರೋಗ್ಯ ವ್ಯವಸ್ಥೆ :

ಇದು ಈ ಬಿಕ್ಕಟ್ಟಿನಲ್ಲಿ ವ್ಯಾಪಕವಾಗಿ ಮುನ್ನೆಲೆಗೆ ಬಂದ ಪ್ರಧಾನಪ್ರಶ್ನೆ. ಅಮೆರಿಕ ಮತ್ತು ಯುರೋಪಿನ ಅಭಿವೃದ್ಧ ದೇಶಗಳಲ್ಲಿ ಅತ್ಯಂತ ಆಧುನಿಕ ಆಸ್ಪತ್ರೆಗಳು, ಪರಿಣತ ವೈದ್ಯರು, ಔಷಧಿಗಳು, ವೈದ್ಯಕೀಯ ಉಪಕರಣಗಳು, ಇತರ ಸವಲತ್ತುಗಳು ಲಭ್ಯವಿದ್ದಾಗಲೂ ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಪ್ರಮಾಣದ ಸಾವು–ನೋವುಗಳು ಯಾಕೆ ಸಂಭವಿಸಿದವು? ಹಲವು ವಾರಗಳ ನಂತರವೂ ಯಾಕೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ? ಎಂಬ ಪ್ರಶ್ನೆಗಳು ಪ್ರಮುಖವಾಗಿ ಎದ್ದಿವೆ.ಏಕೆಂದರೆ ಈ ದೇಶಗಳಲ್ಲಿ ಇದ್ದದ್ದು ಅತ್ಯಾಧುನಿಕ ಆಸ್ಪತ್ರೆಗಳ, ಔಷಧಿ ಕಂಪನಿಗಳ ಮತ್ತು ವೈದ್ಯಕೀಯ ವಿಮಾ ಕಂಪನಿಗಳ ಕೂಟದ ಲಾಭಕೋರ 'ದಕ್ಷ'ವೈದ್ಯಕೀಯ ಉದ್ಯಮ; 'ಆರೋಗ್ಯ ವ್ಯವಸ್ಥೆ'ಯಲ್ಲ. ಬಹುಭಾಗ ಖಾಸಗಿ ದೈತ್ಯ ಕಾರ್ಪೊರೇಶನ್ ಗಳ ದುಷ್ಟಕೂಟದ ಒಡೆತನದಲ್ಲಿರುವ ಈ ಉದ್ಯಮ ಸಂಘಟಿತವಾಗಿದ್ದು ಗರಿಷ್ಠ ಲಾಭಕ್ಕೆ; ಸಾರ್ವಜನಿಕರ ಆರೋಗ್ಯಕ್ಕೆ ಬರುವ ಸವಾಲುಗಳನ್ನು ಗ್ರಹಿಸಿ ಅವನ್ನು ಮುನ್ನೆಚ್ಚರಿಕೆಯ ಕ್ರಮಗಳ ಮೂಲಕ ತಡೆಯುವ, ನಾಗರಿಕರ ಆರೋಗ್ಯ ಕಾಪಾಡುವ, ತೀವ್ರ ಸವಾಲುಗಳು ಬಂದಾಗ ಅತ್ಯಂತ ತುರ್ತಿನಿಂದ ಸಾವು–ನೋವುಗಳನ್ನು ಕನಿಷ್ಟಗೊಳಿಸುವ 'ಆರೋಗ್ಯ ಸೇವೆ'ಗಾಗಿಯಲ್ಲ. ಇದು ಎಲ್ಲೆಡೆ ಚರ್ಚೆಯ ವಿಷಯವಾಗಿದೆ.

ಯುರೋಪಿನ ಹಲವು ದೇಶಗಳಲ್ಲಿ ಸ್ಥಾಪಿತವಾಗಿದ್ದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು 1990ರ ದಶಕದಿಂದ ದುರ್ಬಲಗೊಳಿಸುತ್ತಾ ಬಂದಿದ್ದು, 2008 ಬಿಕ್ಕಟ್ಟಿನ 'ಪರಿಹಾರ'ವಾಗಿ ಯುರೋ ಕೂಟದಲ್ಲಿ 'ಮಿತವ್ಯಯ'ದ ನೆಪದಲ್ಲಿ ಇನ್ನಷ್ಟು ತೀವ್ರವಾಗಿ ದುರ್ಬಲಗೊಳಿಸಲಾಗಿದೆ. ಇದಲ್ಲದೆ ಇದ್ದ ಬದ್ದ 'ಆರೋಗ್ಯ ವ್ಯವಸ್ಥೆ'ಯಲ್ಲಿ ಸಹ ಸಾರ್ವಜನಿಕ ಆರೋಗ್ಯಕ್ಕೆ ಸವಾಲಾಗಬಲ್ಲ ಸಾಂಕ್ರಾಮಿಕ ರೋಗಗಳನ್ನು ಗುರುತಿಸಿ ತಕ್ಕ ಮುನ್ನೆಚ್ಚರಿಕೆ ಇತ್ಯಾದಿ ಕ್ರಮಗಳನ್ನು ನಿಭಾಯಿಸುವ ವ್ಯವಸ್ಥೆ ಬಹಳ ದುರ್ಬಲವಾಗಿತ್ತು ಅಥವಾ ಇರಲೇ ಇಲ್ಲ ಎಂಬುದು ಇನ್ನೊಂದು ಮುನ್ನೆಲೆಗೆ ಬಂದ ಸಂಗತಿ. 2003 ರಿಂದ 'ಸಾರ್ಸ್' ನಿಂದ ಆರಂಭವಾಗಿ ಹಲವಾರು ಜಾಗತಿಕವಾಗಿ ಹಬ್ಬಿದ ಸಾಂಕ್ರಾಮಿಕಗಳನ್ನು ಎದುರಿಸುವ ಕುರಿತು ಇವು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಇದು ಭೀಕರ ಸಾವು–ನೋವುಗಳಿಗೆ ಕಾರಣವಾಯಿತು ಎಂಬುದು ಈ ದೇಶಗಳ ಜನತೆಗೆ ಈಗ ಸ್ಪಷ್ಟವಾಗಿದೆ. ಬ್ರಿಟನ್ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತು ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿಗಳ ಪ್ರಾಥಮಿಕ ಆಯ್ಕೆಯ ಪ್ರಚಾರಗಳಲ್ಲಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಒಂದು ಪ್ರಮುಖ ವಿಷಯವಾಗಿತ್ತು ಎಂಬುದು ಗಮನಾರ್ಹ.

ಹಾಗಿರುವಾಗ, ಈ ಅಭಿವೃದ್ಧ ದೇಶಗಳ ಮಾದರಿಗಳ ಎಲ್ಲ ಅತ್ಯಂತ ಕೆಟ್ಟ ಅಂಶಗಳನ್ನೇ ಕಾಪಿ ಮಾಡಿದ ಭಾರತದಂತಹ ದೇಶಗಳ ಪಾಡೇನು?ಬಾರತದ ದುಡಿಯುವ ಜನರ ಒಂದು ಸಣ್ಣ ವಿಭಾಗ ಮಾತ್ರ ತಮ್ಮ ಉದ್ಯೋಗದಾತರಿಂದ ಪಡೆದ ಉಚಿತ ಆರೋಗ್ಯ ಸೇವೆ, ಆರೋಗ್ಯ ವಿಮೆ ಇತ್ಯಾದಿಗಳನ್ನು ಹೊಂದಿದೆ. ಇನ್ನೊಂದು ಹೆಚ್ಚು ಅನುಕೂಲಸ್ಥ ಸಣ್ಣ ವಿಭಾಗ ತಾವೇ ತೆರುವ ಆರೋಗ್ಯ ವಿಮೆಯನ್ನು ಹೊಂದಿದೆ. ಭಾರತದ ಬಹುಸಂಖ್ಯಾತರಿಗೆ ಆರೋಗ್ಯ ಸೇವೆ ಎಂಬುದೇ ಇಲ್ಲ. ಭಾರತ ಆರೋಗ್ಯ ಸೇವೆಯಲ್ಲಿ ಯಾವ ಸೂಚಕಗಳಿಂದ ನೋಡಿದರೂ ಜಗತ್ತಿನಲ್ಲೇ ಕೊನೆಯ ಸಾಲಿನ ದೇಶಗಳಲ್ಲಿ ಬರುತ್ತದೆ. ಅದು ಜಿಡಿಪಿ ಅಥವಾ ಬಜೆಟಿನಲ್ಲಿ ಆರೋಗ್ಯದ ಮೇಲೆ ಸರಕಾರದ ಖರ್ಚಿನ ಪ್ರಮಾಣ ಇರಬಹುದು; ಅಥವಾ ಪ್ರತಿ 10 ಸಾವಿರ ಜನರಿಗೆ ಎಷ್ಟು ವೈದ್ಯರು, ದಾದಿಗಳು, ಆಸ್ಪತ್ರೆ ಹಾಸಿಗೆಗಳು ಇವೆ ಎನ್ನುವುದರಲ್ಲಿ ಇರಬಹುದು: ಪ್ರಾಥಮಿಕ, ಮತ್ತಿತರ ಹಂತಗಳ ಆರೋಗ್ಯ ಸೇವೆಗೆ ಸರಾಸರಿ ಎಷ್ಟು ದೂರ ಹೋಗಬೇಕಾಗುತ್ತದೆ ಎಂಬುದು ಇರಬಹುದು; ಆರೋಗ್ಯ ಸೇವೆಗೆ ಕೈಯಿಂದ ಹಾಕಬೇಕಾದ ತಲಾ ಖರ್ಚು

ಪುಟ 10 ನೋಡಿ



ಎನ್.95 ಮಾಸ್ಕ್ ಗಳಿಲ್ಲದೆ ಕೊವಿದ್ ರೋಗಿಗಳ ಆರೈಕೆ ಸಾಧ್ಯವಿಲ್ಲ ಎಂದು ನ್ಯೂಯಾರ್ಕ್ ಆಸ್ಪತ್ರೆಯಲ್ಲಿ ಮುಷ್ಕರ ಹೂಡಿರುವುದು

ಉದ್ಯೋಗ ಭದ್ರತೆ ಕಚೇರಿಯ ಮುಂದೆ ನಿರುದ್ಯೋಗ ಭತ್ಯೆಗೆ ರಿಜಿಸ್ಟರ್ ಮಾಡಲು ಅಮೆರಿಕನ್ ಕಾರ್ಮಿಕರ ಕ್ಯೂ



ಕೊರೊನಾ-ಮುನ್ನೆಲೆಗೆ ತಳ್ಳಿದ ಹತ್ತು ಪ್ರಶ್ನೆಗಳು.... ಪುಟ 9 ರಿಂದ

ಇರಬಹುದು; ಯಾವುದೇ ರೀತಿಯ ಆರೋಗ್ಯ ಸೇವೆ ಇಲ್ಲದ ಜನರ ಪ್ರಮಾಣ ಇರಬಹುದು – ಎಲ್ಲಾ ಸೂಚಕಗಳಲ್ಲೂ ಭಾರತ ಬಹಳ ಹಿಂದಿದೆ. ಕೊರೊನಾ ಬಿಕ್ಕಟ್ಟು ಇದನ್ನು ಢಾಳಾಗಿ ಮುನ್ನೆಲೆಗೆ ತಂದಿದೆ. ಆದರೂ ಕೊವಿಡ್ ತಪಾಸಣೆಯನ್ನು ಸಹ ಖಾಸಗಿ ಲ್ಯಾಬ್ ಗಳು ಮಾಡಿದರೆ ರೂ. 4500 ವರೆಗೆ ವಸೂಲಿ ಮಾಡಬಹುದು ಎಂದಿದೆ ಸರಕಾರ. ತಪಾಸಣೆ ಉಚಿತವಾಗಿರಬೇಕು ಎಂಬ ಒತ್ತಾಯಕ್ಕೆ ಸುಪ್ರೀಂ ಕೋರ್ಟಿನ ಮೆಟ್ಟಿಲು ಹತ್ತಲೂ ಸರಕಾರ ಹೇಸಿಲ್ಲ.

ಅಭಿವೃದ್ಧ ಬಂಡವಾಳ ದೇಶಗಳು ಮತ್ತು ಭಾರತದಂತಹ ಮೂರನೇ ಜಗತ್ತಿನ ದೇಶಗಳ ಈ ಅಗಾಧ ವೈಫಲ್ಯಕ್ಕೆ ಪ್ರತಿಯಾಗಿ ಚೀನಾ ಈ ಬಿಕ್ಕಟ್ಟನ್ನು ಬಗೆಹರಿಸಿದ್ದು ಮ್ಯಾಜಿಕ್ ನಂತೆ ಕಂಡಿತು. ಆದರೆ ಇದರ ಹಿಂದೆ ಇದ್ದಿದ್ದು ಪ್ರಬಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ತೀವ್ರ ಸವಾಲು ಎದುರಾದಾಗ ಸರಕಾರ ಮತ್ತು ಇಡೀ ದೇಶದ ಜನತೆ ಒಂದಾಗಿ ಎಲ್ಲ ಸಂಪನ್ಮೂಲಗಳನ್ನು ಅತ್ಯಂತ ತುರ್ತಾಗಿ ಹೂಡಿದ ಮಾನವ-ಕೇಂದ್ರಿತ ಧೋರಣೆ. ಕ್ಯೂಬಾ ತನಗೆ ದಿಗ್ಬಂಧನ ಹಾಕಿದ್ದ ಇಟಲಿ ಸೇರಿದಂತೆ ಹಲವು ದೇಶಗಳಿಗೆ ಕೊರೊನಾ ಬಿಕ್ಕಟ್ಟು ಎದುರಿಸಲು ವೈದ್ಯಕೀಯ ಸಿಬ್ಬಂದಿಯನ್ನು ಕಳಿಸಿ 'ವೈದ್ಯಕೀಯ ಅಂತರ್ರಾಷ್ಟ್ರೀಯ ಸೌಹಾರ್ದತೆ'ಯನ್ನು ಮೆರೆಯಿತು. ಭಾರತದಲ್ಲೂ ಕೇರಳದ ಎಲ್.ಡಿ.ಎಫ್ ಸರಕಾರ ಕೊರೊನಾ ಬಿಕ್ಕಟ್ಟನ್ನು ಎದುರಿಸುವಲ್ಲಿ ದೇಶಕ್ಕೆ ಮಾದರಿಯಾಗಿದೆ ಎಂದು ಸಾರ್ವತ್ರಿಕ ಮೆಚ್ಚುಗೆಗೆ ಪಾತ್ರವಾಗಿದೆ. ಇದರ ಹಿಂದೆ ಇದ್ದಿದ್ದು ಜನರ ಸಮಸ್ಯೆಗಳ ತುರ್ತು ಪರಿಹಾರಕ್ಕೆ ಬದ್ಧವಾದ ಜನಪರ ಸರಕಾರ ಮಾತ್ರವಲ್ಲ, ದಶಕಗಳಿಂದ ಕಟ್ಟಿದ ಭದ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆ. ಈ ಸಕಾರಾತ್ಮಕ ಮಾದರಿಗಳು ಜನತೆಯ ಗಮನ ಸೆಳೆದಿವೆ. ಇವನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕಾಗಿದೆ.

ದೇಶದ ಜನತೆಯ ಪ್ರಾಣ ಮತ್ತು ಸಾಮಾನ್ಯ ಜೀವನಶೈಲಿಯನ್ನು ಯಾವುದು ಹೆಚ್ಚು ಸಮರ್ಥವಾಗಿ ರಕ್ಷಣೆ ಮಾಡುತ್ತದೆ? ಅತ್ಯಂತ ಆಧುನಿಕ ದುಬಾರಿ ಮಾರಕ ಶಸ್ತ್ರಾಸ್ತ್ರಗಳೋ ಅಥವಾ ಪ್ರಬಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೋ ಎಂಬ ಉಪಪ್ರಶ್ನೆಯನ್ನು ಈ ಪ್ರಶ್ನೆ ಮುನ್ನೆಲೆಗೆ ತಂದಿದೆ. ಈ ದೇಶಗಳ ಮಾತ್ರವಲ್ಲ ಇಡೀ ಜಗತ್ತಿನ ಜನ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಆರೋಗ್ಯ ವ್ಯವಸ್ಥೆಯನ್ನು ಬಡವಾಗಿಸಿ ಶಸ್ತ್ರಾಸ್ತ್ರಗಳಿಗೆ ದುಡ್ಡು ಸುರಿದ ಅಮೆರಿಕ ಮತ್ತು ಯುರೋ ಕೂಟದ ದೇಶಗಳು, ಸಾವಿರಾರು ನಾಗರಿಕರ ಪ್ರಾಣ ರಕ್ಷಣೆ ಮಾಡಲಾಗದೆ ಹೋದ ಅಗಾಧ ವೈಫಲ್ಯವೇ, ಸರಿಯಾದ ಉತ್ತರ ಯಾವುದು ಎಂಬುದನ್ನು ದೃಢಪಡಿಸುತ್ತದೆ.

ಆರೋಗ್ಯದ ಹಕ್ಕು ಮಾನವ ಹಕ್ಕುಗಳ ಪ್ರಮುಖ ಅಂಶ. 'ತೊಟ್ಟಿಲಿನಿಂದ ಗೋರಿಯ ವರೆಗೆ' ಸಾರ್ವತ್ರಿಕ ಉಚಿತ ಆರೋಗ್ಯ ಸೇವೆಯನ್ನು ಒದಗಿಸುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆ 1970ರ ದಶಕದ ವರೆಗೆ 'ಕಲ್ಯಾಣ ರಾಜ್ಯ'ದ ಕಲ್ಪನೆಯ ಅವಿಭಾಜ್ಯ ಅಂಗವಾಗಿತ್ತು. ಸೋವಿಯೆಟ್ ಒಕ್ಕೂಟದಿಂದ ಆರಂಭಿಸಿ ಎಲ್ಲ ಸಮಾಜವಾದಿ ದೇಶಗಳಲ್ಲಿ ಇಂತಹ ವ್ಯವಸ್ಥೆಯನ್ನು ಮೊದಲು ಜಾರಿ ಮಾಡಿದ್ದವು. ಇದರ ಪರಿಣಾಮವಾಗಿ ಮತ್ತು ಕಾರ್ಮಿಕರ ಚಳುವಳಿಗಳ ಒತ್ತಡಗಳಿಂದಾಗಿ ಪಶ್ಚಿಮ ಯುರೋಪಿನ ಹೆಚ್ಚಿನ ದೇಶಗಳಲ್ಲಿ ಮತ್ತು ಉತ್ತರ ಯುರೋಪಿನ ದೇಶಗಳಲ್ಲಿ ಇನ್ನೂ ಹೆಚ್ಚು ಸಮಗ್ರವಾಗಿ ಜಾರಿಯಾಗಿತ್ತು. ಆದರೆ 1980ರ ನಂತರ ಥ್ಯಾಚರ್-ರೇಗನ್ ದಾಳಿಯ ಭಾಗವಾಗಿ ಈ ವ್ಯವಸ್ಥೆಯನ್ನು ಹಂತ ಹಂತವಾಗಿ ನಾಶ ಮಾಡಲಾಗಿದೆ. ಸಾರ್ವತ್ರಿಕ ಉಚಿತ ಆರೋಗ್ಯ ಸೇವೆಯನ್ನು ಜಾರಿ ಮಾಡದಿದ್ದರೂ ಅದು ಒಂದು ಗುರಿಯಾಗಿಯಾದರೂ ಸ್ವತಂತ್ರ ಭಾರತದ ಮೊದಲ ದಶಕಗಳಲ್ಲಿ ಇತ್ತು.

ಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೆ ಉದ್ಯೋಗದಾತರು ಸಾರ್ವತ್ರಿಕ ಉಚಿತ ಆರೋಗ್ಯ ಸೇವೆಯನ್ನು ಕಡ್ಡಾಯವಾಗಿ ಒದಗಿಸಬೇಕು ಎಂಬ ಹಕ್ಕೊತ್ತಾಯ ಎತ್ತಬೇಕಾಗಿದೆ. ಯಾವುದೇ ಆರೋಗ್ಯ ಸೇವೆಯ ಗ್ಯಾರಂಟಿ ಇಲ್ಲದ ಅಸಂಘಟಿತ ವಲಯದ ಕಾರ್ಮಿಕರು, ಕೂಲಿಕಾರರು, ರೈತರುಗಳಿಂದ ಆರಂಭಿಸಿ ಎಲ್ಲರಿಗೂ ಸಾರ್ವತ್ರಿಕ ಉಚಿತ ಆರೋಗ್ಯ ಸೇವೆಯನ್ನು ಒದಗಿಸುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕುರಿತು ಜನರನ್ನು ಅಣಿ ನೆರೆಸಬೇಕಾಗಿದೆ.

2. ಸಾಮಾಜಿಕ ಭದ್ರತೆ:

ಭಾರತದ ಸಂಘಟಿತ ವಲಯದ ಸಂಘಟಿತ ಉದ್ಯೋಗಿಗಳಿಗೆ ಮಾತ್ರ, ಅದೂ ಸೀಮಿತವಾದ ಸಾಮಾಜಿಕ ಭದ್ರತೆ ಇದೆ. ಹೆಚ್ಚಿನವರಿಗೆ ಭವಿಷ್ಯ ನಿಧಿ, ಸೀಮಿತ ಪ್ರಮಾಣದವರಿಗೆ ಪಿಂಚಣಿ ಇದೆ. ಬಹಳ ಸಣ್ಣ ಮೊತ್ತದ ವಿಧವಾ, ವೃದ್ಧರ ಪಿಂಚಣಿ ವ್ಯವಸ್ಥೆ ಇದೆ. ಭಾರತದ ಶೇ.80 ರಷ್ಟು ಜನ ದಿನಾ ದುಡಿದು ತಿನ್ನುವವರು. ದಿನದ ದುಡಿಮೆ ಮತ್ತು ಅದರಿಂದ ಬರುವ ಆದಾಯ ಇಲ್ಲದಿದ್ದರೆ ಅವರು ಉಪವಾಸ ಮಲಗಬೇಕು. ಮೊದಲ ಲಾಕ್ ಡೌನ್ ಘೋಷಣೆಯ ನಂತರ ತಮ್ಮೂರಿನ ಕಡೆಗೆ ವಲಸೆ ಕಾರ್ಮಿಕರ ಸಾಮೂಹಿಕ ನಡಿಗೆ, ಬವಣೆ, ಸಾವು-ನೋವುಗಳು ಮತ್ತು ಎರಡನೇ ಲಾಕ್ ಡೌನ್ ಘೋಷಣೆಯ ನಂತರ ಆಕ್ರೋಶ-ಗಲಭೆಗಳು ವಲಸೆ ಕಾರ್ಮಿಕರ ಈ ಅಭದ್ರತೆಯನ್ನು ಕಣ್ಣಿಗೆ ಕಟ್ಟುವಂತೆ ಮಾಡಿವೆ. ಆದರೆ ತಮ್ಮ ಸ್ವಂತ ಸ್ಥಳದಲ್ಲೇ ವಾಸಿಸುವ ನಗರ-ಗ್ರಾಮೀಣ ಬಡವರನ್ನೂ ಕೂಡಾ ಸಾಮಾಜಿಕ ಭದ್ರತೆಯ ಸಂಪೂರ್ಣ ಅಭಾವ ಕಾಡುತ್ತಿದೆ. ದೈನಂದಿನ ಆಹಾರ, ಮನೆ ಬಾಡಿಗೆ ಬಿಟ್ಟರೆ ಯಾವುದಕ್ಕೂ ಆದಾಯ ಇಲ್ಲದ ಸ್ಥಿತಿ. ಅನಿರೀಕ್ಷಿತ ವೈದ್ಯಕೀಯ ಅಥವಾ ಇತರ ಅತ್ಯಾವಶ್ಯಕ ಖರ್ಚು ಬಂದರೆ ಸಹ ಪರದಾಡುವ ಸ್ಥಿತಿ. ರೈತರು ಸೇರಿದಂತೆ ಹಲವಾರು ಬಡವರ ಆತ್ಮಹತ್ಯೆಗೆ ಕಾರಣ ಇಂತಹ ಅನಿರೀಕ್ಷಿತ ಖರ್ಚು ಬಂದಾಗ ತೀವ್ರ ಅಭದ್ರತೆ ಕಾಡುವುದೇ ಕಾರಣ. ಇಂತಹುದರಲ್ಲಿ 6 ವಾರಗಳ ಲಾಕ್ ಡೌನ್ ನಲ್ಲಿ ಆಗಲೇ (ಆತ್ಮಹತ್ಯೆಗಳು ಸೇರಿದಂತೆ) 200ಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ. ಎಲ್ಲರಿಗೂ ಆಹಾರ ಭದ್ರತೆ ಮತ್ತು ದುಡಿಮೆ ಮಾಡಬಲ್ಲವರಿಗೆ ಉದ್ಯೋಗ ಭದ್ರತೆ ಇಲ್ಲದೆ ಸಾಮಾಜಿಕ ಭದ್ರತೆ ಇಲ್ಲ. ಆಹಾರ ಭದ್ರತೆಯನ್ನು ಒದಗಿಸಲು, ಎ.ಪಿ.ಎಲ್/ಬಿ.ಪಿ.ಎಲ್ ಮುಂತಾದ ವರ್ಗೀಕರಣಗಳನ್ನು ನಿಲ್ಲಿಸಿ ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಜಾರಿ ಮಾಡುವುದು, ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ, ಶಾಲಾ ಮಕ್ಕಳಿಗೆ ಬಿಸಿಯೂಟ ಕಾರ್ಯಕ್ರಮವನ್ನು ಸಾರ್ವತ್ರಿಕಗೊಳಿಸುವುದು ಅಗತ್ಯ.

ಆದರೆ ಅವಷ್ಟೇ ಅಲ್ಲ. ಸ್ವ-ಉದ್ಯೋಗಿಗಳೂ ಸೇರಿದಂತೆ ಎಲ್ಲರಿಗೂ 60 ವರ್ಷದ ನಂತರ ನೆಮ್ಮದಿಯಿಂದ ಘನತೆಯಿಂದ ಬಾಳುವ ಸಾರ್ವತ್ರಿಕ ಕನಿಷ್ಠ ಪಿಂಚಣಿ ವ್ಯವಸ್ಥೆ ಇರಬೇಕು. ಉದ್ಯೋಗ ಕಳೆದುಕೊಂಡಾಗ ನಿರುದ್ಯೋಗ ಭತ್ಯೆ ಇರಬೇಕು. ಆಗ ಮಾತ್ರ ಇಂತಹ ತುರ್ತು ಪರಿಸ್ಥಿತಿಯಲ್ಲಿ ಮಧ್ಯಮ ಮತ್ತು ಶ್ರೀಮಂತರು ಇದ್ದಂತೆ, ಬಡವರೂ ಆತಂಕರಹಿತರಾಗಿ ಇರಬಹುದು. ಇದು ಇಂತಹ ಪರಿಸ್ಥಿತಿಯಲ್ಲಿ ಬೇಡಿಕೆಯ ಏರುಪೇರಿನಿಂದ ಆರ್ಥಿಕ ಬಿಕ್ಕಟ್ಟು ಇನ್ನಷ್ಟು ತೀವ್ರವಾಗುವುದನ್ನು ಸಹ ತಪ್ಪಿಸುತ್ತದೆ.

ಇಂತಹ ಸಾಮಾಜಿಕ ಭದ್ರತೆಯನ್ನು ಜಾರಿ ಮಾಡುವುದು ಸಾಧ್ಯ ಎಂದು ಸೋವಿಯೆಟ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳು ತೋರಿಸಿಕೊಟ್ಟಿದ್ದವು. ಈ ಒತ್ತಡದಲ್ಲಿ ಮತ್ತು 1930ರ ದಶಕದ ಮಹಾ ಕುಸಿತದ ದುಃಸ್ವಪ್ನದ ಪರಿಣಾಮವಾಗಿ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲೂ ಉದ್ಯೋಗ ಭದ್ರತೆ, ನಿರುದ್ಯೋಗ ಭತ್ಯೆ, ಸರಕಾರ ಭರಿಸುವ ಆರೋಗ್ಯ ವಿಮೆ, ಸಾರ್ವತ್ರಿಕ ಪಿಂಚಣಿ ಮುಂತಾದವುಗಳು ಇರುವ ಸಾಮಾಜಿಕ ಭದ್ರತೆಯು ಜಾರಿಗೆ ಬಂದಿತ್ತು. ಆದರೆ ಇದು ಸಹ ನವ-ಉದಾರವಾದಿ ದಾಳಿಗೆ ಸಿಲುಕಿ ದುರ್ಬಲವಾಗಿವೆ. ಅದನ್ನು ವ್ಯವಸ್ಥಿತವಾಗಿ ಕಳಚಿ ಹಾಕುವ ಹುನ್ನಾರ ನಡೆದಿದೆ. ಫ್ರಾನ್ಸಿನಲ್ಲಿ ಸಾರ್ವತ್ರಿಕ ಪಿಂಚಣಿ ವ್ಯವಸ್ಥೆಯನ್ನು ದುರ್ಬಲಗೊಳಿಸುವುದರ ವಿರುದ್ಧ ವ್ಯಾಪಕ ಸರಣಿ ಮುಷ್ಕರಗಳು, ಪ್ರತಿಭಟನೆಗಳು, ಬೀದಿ ಕಾಳಗಗಳೂ ನಡೆದಿದ್ದವು.

ಕೊರೊನಾ ಬಿಕ್ಕಟ್ಟಿನ ಪರಿಣಾಮವಾಗಿ ಹೆಚ್ಚಿನ ಯುರೋಪಿನ ದೇಶಗಳು ಸಂಘಟಿತ ವಲಯದ ಕಾರ್ಮಿಕರ ವೇತನದ ಒಂದು ಭಾಗವನ್ನು (ಶೇ. 30ರಿಂದ 80ರ ವರೆಗೆ) ಸರಕಾರವೇ ಪಾವತಿ ಮಾಡುವ ಪ್ಯಾಕೇಜು ಘೋಷಿಸಿವೆ. ಕೆಲವು ದೇಶಗಳಲ್ಲಿ ಸ್ವ-ಉದ್ಯೋಗಿಗಳ ಕಳೆದ ವರ್ಷದ ಆದಾಯದ ಒಂದು ಭಾಗವನ್ನು ಸರಕಾರ ಪಾವತಿ ಮಾಡುತ್ತಿವೆ. ಅಂದರೆ ಸಾಮಾಜಿಕ ಭದ್ರತೆ ಪುನಃ ಅಜೆಂಡಾದಲ್ಲಿದೆ. ನವ-ಉದಾರವಾದಿ ಅಜೆಂಡಾ ಹಿಮ್ಮೆಟ್ಟಲಾರಂಭಿಸಿದೆ. ಅದನ್ನು ಪೂರ್ಣವಾಗಿ ಹಿಮ್ಮೆಟ್ಟಿಸಿ ಸಮಗ್ರ ಸಾಮಾಜಿಕ ಭದ್ರತೆಯನ್ನು ಅಜೆಂಡಾಕ್ಕೆ ತರುವ ಸಮಯವಿದು.

3. ಉದ್ಯೋಗ ಭದ್ರತೆ:

ಉದ್ಯೋಗದ ಲಭ್ಯತೆ ಒಂದು ಕಡೆಯಾದರೆ, ಉದ್ಯೋಗ ಜೀವನಕ್ಕೆ ಕೊಡುವ ಭದ್ರತೆಯ ದೃಷ್ಟಿಯಿಂದ ಅದರ ಗುಣಮಟ್ಟ ಇನ್ನೊಂದು ಕಡೆ. ಉದ್ಯೋಗದ ಲಭ್ಯತೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ ಬೆಳವಣಿಗೆಯ ಚಕ್ರಗಳ (ಉಬ್ಬರ, ಇಳಿತ/ಕುಸಿತ, ಸ್ಥಗಿತತೆ) ಮೇಲೆ ಯಾವಾಗಲೂ ಅವಲಂಬಿಸಿತ್ತು. ಈಗಲೂ ಇದೆ. 1980ರ ದಶಕದ ವರೆಗೆ ಉದ್ಯೋಗದ ಲಭ್ಯತೆ ಇದ್ದಾಗ ಉದ್ಯೋಗದ ಗುಣಮಟ್ಟ ಸಹ ಚೆನ್ನಾಗಿಯೇ ಇರುತ್ತಿತ್ತು. ಹಲವು ಸೌಲಭ್ಯಗಳಿರುವ ಶಾಶ್ವತ ಉದ್ಯೋಗಗಳೇ ಹೆಚ್ಚಿಗಿದ್ದವು. ಆದರೆ 1990ರ ನವ-ಉದಾರೀಕರಣದ ನೀತಿಗಳ ಜತೆಗೆ ಉದ್ಯೋಗದ ಲಭ್ಯತೆ ಮತ್ತು ಗುಣಮಟ್ಟ ಎರಡೂ ಭಾರತದಲ್ಲೂ ಜಾಗತಿಕವಾಗಿಯೂ ಅಗಾಧವಾಗಿ ಕುಸಿದಿವೆ. ಉದ್ಯೋಗಗಳ ಲಭ್ಯತೆಯು ಸ್ವಯಂಚಾಲಿತ ಯಂತ್ರಗಳ ಅವಿಷ್ಕಾರ, ತಂತ್ರಜ್ಞಾನದಲ್ಲಿ ಕ್ರಾಂತಿಕಾರಕ ಬದಲಾವಣೆ, ಸರಕು ಉತ್ಪಾದನೆ-ಸೇವೆಗಳ ಸಂಘಟನೆಯಲ್ಲಿ ಭಾರೀ ಬದಲಾವಣೆಗಳಿಂದಾಗಿ ಕಡಿಮೆಯಾಗಿವೆ. ಜೀವನಕ್ಕೆ ಕೊಡುವ ಭದ್ರತೆಯ ದೃಷ್ಟಿಯಿಂದ ಉದ್ಯೋಗದ ಗುಣಮಟ್ಟವಂತೂ ಅದರ ಸುಳಿವೇ ಕಾಣದಷ್ಟು ಬದಲಾಗಿದೆ.

ಉದ್ಯೋಗದ ಲಭ್ಯತೆಗಳಲ್ಲಿ ಕಡಿತ ತಂದ ಬದಲಾವಣೆಗಳನ್ನೇ ಬಳಸಿ ಅತ್ಯಂತ ಉನ್ನತ ಹುದ್ದೆಗಳಿಂದ ಹಿಡಿದು ಹೆಚ್ಚಿನ ಕೌಶಲ್ಯ ಅಗತ್ಯವಿಲ್ಲದ ಎಲ್ಲ ಹುದ್ದೆಗಳಲ್ಲೂ, ಹಲವು ಸೌಲಭ್ಯಗಳಿರುವ ಶಾಶ್ವತ ಅಥವಾ ಜೀವಾವಧಿ ಉದ್ಯೋಗ ಎಂಬುದು ಇಲ್ಲವೇ ಇಲ್ಲ, ಎನ್ನುವಷ್ಟು ಅಪರೂಪವಾಗಿಸಲಾಗಿದೆ. ತಾತ್ಕಾಲಿಕ, ಸಾಂದರ್ಭಿಕ, ಅರೆ-ಕಾಲಿಕ, ಕೆಲಸವಿದ್ದರೆ ಕೆಲಸವಿದ್ದಾಗ ಮಾತ್ರ, ಕಾಂಟ್ರಾಕ್ಟ್, ಇತ್ಯಾದಿ ಹತ್ತು ಹಲವು ರೀತಿಯಲ್ಲಿ ಉದ್ಯೋಗಗಳ ಭದ್ರತೆಯ ಮೇಲೆ ಭೀಕರ ದಾಳಿ ಮಾಡಲಾಗಿದೆ. ಸಬ್-ಕಾಂಟ್ರಾಕ್ಟ್, ಔಟ್ ಸೋರ್ಸಿಂಗ್ ಮುಂತಾದ ಹಲವು ಹಂತಗಳಲ್ಲಿ ಹಲವು ಸ್ಥಳಗಳಲ್ಲಿ ಹಲವು ಘಟಕಗಳಲ್ಲಿ ಕೆಲಸದ ವಿಭಜನೆ ಮಾಡಲಾಗಿದೆ. ಈ ಸಂಕೀರ್ಣ ಜಾಗತಿಕ ಶ್ರಮ ವಿಭಜನೆಯು, ಉತ್ಪಾದನೆಯ ಎಲ್ಲಾ ಅನಿಶ್ಚಿತತೆ ಮತ್ತು ಅಪಾಯಗಳನ್ನು ಸಣ್ಣ ಘಟಕಗಳಿಗೆ ಹಂಚಿ, ಲಾಭವನ್ನು ಕೇಂದ್ರೀಕರಿಸುವ ನಷ್ಟ-ಅಪಾಯಗಳನ್ನು ವಿಕೇಂದ್ರೀಕರಿಸುತ್ತದೆ. ಇದರಿಂದ ಹಲವು ಬಾರಿ ಮಾಲಕ ಶ್ರಮಿಕ ಸಂಬಂಧಗಳೂ ಸಹ ಮಸುಕಾಗಿ ಉದ್ಯೋಗದಾತ-ಉದ್ಯೋಗದ ವ್ಯಾಖ್ಯೆಯೇ ಗೊಂದಲಮಯವಾಗಿದೆ. ನವ-ಉದಾರವಾದದ ಕಾಲು ಶತಮಾನದಲ್ಲಿ ಅತ್ಯಂತ ಅಮಾನವೀಯ ರೀತಿಯಲ್ಲಿ ಇದನ್ನು ನಮ್ಮ ದೇಶದಲ್ಲೂ ಜಾಗತಿಕವಾಗಿಯೂ ಜಾರಿ ಮಾಡಲಾಗಿದೆ. ಉದ್ಯೋಗ ಭದ್ರತೆಯ ಕುರಿತು ಇದ್ದ ಬಂಡವಾಳ-ಕಾರ್ಮಿಕರ ನಡುವೆ ಇದ್ದ ➚



ಅಮೆರಿಕದಲ್ಲಿ ಕಳೆದ 1 ವಾರದಲ್ಲಿ 52 ಲಕ್ಷ ನಿರುದ್ಯೋಗಿಗಳು, 1 ತಿಂಗಳಲ್ಲಿ 2.2 ಕೋಟಿ ನಿರುದ್ಯೋಗಿಗಳು ರಿಜಿಸ್ಟರ್

ಎಲ್ಲ ಒಪ್ಪಂದಗಳನ್ನು, ಸಹಮತಗಳನ್ನು, ಕಾನೂನುಗಳನ್ನು ದುರ್ಬಲಗೊಳಿಸಿ ಗಾಳಿಗೆ ತೂರಲಾಗಿದೆ. ಉದ್ಯೋಗದ ಭದ್ರತೆಯು ಕಾರ್ಮಿಕನ ವೈಯಕ್ತಿಕ ಪ್ರಗತಿಗೆ, ಉದ್ಯಮದ ದಕ್ಷತೆಗೆ ವೇಗವಾದ ತಾಂತ್ರಿಕ ಬದಲಾವಣೆಗಳಿಗೆ ಮಾರಕ ಎಂದು ಕಾರ್ಮಿಕನನ್ನೂ ಒಪ್ಪಿಸಲಾಗಿದೆ. 2008ರ ಮಹಾ ಕುಸಿತದ ಹಿನ್ನೆಲೆಯಲ್ಲಿ ಉದ್ಯೋಗ ಭದ್ರತೆಯ ಕುರಿತು ತೀವ್ರಚರ್ಚೆ ಆರಂಭವಾಗಿತ್ತು. ಆಗ ಆ ಕುಸಿತಕ್ಕೆ ಪರಿಹಾರವಾಗಿ ಸರಕಾರಗಳು ಘೋಷಿಸಿದ ಪ್ಯಾಕೇಜುಗಳ ಸಿಂಹಪಾಲನ್ನು ಕಂಪನಿಗಳು/ಉದ್ಯಮಿಗಳು ನುಂಗಿ ಹಾಕಿದ್ದವು. ಬಿಕ್ಕಟ್ಟಿನ ಹೊರೆಯನ್ನು ಪೂರ್ಣವಾಗಿ ಕಾರ್ಮಿಕರ ಮೇಲೆ ಹೊರಿಸಿದ್ದವು. ಇದರ ವಿರುದ್ಧ ಆಗಲೇ ಆಕ್ರೋಶ ಎದ್ದಿತ್ತು. ಕೊರೊನಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕಂಡಿರುವ ಇನ್ನಷ್ಟು ತೀವ್ರವಾದ ಉದ್ಯೋಗದ ಅಭದ್ರತೆ ಮತ್ತೊಮ್ಮೆ ಇದನ್ನು ಢಾಳಾಗಿ ಮುನ್ನೆಲೆಗೆ ತಂದಿದೆ. ಮಾತ್ರವಲ್ಲ, ಹಿಂದೆ ಮಾಡಿದಂತೆ ಕಂಪನಿಗಳು/ಉದ್ಯಮಿಗಳಿಗೆ ಪೂರ್ಣ ಪರಿಹಾರ ಒದಗಿಸಿ, ಕಾರ್ಮಿಕರನ್ನು ಬಲಿಪಶು ಮಾಡುವ ಸರಕಾರದ ಕ್ರಮಗಳಿಗೆ ತೀವ್ರ ಪ್ರತಿರೋಧ ಬರಲಿದೆ.

ಕೊರೊನಾ ಬಿಕ್ಕಟ್ಟನ್ನು ಒಗ್ಗಟ್ಟಾಗಿ ಎದುರಿಸಲು ಆಳುವ ವರ್ಗಗಳು ಕರೆ ಕೊಡುತ್ತಿವೆ. ಆದರೆ ಅದರ ಪರಿಣಾಮ ಏಕೆ ಅಸಮಾನವಾಗಿದೆ? ಅದರ ದುಷ್ಪರಿಣಾಮಗಳು ದುಡಿಯುವ ಜನರನ್ನು ಹೆಚ್ಚು ಏಕೆ ಬಾಧಿಸುತ್ತಿವೆ?ಎಂಬ ಪ್ರಶ್ನೆ ಎದ್ದಿದೆ. ಬಿಕ್ಕಟ್ಟನ್ನು ಒಗ್ಗಟ್ಟಾಗಿ ಹೋರಾಡುವುದು ಚರ್ಚೆಯಲಿದೆ.ಇಂದು ಜಗತ್ತಿನಲ್ಲಿ ಇರುವ ಒಟ್ಟು ಸಂಪತ್ತು ಮತ್ತು ಅದರ ಹಂಚಿಕೆಯಲ್ಲಿ ತೀವ್ರ ಅಸಮಾನತೆಯನ್ನುಹೋಗಲಾಡಿಸುವಂತೆ, ಅದನ್ನು ಸಮಾನವಾಗಿ ಹಂಚಿದರೆ ಯಾವುದೇ ಬಿಕ್ಕಟ್ಟನ್ನು ಎದುರಿಸಬಹುದು, ಎಂದು ಹೆಚ್ಚು ಹೆಚ್ಚು ಜನರಿಗೆ ಸ್ಪಷ್ಟವಾಗುತ್ತಿದೆ. ಭಾರತದಲ್ಲಿ ಕೊರೊನಾ ಬಿಕ್ಕಟ್ಟಿನ ಪರಿಣಾಮವಾಗಿ ತೀವ್ರ ಸಂಕಟಕ್ಕೊಳಗಾಗಿರುವವರು ದಿನಗೂಲಿಯ ಮೇಲೆ ಜೀವನ ಮಾಡುವ ವಲಸೆ ಮತ್ತು ಇತರ ಅಸಂಘಟಿತ ವಲಯದ ಕಾರ್ಮಿಕರು. ಉದ್ಯೋಗ ಅಭದ್ರತೆ ಹೆಚ್ಚಿದ್ದಷ್ಟು ಅವರ ಮೇಲೆ ಕೊರೊನಾ ಬಿಕ್ಕಟ್ಟು ಅದೇ ಪ್ರಮಾಣದಲ್ಲಿ ಹೆಚ್ಚು ದುಷ್ಪರಿಣಾಮ ಬೀರಿದೆ ಎಂಬುದು ಅನುಭವಕ್ಕೆ ಬಂದಿದೆ.

ಅಮೆರಿಕ ಮುಂತಾದ ಅಭಿವೃದ್ಧ ದೇಶಗಳಲ್ಲಿ 'ಹೈರ್ ಅಂಡ್ ಫೈರ್' ರೀತಿಯ ಅಭದ್ರತೆ ಇದ್ದರೂ ತೀರಾ ಅಲ್ಪವಾದರೂ ಇರುವ 'ನಿರುದ್ಯೋಗ ಭತ್ಯೆ' ಕಾರ್ಮಿಕರ ನೆರವಿಗೆ ಬಂದಿದೆ. ಕೊರೊನಾ ಬಿಕ್ಕಟ್ಟು ಆರಂಭವಾದ 1 ತಿಂಗಳಲ್ಲಿ ಅಮೆರಿಕದಲ್ಲಿ 2 ಕೋಟಿ ಕಾರ್ಮಿಕರು ನಿರುದ್ಯೋಗ ಭತ್ಯೆಗೆ ಅರ್ಜಿ ಹಾಕಿದ್ದಾರೆ. ಇವರಲ್ಲಿ ಹೆಚ್ಚಿನವರು ತಮ್ಮ ಜೀವನದ್ಲೇ ಮೊದಲ ಬಾರಿಗೆ ನಿರುದ್ಯೋಗ ಭತ್ಯೆಗೆ ಅರ್ಜಿ ಹಾಕಿದ್ದರಂತೆ. ಆದ್ದರಿಂದ ಉದ್ಯೋಗ ಭದ್ರತೆ ಕೊರೊನೋತ್ತರ ಅವಧಿಯಲ್ಲಿ ಪ್ರಧಾನವಾಗಿ ಮುನ್ನೆಲೆಗೆ ಬರಲಿದೆ. ಇಂತಹ ಯಾವುದೇ ಭದ್ರತಾ ಕ್ರಮಗಳಿಲ್ಲದ ಭಾರತದಲ್ಲಿ ಸಹ ಈ ವಿಷಯ ಇನ್ನೂ ಹೆಚ್ಚು ಢಾಳಾಗಿ ಮುಂದೆ ಬರಲಿದೆ.

ತಾತ್ಕಾಲಿಕ, ಸಾಂದರ್ಭಿಕ, ಅರೆ-ಕಾಲಿಕ, ಕಾಂಟ್ರಾಕ್ಟ್, ಇತ್ಯಾದಿ ಹಲವಾರು ಬಗೆಯ ಉದ್ಯೋಗ ಅಭಧ್ರತೆಯನ್ನು ಉಂಟು ಮಾಡುವ ವ್ಯವಸ್ಥೆಗಳನ್ನು ಕೊನೆಗಾಣಿಸುವ ಕ್ರಮಗಳಿಗೆ ತೀವ್ರ ಒತ್ತಡ ಬರಲಿದೆ. ಅದೇ ರೀತಿಯಲ್ಲಿ ಸಂಕೀರ್ಣ ಶ್ರಮ ವಿಭಜನೆಯ ಮೂಲಕ ಕಾರ್ಮಿಕರನ್ನು ವಂಚಿಸುವ ಕ್ರಮಗಳ ಕುರಿತು ತೀವ್ರ ಆಕ್ರೋಶ ವ್ಯಕ್ತವಾಗಲಿದೆ. ಉತ್ತಮ ಸೌಲಭ್ಯಗಳಿರುವ ಗುಣಮಟ್ಟದ ಶಾಶ್ವತ ಉದ್ಯೋಗಗಳನ್ನು ಒದಗಿಸುವುದು ಮತ್ತು ಇಲ್ಲದಿದ್ದಾಗ ನಿರುದ್ಯೋಗ ಭತ್ಯೆ ಒಂದು ಹಕ್ಕಾಗುವುದಕ್ಕೂ ಹೆಚ್ಚಿನ ಒತ್ತಡ ಬರಲಿದೆ. ಕೊರೊನಾ ಬಿಕ್ಕಟ್ಟು ಮತ್ತು ಅದರಿಂದ ಚೇತರಿಕೆಯ ಅವಧಿ ದೀರ್ಘವಾದಷ್ಟು ಈ ಒತ್ತಡ ತೀವ್ರವಾಗಲಿದೆ.

4. ಜೀವನಾವಶ್ಯಕ ವೇತನ:

ಜೀವನಾವಶ್ಯಕ ವೇತನ ಏನು ಮತ್ತು ಎಷ್ಟು ಇರಬೇಕು ಎಂಬುದು ಯಾವಾಗಲೂ ಕಾರ್ಮಿಕರ ಸಂಘಟಿತ ಶಕ್ತಿ ಮತ್ತು ಮಾಲಕರ ನಡುವಿನ ಚೌಕಾಸಿಯ ಮತ್ತು ಸಂಘರ್ಷದ ವಿಷಯವಾಗಿತ್ತು. ಯುರೋಪಿನಲ್ಲಿ ಹಲವು ದಶಕಗಳ ಸತತ



ಅಸುರಕ್ಷಿತ ಸನ್ನಿವೇಶದಲ್ಲಿ ಕೆಲಸ ಮಾಡಲು ಬಲವಂತದ ವಿರುದ್ಧ ಅಮೆಜಾನ್ ಕಾರ್ಮಿಕರ ಪ್ರತಿಭಟನೆ

ಹೋರಾಟದ, ಸಮಾಜವಾದಿ ದೇಶಗಳ ಉದಯ ಮತ್ತು 1930ರ ದಶಕದ ಮಹಾ ಕುಸಿತದ ನಂತರ ಕನಿಷ್ಠ ಮತ್ತು ಜೀವನಾವಶ್ಯಕ ವೇತನಗಳ ಪರಿಕಲ್ಪನೆಯ ಕುರಿತಾದರೂ ಒಂದು ಹಂತದ ಸಹಮತ ಸ್ಥಾಪಿತವಾಗಿ ಹೆಚ್ಚಿನ ದೇಶಗಳಲ್ಲಿ ಕಾನೂನುಗಳೂ ಆದವು.ಅದು ಅಷ್ಟೇನೂ ಜಾರಿಯಾಗದ ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ಸಹ ಅದು ಗುರಿಯಂತೂ ಆಯಿತು. ಇದು ಸಹ 1990ರ ದಶಕದಲ್ಲಿ ತೀವ್ರವಾಗಿ ಬದಲಾಗಲಾರಂಭಿಸಿತು. ಮೇಲೆ ಹೇಳಿದ ಉತ್ಪಾದನಾ ವ್ಯವಸ್ಥೆಯಲ್ಲಿ ತಾಂತ್ರಿಕ ಬದಲಾವಣೆಗಳು ಮತ್ತು ಸಂಕೀರ್ಣ ಜಾಗತಿಕ ಶ್ರಮ ವಿಭಜನೆಯ ಮೂಲಕ ಉದ್ಯೋಗ ಭದ್ರತೆಯ ಮೇಲೆ ದಾಳಿಯು ಕಾರ್ಮಿಕರ ಚೌಕಾಸಿಯ ಸಾಮರ್ಥ್ಯವನ್ನು ಸಹ ದುರ್ಬಲಗೊಳಿಸಿತು. ವಿವಿಧ ದೇಶ, ಪ್ರದೇಶ, ಘಟಕಗಳ ಕಾರ್ಮಿಕರ ನಡುವೆ ಪೈಪೋಟಿ ಏರ್ಪಡಿಸಿ ವೇತನವನ್ನು ಅತ್ಯಂತ ಕಡಿಮೆ ವೇತನದ ಮಟ್ಟಕ್ಕೆ ತಳ್ಳಲಾಯಿತು. ಕನಿಷ್ಠ ಮತ್ತು ಜೀವನಾವಶ್ಯಕ ವೇತನಗಳ ಪರಿಕಲ್ಪನೆಯನ್ನೇ ಅಳಿಸಿ ಹಾಕಲಾಯಿತು. ಭಾರತ ಸೇರಿದಂತೆ ಹೆಚ್ಚಿನ ದೇಶಗಳಲ್ಲಿ ಇದಕ್ಕೆ ಸಂಬಂಧಿತ ಇದ್ದಬದ್ದ ಕಾನೂನುಗಳನ್ನೂ ದುರ್ಬಲಗೊಳಿಸಲಾಯಿತು.

ಕೊರೊನಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಉದ್ಯಮಿಗಳು ಕಂಪನಿಗಳು,ಸಂಕಟಕ್ಕೆ ಸಿಲುಕಿರುವ ವಿಮಾನಯಾನ ಮುಂತಾದ ಇಡೀ ಉದ್ಯಮ ಕ್ಷೇತ್ರವನ್ನು ಮತ್ತು ನಿರ್ದಿಷ್ಟ ಉದ್ಯಮ/ಕಂಪನಿಗಳನ್ನು ಪುನರುಜ್ಜೀವನಗೊಳಿಸಲು ಆವಶ್ಯಕ ಅನುದಾನಗಳನ್ನು ಕೊಡಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಅದನ್ನು ಭಾರೀ ಪ್ಯಾಕೇಜುಗಳ ರೂಪದಲ್ಲಿ ಕೊಡಲಾಗುತ್ತಿದೆ ಕೂಡಾ. ಉದ್ಯಮಗಳು ಈ ಬಿಕ್ಕಟ್ಟನ್ನು ಎದುರಿಸುವುದು, ಅವುಗಳ ಸಮಸ್ಯೆ ಎಂದು ಹೇಳಲಾಗುತ್ತಿಲ್ಲ. ಅದೇ ರೀತಿ ಉದ್ಯಮ ಅಥವಾ ಆರ್ಥಿಕದ ಸಮಸ್ಯೆಗಳಿದ್ದಾಗ್ಯೂ ಉತ್ಪಾದನೆಯ ಮೂಲಕ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರಿಗೆ ಜೀವನಾವಶ್ಯಕ ವೇತನ ಸಿಗಬೇಡವೇ ಎಂಬ ಪ್ರಶ್ನೆ ಸಹಜವಾಗಿಯೇ ಮುನ್ನೆಲೆಗೆ ಬರುತ್ತಿದೆ. ಎಲ್ಲ ಬಿಕ್ಕಟ್ಟುಗಳಲ್ಲೂ, ಅದೂ ಪ್ರಾಕೃತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ, ಕನಿಷ್ಠ ವೇತನ ಸಿಗಬೇಕು. ಬೇರೆ ಸಮಯದಲ್ಲಿ ಜೀವನಾವಶ್ಯಕ ವೇತನ ಸಿಗಬೇಕು ಎಂಬ ಕೂಗು ಎದ್ದಿದೆ.

5. ಜಾಗತೀಕರಣ:

ಉತ್ಪಾದನಾ ವ್ಯವಸ್ಥೆಯ ಜಾಗತೀಕರಣವು ವಿಜ್ಞಾನ-ತಂತ್ರಜ್ಞಾನಗಳ, ವಸ್ತು/ಸೇವೆಗಳ ಬಳಕೆಯಮತ್ತು ಜಾಗತಿಕ ವ್ಯಾಪಾರದ ಅಗಾಧ ಬೆಳವಣಿಗೆಗಳ ಸಹಜ ಪರಿಣಾಮ. ಅದು ಯಾವುದೇ ವಸ್ತುವನ್ನು ಯಾವ ದೇಶ/ಪ್ರದೇಶ ಅಥವಾ ಕಂಪನಿಗಳು ಅತ್ಯಂತ ಕಡಿಮೆ ಖರ್ಚಿನಲ್ಲಿ ಅತ್ಯಂತ ಹೆಚ್ಚಿನ ದಕ್ಷತೆ (ಅಥವಾ ಉತ್ಪಾದಕತೆ) ಯಿಂದ ಉತ್ಪಾದಿಸಬಲ್ಲುದೊ ಅದು ಇಡೀ ಜಗತ್ತಿನ ಆವಶ್ಯಕತೆಯನ್ನು ಪೂರೈಸಲು ಉತ್ಪಾದಿಸಿ ರಫ್ತು ಮಾಡಬೇಕು. ಇತರ ದೇಶ/ಪ್ರದೇಶಗಳು ಅದನ್ನು ಆಮದು ಮಾಡಬೇಕು. ಇದು ದೂರದಿಂದ ಕೊಡಬಹುದಾದ ಭೌತಿಕವಲ್ಲದ ಉತ್ಪನ್ನಗಳಿಗೂ (ಸಾಫ್ಟ್‌ವೇರ್, ಸಂಗೀತ, ಫಿಲಂ ಇತ್ಯಾದಿ) ಮತ್ತು ಸೇವೆ (ಕಾಲ್ ಸೆಂಟರ್ ಇತ್ಯಾದಿ) ಗಳಿಗೂ ಅನ್ವಯಿಸುತ್ತದೆ. ಇದಕ್ಕೆ ತೊಡಕನ್ನುಂಟು ಮಾಡುವ ನಿರ್ಬಂಧ ಹೇರುವ ನೀತಿ/ಕಾನೂನುಗಳನ್ನು ರಾಷ್ಟ್ರೀಯ ಪ್ರಭುತ್ವ/ಸರಕಾರಗಳು ಮಾಡಬಾರದು. ಇರುವ ಅಂತಹ ನೀತಿ/ಕಾನೂನುಗಳನ್ನು ಬದಲಾಯಿಸಬೇಕು. ಇದು 'ಜಾಗತೀಕರಣ'ದ ಹಿಂದಿನ ತರ್ಕವಾಗಿತ್ತು.

ಯಾವ ದೇಶ/ಪ್ರದೇಶ/ಕಂಪನಿ ಒಂದು ವಸ್ತುವನ್ನು ಅತ್ಯಂತ ದಕ್ಷತೆಯಿಂದ ಉತ್ಪಾದಿಸಬಲ್ಲದು ಎಂದು ನಿರ್ಧರಿಸುವವರು ಯಾರು? ಮಾರುಕಟ್ಟೆ ಎಂಬುದು ಅವರ ಉತ್ತರವಾಗಿತ್ತು. ಆದರೆ ಈ ಮಾರುಕಟ್ಟೆಯ ಹಿಂದೆ ನಿಜವಾಗಿ ಇದ್ದಿದ್ದು 1980ರ ದಶಕದಲ್ಲೇ ಪ್ರಬಲವಾಗಿದ್ದ ಜಾಗತಿಕ ಹಣಕಾಸು ಬಂಡವಾಳದ ಒಡೆಯರು. ಇದು ಸೋವಿಯೆಟ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ಪ್ರಭುತ್ವಗಳ ಕುಸಿತದ ನಂತರದ 1990ರ ದಶಕದ ಜಗತ್ತಿನಲ್ಲಿ ಈ 'ಜಾಗತೀಕರಣ'ದ ನೀತಿಗಳನ್ನು ಸಾರ್ವತ್ರಿಕಗೊಳಿಸಿತು. ಇದರ ಜತೆಗೆ ಅತ್ಯಂತ ಹೆಚ್ಚು ಲಾಭವಿರುವ ಕಡೆಗೆ ಹೋಗುವ ಹಣಕಾಸು ಬಂಡವಾಳದ ಮೇಲೆ ಇದ್ದ ಎಲ್ಲ ನಿರ್ಬಂಧಗಳನ್ನು ತೆಗೆಯುವಂತೆ ಮಾಡಿತು.

ಮೇಲೆ ಹೇಳಿದ 'ಜಾಗತೀಕರಣದ ತರ್ಕ'ದಲ್ಲಿ ಕೆಲವು ಸತ್ಯಾಂಶವಿದ್ದರೂ ನಿಜವಾಗಿಯೂ ಅದು ಜಾಗತಿಕ ಹಣಕಾಸು ಬಂಡವಾಳದ ಲಾಭವನ್ನು ಗರಿಷ್ಠಗೊಳಿಸಲು ಬಳಸಲಾಯಿತು. ಉತ್ಪಾದನಾ ವ್ಯವಸ್ಥೆಯ ಜಾಗತೀಕರಣವನ್ನು ಅದು ಕಾರ್ಮಿಕರ ದಶಕಗಳ ಹೋರಾಟ ಮತ್ತು ಸಮಾಜವಾದಿ ವ್ಯವಸ್ಥೆಯ ಸವಾಲುಗಳನ್ನು ಎದುರಿಸಲು ಹಿಂದೆ ತೊಟ್ಟಿದ್ದ 'ಕಲ್ಯಾಣ ರಾಜ್ಯ'ದ ಮುಖವಾಡವನ್ನು ಕಳಚಿ ಹಾಕಲು ಬಳಸಿತು. ಇದರ ಭಾಗವಾಗಿಯೇ ಅದು ಮೇಲೆ ವಿವರಿಸಿದಂತೆ ಕೆಲವು ದೇಶಗಳಲ್ಲಾದರೂ ಭಾಗಶಃವಾಗಿಯಾದರೂ ಜಾರಿ ಮಾಡಿದ್ದ ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ, ಜೀವನಾವಶ್ಯಕ ವೇತನ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳ ಕ್ರಮಗಳನ್ನು ಕ್ರಮೇಣ ಹೆಚ್ಚು ಕಡಿಮೆ ಪೂರ್ಣವಾಗಿ ಕಳಚಿ ಹಾಕುವುದರಲ್ಲಿ ಯಶಸ್ವಿಯಾಗಿತ್ತು.

ಆದರೆ ಕೊರೊನಾ ಬಿಕ್ಕಟ್ಟಿಗೆ ಮೊದಲ ಪ್ರತಿಕ್ರಿಯೆಗಳೇ 'ಜಾಗತೀಕರಣದ ತರ್ಕ'ವನ್ನು ಪ್ರಶ್ನಿಸಲು ಆರಂಭಿಸಿವೆ. ಜಾಗತೀಕರಣ ಹೊರಿಸಿದ ಉತ್ಪಾದನಾ ವ್ಯವಸ್ಥೆಯ ಜಾಗತಿಕ ಶ್ರಮ ವಿಭಜನೆ ಜಾಗತಿಕ ಸಾಗಾಣಿಕೆ ಮತ್ತು ಸಂಚಾರವನ್ನು ಅನಗತ್ಯವಾಗಿ ಹೆಚ್ಚಿಸಿದ್ದರಿಂದ ಕೊರೊನಾ ಇಷ್ಟು ವೇಗವಾಗಿ ಹರಡಿತು ಎಂಬ ಟೀಕೆಗಳು ಬಂದಿವೆ. ಆಹಾರ ವಸ್ತುಗಳೂ ಸೇರಿದಂತೆ ಹಲವು ಆವಶ್ಯಕ ವಸ್ತುಗಳ ಆಮದಿನ ಮೇಲೆ ಪೂರ್ಣವಾಗಿ ಅವಲಂಬಿಸಿರುವುದರ ಹಿಂದಿನ ತರ್ಕವನ್ನು ಅಮೆರಿಕ, ಯುರೋಪಿನ ಹಲವು ಅಭಿವೃದ್ಧ ದೇಶಗಳಲ್ಲಿ ಪ್ರಶ್ನಿಸಲಾಗುತ್ತಿದೆ. ಕೆಲವು ಆವಶ್ಯಕ ವಸ್ತುಗಳ ರಫ್ತಿನ ಮೇಲೆ ನಿರ್ಬಂಧ ವಿಧಿಸಬೇಕೆಂಬುದರ ಬಗ್ಗೆ ಕೂಗು ಎದ್ದಿದೆ. 'ಟಾಯ್ಲೆಟ್ ಪೇಪರ್'ನ್ನು ಆಮದು ಮಾಡುತ್ತಿದ್ದು ಜಾಗತಿಕ ಲಾಕ್ ಡೌನ್ ಮುಂದುವರೆದರೆ ಅದರ ಕೊರತೆ ಎದುರಾಗಬಹುದು. 'ಟಾಯ್ಲೆಟ್ ಪೇಪರ್'ನ್ನೂ, ತುರ್ತು ಅಗತ್ಯಗಳಾದ ವೈದ್ಯಕೀಯ ಸಂರಕ್ಷಣಾ ಕವಚ/ಉಪಕರಣಗಳನ್ನು ಉತ್ಪಾದಿಸಲಾಗದ ಆರ್ಥಿಕ ಹೇಗೆ ಜಗತ್ತಿನ ಅತಿ ಪ್ರಬಲ ಆರ್ಥಿಕವೆನ್ನುವುದು ಎಂಬ ಪ್ರಶ್ನೆಗಳು ಅಮೆರಿಕದಂತಹ ದೇಶಗಳಲ್ಲಿ ಎದ್ದಿವೆ. ಸ್ಪೈನ್, ಇಟಲಿಗಳಲ್ಲಿ ಕೆಲವು ಪ್ರಮುಖ ಸೇವೆಗಳನ್ನು (ವಿಮಾನಯಾನ, ಆಸ್ಪತ್ರೆಗಳು) ರಾಷ್ಟ್ರೀಕರಣಗೊಳಿಸಲಾಗಿದೆ. ಕುಸಿತ ಕಂಡಿರುವ ದೇಶೀ ಕಂಪನಿಗಳ ಶೇರುಗಳನ್ನು ಖರೀದಿಸಿ, ವಿದೇಶೀ ಬಂಡವಾಳವು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಹಲವು ದೇಶಗಳಲ್ಲಿ ನಿರ್ಬಂಧ ಹೇರಲಾಗಿದೆ. ಭಾರತ ಸಹ ಇಂತಹ ಕ್ರಮ ತೆಗೆದುಕೊಂಡಿದೆ. ಇದು ಸದ್ಯಕ್ಕೆ ಚೀನಾದ ವಿರುದ್ಧ ಮಾತ್ರ ಕ್ರಮವಾದರೂ ಮತ್ತು ಇದು ಸದ್ಯಕ್ಕೆ ಅಮೆರಿಕ ಮತ್ತು ಯುರೋಪಿನ ಬಂಡವಾಳಕ್ಕೆ ಅನ್ವಯವಾಗುವುದಿಲ್ಲವಾದರೂ, ಹಣಕಾಸು ಬಂಡವಾಳದ ಮುಕ್ತ ಚಲನೆಯ ನೀತಿಗೆ ಕಡಿವಾಣ ಇರಬಾರದು ಎಂಬ 'ಜಾಗತೀಕರಣದ ತರ್ಕ'ವನ್ನು ಪ್ರಶ್ನಿಸಲಾಗುತ್ತಿದೆ ಎಂಬುದನ್ನು ಮರೆಯುವಂತಿಲ್ಲ. ಜತೆಗೆ ಸಾಂಕ್ರಾಮಿಕ ರೋಗಗಳ ಮುಂತಾದ ತುರ್ತು ಪರಿಸ್ಥಿತಿಗಳನ್ನು ಎದುರಿಸಲು ಕನಿಷ್ಠ ಆವಶ್ಯಕ ವಸ್ತುಗಳ ಸ್ಥಳೀಯವಾಗಿ (ತಮ್ಮದೇ ದೇಶ/ಪ್ರದೇಶಗಳಲ್ಲಿ) ಉತ್ಪಾದನೆ ಅಥವಾ ಸ್ವಾವಲಂಬನೆ ಅಗತ್ಯವೆಂಬ ಭಾವನೆ/ಚಿಂತನೆ ಪ್ರಬಲವಾಗುತ್ತಿದೆ. ಇದರ ಜತೆಗೆ ರಾಷ್ಟ್ರೀಯ ಪ್ರಭುತ್ವದ ಹೂಡಿಕೆ, ಉತ್ಪಾದನೆ, ವಿದೇಶ ವ್ಯಾಪಾರ ಸಂಬಂಧಿತ ನೀತಿಗಳು ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿರಬೇಕು ಎಂಬ ಪ್ರಬಲ ಒತ್ತಾಯ ಸಹ ಕೇಳಿ ಬರುತ್ತಿದೆ. ಕೊರೊನಾ ಬಿಕ್ಕಟ್ಟು, ವಿವಿಧ ವರ್ಗಗಳನ್ನು ಮಾತ್ರವಲ್ಲ ದೇಶಗಳನ್ನೂ, ಕಾಡಿದ ಪ್ರಮಾಣ ಮತ್ತು ಸ್ವರೂಪದಲ್ಲಿ ಭಿನ್ನತೆ ಹಾಗೂ ಅಸಮಾನತೆಗಳು (ಒಂದೆಡೆ ಸಮಾಜವಾದಿ ಚೀನಾ, ಬಂಡವಾಳಶಾಹಿ ಜರ್ಮನಿ, ದ.ಕೊರಿಯಾ, ತೈವಾನ್; ಇನ್ನೊಂದೆಡೆ ಇತರ ಹೆಚ್ಚಿನ ದೇಶಗಳು ಅದನ್ನು ನಿಭಾಯಿಸಿದ ರೀತಿ) ಯಾವ ರಾಷ್ಟ್ರೀಯ ನೀತಿಗಳು/ಸಂದರ್ಭಗಳು, ಯಾವ ಜಾಗತೀಕರಣ ಹೊರಿಸಿದ ನೀತಿಗಳು ಇವಕ್ಕೆ ಕಾರಣವಾದವು ಎಂಬ ಚರ್ಚೆಗಳನ್ನು ಹುಟ್ಟು ಹಾಕಿದೆ. ಈಗಿನ ಸಾಮ್ರಾಜ್ಯಶಾಹಿ ಅಧಿಪತ್ಯದ ಸ್ವರೂಪದ ಜಾಗತೀಕರಣ ಹಿಮ್ಮೆಟ್ಟಿದರೆ, ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ, ಜೀವನಾವಶ್ಯಕ ವೇತನ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳನ್ನು ಮತ್ತೆ ಸ್ಥಾಪಿಸುವ ರಾಷ್ಟ್ರೀಯ ಹೋರಾಟಗಳಿಗೆ ಕುಮ್ಮಕ್ಕು ಸಿಗಲಿದೆ.

ಉತ್ಪಾದನಾ ವ್ಯವಸ್ಥೆಯ ಜಾಗತೀಕರಣ ಅಥವಾ ಜಾಗತಿಕ ಶ್ರಮವಿಭಜನೆ ಆಳವಾಗಿ ಬೇರೂರಿರುವಂಥದು ಮತ್ತು ಭಾಗಶಃ ಸಹಜ ಬೆಳವಣಿಗೆಯಾಗಿರುವಂಥದ್ದು. ಅಲ್ಲದೆ ಬಹುರಾಷ್ಟ್ರೀಯ ಕಾರ್ಪೊರೆಟ್ ಸಂಸ್ಥೆಗಳ ಜಾಲದೊಂದಿಗೆ ಪರಸ್ಪರ ಹೆಣೆದುಕೊಂಡಿರುವಂಥದ್ದು. ಇದು ಬಡಪೆಟ್ಟಿಗೆ ಬಗ್ಗುವಂಥದ್ದಲ್ಲ. ಆದರೆ ಈಗಾಗಲೇ ಟ್ರಂಪ್ ಅವರ 'ಅಮೆರಿಕ ಫಸ್ಟ್', ಡಬ್ಲ್ಯೂ.ಟಿ.ಒ ದ ಬದಲು ಎರಡು ದೇಶಗಳ ನಡುವೆ ವ್ಯಾಪಾರ ಒಪ್ಪಂದಗಳಿಗೆ ಒತ್ತು ಮುಂತಾದವುಗಳನ್ನು ಪ್ರತಿನಿಧಿಸುತ್ತಿರುವ 'ಜಾಗತೀಕರಣದ ಹಿಮ್ಮೆಟ್ಟುವಿಕೆ'ಯ ಪ್ರಕ್ರಿಯೆ ಪ್ರಾರಂಭವಾಗಿದೆ ಎನ್ನಲಾಗುತ್ತಿದೆ. ಇದರ ಜೊತೆಗ ಕೊರೊನಾ ಬಿಕ್ಕಟ್ಟಿನ ಪರಿಣಾಮವಾಗಿ ಜನತೆಯ ಒತ್ತಡ ಮತ್ತು ರಾಷ್ಟ್ರೀಯ ಪ್ರಭುತ್ವಗಳು ಮೇಲುಗೈ ಸಾಧಿಸುತ್ತಿರುವುದು ಈಗಿರುವ ಜಾಗತೀಕರಣದ ಸ್ವರೂಪವನ್ನು ಬದಲಾಯಿಸಬಲ್ಲದು. ಈ ಬದಲಾವಣೆಗಳು ಕುರುಡು ರಾಷ್ಟ್ರವಾದ ಮತ್ತು ಬಲಪಂಥೀಯ ಹಾದಿ ತುಳಿಯುವ ಸಾಧ್ಯತೆಯೂ ಇದೆ. ಈ ಬದಲಾವಣೆಗಳು ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ, ಜೀವನಾವಶ್ಯಕ ವೇತನ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳನ್ನು ಇನ್ನೂ ಹೆಚ್ಚು ಸಮಗ್ರವಾಗಿ ಮತ್ತೆ ಸ್ಥಾಪಿಸುವ ನಿಟ್ಟಿನಲ್ಲಿ ಹೋಗುವಂತೆ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಶ್ರಮಿಸಬೇಕಾಗಿದೆ. ●

ಶತಮಾನೋತ್ಸವ ಲೇಖನ ಮಾಲೆ-23

ಕಮ್ಯುನಿಸ್ಟರು ಮತ್ತು ರಾಷ್ಟ್ರೀಯತೆಯ ಪ್ರಶ್ನೆ

ಭಾರತದಲ್ಲಿ ವಿಭಿನ್ನ ರಾಷ್ಟ್ರೀಯತೆಗಳು ಇವೆ ಎಂಬುದನ್ನು ಒಪ್ಪಿಕೊಂಡಾಗ ಮಾತ್ರವೇ ಭಾರತದ ಸ್ವಾತಂತ್ರ್ಯದ ಕಲ್ಪನೆ ಸಂಪೂರ್ಣವಾಗುತ್ತದೆ ಮತ್ತು ಸ್ಪಷ್ಟವಾಗುತ್ತದೆ ಎಂಬ ಕಣ್ಣೋಟದಿಂದ ಕಮ್ಯುನಿಸ್ಟರು ಭಾರತದ ರಾಜಕೀಯ ಭವಿಷ್ಯವನ್ನು ವಿಶ್ಲೇಷಣೆ ಮಾಡುತ್ತಿದ್ದ ಸಮಯದಲ್ಲಿ ಜಿನ್ನಾ ಅವರ 'ಎರಡು-ರಾಷ್ಟ್ರಗಳ ಸಿದ್ಧಾಂತ' ಮತ್ತು ಮುಸ್ಲಿಮೇತರ ರಾಷ್ಟ್ರೀಯವಾದಿಗಳ 'ಒಂದು ರಾಷ್ಟ್ರ ಸಿದ್ಧಾಂತ'ಗಳ ನಡುವೆ ತಿಕ್ಕಾಟ ನಡೆಯುತ್ತಿತ್ತು. ಈ ತಿಕ್ಕಾಟದಿಂದ ಹುಟ್ಟಿದ ಸಮಸ್ಯೆಗಳಿಗೆ ಒಂದು ಪರಿಹಾರವಾಗಿ ಕಮ್ಯುನಿಸ್ಟರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಕಮ್ಯುನಿಸ್ಟರ ನಿಲುವಿನಲ್ಲೂ ದೋಷಗಳಿರಲಿಲ್ಲವೇಂದೇನಲ್ಲ. ಆದರೂ ಭಾರತವು ಒಂದು ಬಹು-ರಾಷ್ಟ್ರೀಯತೆಗಳ ದೇಶ ಮತ್ತು ಎಲ್ಲಾ ರಾಷ್ಟ್ರೀಯತೆಗಳ ಮುಕ್ತ ಬೆಳವಣಿಗೆಯ ಪರಿಸ್ಥಿತಿಯಲ್ಲಿ ಮಾತ್ರವೇ ಭಾರತದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯ ಎಂಬ ವಿಚಾರವನ್ನು ಜನರ ನಡುವೆ ಪ್ರಚಾರ ಮಾಡುವ ಮೂಲಕ ಕಮ್ಯುನಿಸ್ಟ್ ಪಕ್ಷವು ಭಾರತದ ರಾಜಕೀಯಕ್ಕೆ ಅಮೂಲ್ಯವಾದ ಕೊಡುಗೆ ನೀಡಿದೆ.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಭಾರತ ಎರಡು ರಾಷ್ಟ್ರಗಳನ್ನು ಹೊಂದಿದೆ, ಇದು ಜನಗಳ ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ವಿಭಜಿತ ದೇಶ ಎಂದು ಹಿಂದೂ ಹಾಗೂ ಮುಸ್ಲಿಂ ಕೋಮುವಾದಿಗಳು ಪರಿಗಣಿಸಿದ್ದರು. ಈ ಕಾರಣದಿಂದಾಗಿಯೇ ಸಾವರ್ಕರ್ ಮತ್ತು ಜಿನ್ನಾ ಇಬ್ಬರೂ ಪ್ರತಿಪಾದಿಸಿದ ಎರಡು-ರಾಷ್ಟ್ರ ಸಿದ್ಧಾಂತದ ಬಗ್ಗೆ ಅವರಿಗೆ ಪರಸ್ಪರ ಯಾವ ತಕರಾರೂ ಕಾಣಲಿಲ್ಲ. 1942ರಲ್ಲಿ 'ಭಾರತ ಬಿಟ್ಟು ತೊಲಗಿ' ಎಂದು ಕಾಂಗ್ರೆಸ್ ಕರೆ ಕೊಟ್ಟಿದ್ದಾಗ, ಮುಸ್ಲಿಂ ಲೀಗ್ 'ಭಾರತ ವಿಭಜನೆ ಮಾಡಿ ತೊಲಗಿ' ಎಂದು ಕರೆ ಕೊಟ್ಟಿತು. ಮತ್ತೊಂದು ಕಡೆ ಹಿಂದೂ ಮಹಾಸಭಾ ಮತ್ತು ಆರ್.ಎಸ್.ಎಸ್. 'ಭಾರತ ಹಿಂದೂಗಳಿಗೆ ಮಾತ್ರ' ಎಂದು ಹೇಳುತ್ತಾ ಹಿಂದೂಯೇತರರು ಭಾರತದಲ್ಲಿ ಎರಡನೇ ದರ್ಜೆ ಪ್ರಜೆಗಳಾಗಿ ಮಾತ್ರ ಇರಬಹುದು ಎಂದು ಪ್ರಚಾರ ಮಾಡಿತು.

ಕಮ್ಯುನಿಸ್ಟರು ಭಾರತದ ಭವಿಷ್ಯವನ್ನು ಹಿಂದೂ-ಮುಸ್ಲಿಂ ಎಂಬ ಸಂಕುಚಿತ ಮಿತಿಯೊಳಗೆ ನೋಡಲಿಲ್ಲ. ಭಾರತದ ಜನರು ವಿವಿಧ ಧರ್ಮಗಳಿಗೆ ಸೇರಿದ್ದಾರೆ ಎನ್ನುವುದು ಭಾರತದ ರಾಜಕೀಯ ವಾಸ್ತವತೆಯ ಒಂದು ಅಂಶವಷ್ಟೆ ಎಂಬುದನ್ನು ಕಮ್ಯುನಿಸ್ಟರು ಅರಿತಿದ್ದರು. ಭಾರತದ ಜನಸಂಖ್ಯೆಯು ವಿಭಿನ್ನ ಭಾಷೆಗಳನ್ನು ಮಾತನಾಡುವ ವಿಭಿನ್ನ ರಾಷ್ಟ್ರೀಯತೆಗಳನ್ನು ಒಳಗೊಂಡಿದೆ, ಅವುಗಳ ಒಳಗಡೆ ತಮ್ಮದೇ ಆದ ವಿಶಿಷ್ಟ ಸಾಮಾಜಿಕ-ಸಾಂಸ್ಕೃತಿಕ ಬದುಕನ್ನು ಹೊಂದಿವೆ ಮತ್ತು ಅಂತಹ ಪ್ರತಿಯೊಂದು ರಾಷ್ಟ್ರೀಯತೆಯು ವಿವಿಧ ಮತಧರ್ಮಗಳು ಮತ್ತು ಜಾತಿಗಳಾಗಿ ಇನ್ನೂ ವಿಭಜನೆಯಾಗಿವೆ ಎಂಬ ಅಷ್ಟೇ ಮುಖ್ಯವಾದ ವಾಸ್ತವಾಂಶವನ್ನು ಕಮ್ಯುನಿಸ್ಟರು ಜನರ ಗಮನಕ್ಕೆ ತಂದರು. ಇದು ರಾಜಕೀಯ ವಾಸ್ತವ ಎಂದು ಕಮ್ಯುನಿಸ್ಟ್ ಪಕ್ಷವು ಒತ್ತುಕೊಟ್ಟು ಹೇಳಿತು.

ಭಾಷಾವಾರು ಪ್ರಾಂತಗಳನ್ನು ಅದರ ಪೂರ್ಣ ಅರ್ಥದಲ್ಲಿ ಜಾರಿ ಮಾಡಬೇಕೆಂದು ಕಮ್ಯುನಿಸ್ಟರು ಒತ್ತಾಯಿಸಿದರು. ಈ ವಿಚಾರವಾಗಿ ಕಮ್ಯುನಿಸ್ಟರು ರಾಷ್ಟ್ರೀಯತೆಯ ಬಗ್ಗೆ ಲೆನಿನ್ ಅವರ ಕಣ್ಣೋಟದ ಮಾರ್ಗದರ್ಶನ ಅನುಸರಿಸಿದರು. ಲೆನಿನ್ ಮತ್ತು ಸ್ಟಾಲಿನ್ ವಿವರಿಸಿದಂತೆ, ಬಂಡವಾಳಶಾಹಿಯ ಬೆಳವಣಿಗೆಯು ಭಾಷಿಕ ಹಾಗೂ ಸಾಂಸ್ಕೃತಿಕ ಏಕರೂಪತೆ ಮತ್ತು ಆರ್ಥಿಕ ಹಾಗೂ ರಾಜಕೀಯ ಅಸ್ಮಿತೆಯೊಂದಿಗೆ ರಾಷ್ಟ್ರೀಯತೆಗಳ ಬೆಳವಣಿಗೆಗೆ ಕಾರಣವಾಗುತ್ತದೆ.

ಭಾಷಾವಾರು ಪ್ರಾಂತಗಳ ರಚನೆಗಾಗಿನ ಒಲವು ಭಾರತದ ಬೂರ್ಜ್ವಾ ಪ್ರಜಾಪ್ರಭುತ್ವವಾದಿ ರಾಷ್ಟ್ರೀಯ ಚಳುವಳಿಯ ಅವಿಭಾಜ್ಯ ಅಂಗವಾಗಿದೆ ಮತ್ತು ಅದು ಕಾಂಗ್ರೆಸ್ಸಿನಿಂದ ಪಡೆದ ಪ್ರೋತ್ಸಾಹವನ್ನು ಚಾರಿತ್ರಿಕ ವಾಸ್ತವತೆಯ ಅಭಿವ್ಯಕ್ತಿ ಎಂದು ಕಮ್ಯುನಿಸ್ಟರು ಗ್ರಹಿಸಿದರು.

ಭಾರತದಲ್ಲಿ ವಿಭಿನ್ನ ರಾಷ್ಟ್ರೀಯತೆಗಳು ಇವೆ ಎಂಬುದನ್ನು ಒಪ್ಪಿಕೊಂಡಾಗ ಮಾತ್ರವೇ ಭಾರತದ ಸ್ವಾತಂತ್ರ್ಯದ ಕಲ್ಪನೆ ಸಂಪೂರ್ಣವಾಗುತ್ತದೆ ಮತ್ತು ಸ್ಪಷ್ಟವಾಗುತ್ತದೆ ಎಂದು ಕಮ್ಯುನಿಸ್ಟರು ಒತ್ತಿಹೇಳಿದರು; ಈ ರಾಷ್ಟ್ರೀಯತೆಗಳು ಪ್ರತಿಯೊಂದರಲ್ಲೂ ಭಿನ್ನ ಧರ್ಮಗಳಾಗಿಯೂ ವಿಂಗಡಣೆ ಇದ್ದರೂ, ಭಾಷಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಇವು ಒಟ್ಟಾಗಿದ್ದಾವೆ; ಭಾರತದ ಭವಿಷ್ಯದ ಆಡಳಿತ ರಚನೆಯನ್ನು ಈ ಒಂದೊಂದೂ ರಾಷ್ಟ್ರೀಯತೆಗಳಿಗೆ ಮುಕ್ತವಾಗಿ ಬೆಳೆಯಲು ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ರೂಪಿಸಬೇಕಾಗಿದೆ.. ಭಿನ್ನ ರಾಷ್ಟ್ರೀಯತೆಗಳಾಗಿ ಸಂಯೋಜಿತರಾಗಿರುವ ಭಾರತದ ಜನರು ಚಾರಿತ್ರಿಕ ಕಾರಣಗಳಿಂದಾಗಿ ರಾಜಕೀಯವಾಗಿ ಒಂದುಗೂಡಿದ್ದಾರೆ ಎಂಬುದನ್ನೂ ಕಮ್ಯುನಿಸ್ಟ್ ಪಕ್ಷ ಬೊಟ್ಟು ಮಾಡಿ ತೋರಿಸಿತು. ಬ್ರಿಟಿಷರ ಆಳ್ವಿಕೆಯ ಅಡಿಯಲ್ಲಿ ಅವರು ಕೃತಕವಾಗಿ ಒಂದುಗೂಡಿದ್ದಾರಾದರೂ, ಬ್ರಿಟಿಷರ ಆಳ್ವಿಕೆಯ ವಿರುದ್ಧದ ಹೋರಾಟವು ಭಾರತದ ಜನರ ರಾಷ್ಟ್ರೀಯ ಐಕ್ಯತೆಯನ್ನು ಕ್ರೋಢೀಕರಿಸಿತು. ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಮೂಲಕ ಹೊರಹೊಮ್ಮಿದ ರಾಷ್ಟ್ರೀಯ ಐಕ್ಯತೆಯ ಮುಂದುವರಿಕೆಯು ಸ್ವಾತಂತ್ರ್ಯಾನಂತರದ ಜನರ ಇನ್ನೂ ಹೆಚ್ಚಿನ ಮುನ್ನಡೆಗೆ ಸಹಾಯವಾಗಲಿದೆ. ಸ್ವಾತಂತ್ರ್ಯಾನಂತರದ ರಾಷ್ಟ್ರ ನಿರ್ಮಾಣದಲ್ಲಿ ಒಟ್ಟಿಗೇ ನಿಂತು ಹೊಸ ಪ್ರಜಾಸತ್ತಾತ್ಮಕ ಪ್ರಗತಿಪರ ಭಾರತವನ್ನು ಕಟ್ಟಿದಾಗ ಮಾತ್ರವೇ ಈ ಒಂದೊಂದೂ ರಾಷ್ಟ್ರೀಯತೆಗಳ ಅಭಿವೃದ್ಧಿ ಸಾಧ್ಯವಾಗುತ್ತದೆ.

ಕಮ್ಯುನಿಸ್ಟರು ಭಾರತದ ರಾಜಕೀಯ ಭವಿಷ್ಯವನ್ನು ಈ ಕಣ್ಣೋಟದಿಂದ ವಿಶ್ಲೇಷಣೆ ಮಾಡುತ್ತಿದ್ದ ಸಮಯದಲ್ಲಿ ಜಿನ್ನಾ ಅವರ 'ಎರಡು-ರಾಷ್ಟ್ರಗಳ ಸಿದ್ಧಾಂತ' ಮತ್ತು ಮುಸ್ಲಿಮೇತರ ರಾಷ್ಟ್ರೀಯವಾದಿಗಳ 'ಒಂದು ರಾಷ್ಟ್ರ ಸಿದ್ಧಾಂತ'ಗಳ ನಡುವೆ ತಿಕ್ಕಾಟ ನಡೆಯುತ್ತಿತ್ತು. ಈ ತಿಕ್ಕಾಟದಿಂದ ಹುಟ್ಟಿದ ಸಮಸ್ಯೆಗಳಿಗೆ ಒಂದು ಪರಿಹಾರವಾಗಿ ಕಮ್ಯುನಿಸ್ಟರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಆದ್ದರಿಂದ ಅದು ಪಾಕಿಸ್ತಾನದ ಬೇಡಿಕೆಗೆ ಬೆಂಬಲ ನೀಡಿದಂತೆ ಎಂದು ಜನರು ಸಹಜವಾಗಿಯೇ ಭಾವಿಸಿದರು.

ಕಮ್ಯುನಿಸ್ಟರು ಕಲ್ಪಿಸಿಕೊಂಡಿದ್ದ ರಾಜಕೀಯ ವ್ಯವಸ್ಥೆಯು ವಾಸ್ತವದಲ್ಲಿ ಪಾಕಿಸ್ತಾನವೆಂಬ ಕಲ್ಪನೆಗಿಂತ ಮೂಲತಃ ಭಿನ್ನವಾಗಿತ್ತು. ಧರ್ಮದ ಆಧಾರದ ಮೇಲೆ 'ಹಿಂದೂ ಭಾರತ' ಮತ್ತು 'ಮುಸ್ಲಿಂ ಭಾರತ'ದ ನಡುವೆ ವ್ಯತ್ಯಾಸ ಕಲ್ಪಿಸಲು ಕಮ್ಯುನಿಸ್ಟರು ನಿರಾಕರಿಸಿದರು. ಮುಸ್ಲಿಂ ಲೀಗ್ ಒತ್ತಾಯಿಸಿದಂತೆ ಭಾರತವನ್ನು ವಿಭಜಿಸಬೇಕಾಗಿ ಬಂದರೂ, ಅದರಿಂದ ಉದ್ಭವಿಸುವ ಎರಡು ದೇಶಗಳು ಎದುರಿಸಬೇಕಾಗುವ ಸಂಕೀರ್ಣವಾದ ರಾಷ್ಟ್ರೀಯತೆಯ ಸಮಸ್ಯೆಗಳನ್ನು ಎದುರಿಸಬೇಕಾದ ವಾಸ್ತವದ ಕಡೆ ಅವರು ಗಮನ ಸೆಳೆದರು.

ಆದರೆ, ಪಾಕಿಸ್ತಾನ ಕುರಿತಾದ ಕಮ್ಯುನಿಸ್ಟರ ನಿಲುವು ದೋಷದಿಂದ ಮುಕ್ತವಾಗಿತ್ತು ಎಂಬುದು ಅದರ ಅರ್ಥವಲ್ಲ. 1945ರಲ್ಲಿ ಪ್ರಕಟಿಸಿ ಪ್ರಬಂಧವೊಂದು ದೇಶದ ವಾಯುವ್ಯ ಭಾಗದಲ್ಲಿ ಮುಸ್ಲಿಂ ರಾಷ್ಟ್ರೀಯತೆಗಳನ್ನು ಗುರುತಿಸುವಂತಹ ಒಂದು ವಾದವನ್ನು ಮುಂದಿಟ್ಟಿತ್ತು. ಈ ತಪ್ಪು ತಿಳುವಳಿಕೆಯನ್ನು ನಂತರದಲ್ಲಿ ತಿದ್ದಿಕೊಳ್ಳಲಾಯಿತು. ಎರಡು ದೇಶಗಳ ನಡುವಿನ ಗಡಿಯನ್ನು ಧರ್ಮದ ಆಧಾರದಲ್ಲಿ ನಿರ್ಧರಿಸಬೇಕು ಎಂಬ ಲೀಗಿನ ನಿಲುವನ್ನು ಅಗತ್ಯವಿದ್ದಷ್ಟು, ಶಕ್ತಿಯುತವಾಗಿ ಮತ್ತು ಪಟ್ಟುಹಿಡಿದು ಬಯಲುಮಾಡುವ ಯತ್ನಕ್ಕೆ ಪಕ್ಷ ಮುಂದಾಗಲಿಲ್ಲ. ಈ ಮೂಲಕ ಪಾಕಿಸ್ತಾನಕ್ಕಾಗಿನ ಲೀಗಿನ ಒತ್ತಾಯ ಮತ್ತು ನಂತರದ ಭಾರತದ ವಿಭಜನೆಗೆ ಪಕ್ಷ ಸಹಾಯ ಮಾಡಿತು ಎಂಬ ಪಕ್ಷ-ವಿರೋಧಿಗಳ ಪ್ರಚಾರಕ್ಕೆ ಅದು ದಾರಿ ಮಾಡಿಕೊಟ್ಟಿತು.

ಪಕ್ಷದ ನಿಲುವಿನಲ್ಲಿ ಮತ್ತೊಂದು ಗಂಭೀರ ದೌರ್ಬಲ್ಯವಿತ್ತು. ಗಾಂಧಿ-ಜಿನ್ನಾ ಮಾತುಕತೆಗಾಗಿ ಸಿದ್ಧತೆ ಮಾಡಿದ್ದ ರಾಜಗೋಪಾಲಾಚಾರಿ, ಅವರ ಪ್ರಸ್ತಾವಗಳ ಆಧಾರದಲ್ಲಿ ಮಾತುಕತೆಯನ್ನು ಆರಂಭಿಸಿದ ಗಾಂಧಿ, ಮತ್ತು ಬಹಳ ಚಾಕಚಕ್ಯತೆಯಿಂದ ಈ ಮಾತುಕತೆಗಳನ್ನು ಬಳಸಿಕೊಂಡ ಜಿನ್ನಾ ಮತ್ತು ಅದರ ನಂತರ ಸಂಭವಿಸಿದ ಘಟನೆಗಳು, ಇವೆಲ್ಲವೂ ರಾಜಕೀಯ ನಾಯಕರುಗಳು ಬ್ರಿಟಿಷ್ ಆಳರಸರ ಜತೆ ಚೌಕಾಸಿ ಮಾಡಿ ತಮ್ಮ ವರ್ಗ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಎಂಬ ಸತ್ಯವನ್ನು ಪೂರ್ಣವಾಗಿ ಗ್ರಹಿಸುವಲ್ಲಿ ಪಕ್ಷ ವಿಫಲವಾಯಿತು. ಈ ಬೇಡಿಕೆಯ ಪೂರ್ಣ ಧ್ವನಿಯನ್ನು ಸರಿಯಾಗಿ ತಿಳಿದುಕೊಳ್ಳದೆ, ಆ ರಾಜಕಾರಣಿಗಳ ಶಾಮೀಲಿನ ನಿಲುವನ್ನು ಬೆಂಬಲಿಸಿದ್ದು ಕಮ್ಯುನಿಸ್ಟ್ ಪಕ್ಷದ ನಿಲುವಿನಲ್ಲಿನ ಬಹು ಮುಖ್ಯವಾದ ದೌರ್ಬಲ್ಯವಾಗಿತ್ತು. ಗಾಂಧಿ-ಜಿನ್ನಾ ಮಾತುಕತೆಗಳು ಭಾರತವನ್ನು ಬಾಧಿಸುತ್ತಿದ್ದ ರೋಗಕ್ಕೆ ಸರಿಯಾದ ಮದ್ದು ಎಂದು ರಾಜಗೋಪಾಲಾಚಾರಿ ಮತ್ತಿತರ ರಾಜಕಾರಣಿಗಳು ಹೇಳಿದ್ದ ಅಂಶವನ್ನೇ ಪಕ್ಷವು ತನ್ನ ಪ್ರಚಾರ ಹಾಗೂ ಪತ್ರಿಕೆಗಳಲ್ಲಿ ಬಿಂಬಿಸಲು ಪ್ರಯತ್ನಿಸಿತು. ಈ ಶಾಮೀಲಿನ ರಾಜಕೀಯವನ್ನು ವಿರೋಧಿಸುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಯೋಧರಲ್ಲಿನ ಆತ್ಮವಿಶ್ವಾಸವನ್ನು ಬಲಪಡಿಸಿ ಅವರನ್ನು ಒಗ್ಗೂಡಿಸುವ ಮೂಲಕ ಕಾಂಗ್ರೆಸ್ ಹಾಗೂ ಲೀಗಿನ ನಾಯಕತ್ವದ ಚೌಕಾಶಿ ವ್ಯಾಪಾರದ ರಾಜಕೀಯವನ್ನು ಬಯಲುಮಾಡುವಲ್ಲಿ ಪಕ್ಷವು ವಿಫಲವಾಯಿತು. ಆ ವರ್ಷಗಳಲ್ಲಿ ಸಂಭವಿಸಿದ ರಾಜಕೀಯ ಬೆಳವಣಿಗೆಗಳನ್ನು ಕುರಿತು ಜನರಿಗೆ ಸಾಕಷ್ಟು ಎಚ್ಚರಿಕೆ ನೀಡುವಲ್ಲಿ ಸಹ ಪಕ್ಷ ಸೋತಿತು.


ಹೀಗಿದ್ದಾಗ್ಯೂ, ಭಾರತವು ಒಂದು ಬಹು-ರಾಷ್ಟ್ರೀಯತೆಗಳ ದೇಶ ಮತ್ತು ಎಲ್ಲಾ ರಾಷ್ಟ್ರೀಯತೆಗಳ ಮುಕ್ತ ಬೆಳವಣಿಗೆಯ ಪರಿಸ್ಥಿತಿಯಲ್ಲಿ ಮಾತ್ರವೇ ಭಾರತದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯ ಎಂಬ ವಿಚಾರವನ್ನು ಜನರ ನಡುವೆ ಪ್ರಚಾರ ಮಾಡುವ ಮೂಲಕ ಕಮ್ಯುನಿಸ್ಟ್ ಪಕ್ಷವು ಭಾರತದ ರಾಜಕೀಯಕ್ಕೆ ಅಮೂಲ್ಯವಾದ ಕೊಡುಗೆ ನೀಡಿದೆ. ಆ ಅವಧಿಯಲ್ಲಿನ ಕಮ್ಯುನಿಸ್ಟರ ಚಟುವಟಿಕೆಗಳು ನಂತರದಲ್ಲಿ, ಭಾಷೆಯ ಆಧಾರದಲ್ಲಿ ಪ್ರಾಂತಗಳ ಮತ್ತು ರಾಜರ ಸಂಸ್ಥಾನಗಳ ಮರುವಿಂಗಡಣೆಗಾಗಿ 'ಐಕ್ಯ ಕೇರಳ', 'ವಿಶಾಲ ಆಂಧ್ರಾ', 'ಸಂಯುಕ್ತ ಮಹಾರಾಷ್ಟ್ರ', 'ಮಹಾ ಗುಜರಾತ್' ಇತ್ಯಾದಿಗಳಂತಹ ಬಲಿಷ್ಠ ಆಂದೋಲನಗಳ ಉದಯಕ್ಕೆ ಕಾರಣವಾಯಿತು.

ಭಾರತದಲ್ಲಿನ ರಾಷ್ಟ್ರೀಯತೆಗಳ ಸಮಸ್ಯೆಗಳನ್ನು ಸಾಮ್ರಾಜ್ಯಶಾಹಿ ಹಾಗೂ ಪಾಳೇಗಾರಿ ಪದ್ಧತಿಗಳ ವಿರುದ್ಧದ ಹಾಗೂ ಪ್ರಜಾಪ್ರಭುತ್ವಕ್ಕಾಗಿನ ಹೋರಾಟವನ್ನಾಗಿ ನೋಡಬೇಕೆಂದು ಕಮ್ಯುನಿಸ್ಟರು 1944-45ರಿಂದಲೂ ಪ್ರಯತ್ನಿಸುತ್ತಿದ್ದರು. ಈ ದಿಕ್ಕಿನಲ್ಲಿನ ಪ್ರಯತ್ನಗಳು ಮೂರು ಪ್ರಬಂಧಗಳ – ಭವಾನಿ ಸೇನ್ ಅವರ ನೂತನ್ ಬಂಗ್ಲಾ, ಪಿ.ಸುಂದರಯ್ಯ ಅವರ ವಿಶಾಲ ಆಂಧ್ರಾ ಲೊ ಪ್ರಜಾ ರಾಜ್ಯಂ ಮತ್ತು ಇ.ಎಂ.ಎಸ್. ನಂಬೂದಿರಿಪಾಡ್ ಅವರ ಒನ್ನೇಕಾಲ್ ಕೋಟಿ ಮಲಯಾಲಿಕಳ್(ಒಂದೂಕಾಲು ಕೋಟಿ ಮಲಯಾಳಿಗಳು) – ಪ್ರಕಟಣೆಯಲ್ಲಿ ಫಲಕೊಟ್ಟವು. ಅವು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಕೋನದಲ್ಲಿ ಮೂರು ರಾಷ್ಟ್ರೀಯತೆಗಳ ಇತಿಹಾಸ ಮತ್ತು ಸಮಕಾಲೀನ ಸಮಸ್ಯೆಗಳನ್ನು ಪರಿವೀಕ್ಷಿಸಿದ್ದವು. ಪಕ್ಷವು ಆ ದಿನಗಳಲ್ಲಿ ನಡೆಸಿದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಕೆಲಸಗಳು ನಂತರದ ವರ್ಷಗಳಲ್ಲಿ ಹಲವಾರು ಚಳುವಳಿಗಳಿಗೆ ಮತ್ತು ಹೋರಾಟಗಳಿಗೆ ನಾಂದಿ ಹಾಡಿದವು; ಬಂಗಾಳದ ತೇಭಾಗಾ ಚಳುವಳಿ, ಆಂಧ್ರದ ತೆಲಂಗಾಣ ಹೋರಾಟ ಮತ್ತು ಕೇರಳದ ಪುನ್ನಪ್ರ-ವಯಲಾರ್ ಹೋರಾಟಗಳು ಇವುಗಳಲ್ಲಿ ಪ್ರಮುಖವಾದದ್ದು.

ಸೋಶಿಯಲಿಸ್ಟರು ಮತ್ತು ಸುಭಾಶ್ ಚಂದ್ರ ಬೋಸ್ ಅವರ ಬೆಂಬಲಿಗರು ಚೌಕಾಸಿ ರಾಜಕೀಯದೊಂದಿಗೆ ಭಾವನಾತ್ಮಕವಾಗಿ ಹೊಂದಿಕೊಳ್ಳಲಾಗಲಿಲ್ಲ. ಈ ಗುಂಪು ಮತ್ತು ಗಾಂಧಿ-ನೆಹರೂ ಗುಂಪಿನ ನಡುವಿನ ಮೂಲ ವೈರುಧ್ಯಗಳು ಬಹಳ ಕಾಲ ಹೊರಬರದೇ ಇರಲು ಸಾಧ್ಯವಾಗಲಿಲ್ಲ. ಈ ಎರಡೂ ಪಾಳೆಯಕ್ಕೆ ಸೇರದೆ ಮತ್ತು ಸ್ವತಂತ್ರವಾಗಿ ಕಮ್ಯುನಿಸ್ಟ್ ಪಕ್ಷವು ದುಡಿಯುವ ಜನರ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು, ನಿಜವಾದ ಪ್ರಜಾಪ್ರಭುತ್ವದ ಪತಾಕೆಯನ್ನು ಎತ್ತಿಹಿಡಿದು ಜನಸಮುದಾಯದ ಬಳಿ ಸಾಗಲು ಮುಂದಾಯಿತು; ಮತ್ತೊಂದೆಡೆ, ಎದ್ದು ಬರುತ್ತಿದ್ದ ಜನಾಕ್ರೋಶದ ಜತೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಸ್ಥಿತಿಯಲ್ಲಿ ಕಮ್ಯುನಿಸ್ಟರು ಇದ್ದರು.

ಪುಟ 14 ನೋಡಿ

ಐಎನ್‌ಎ ಸೇನಾಪತಿಗಳ ವಿಚಾರಣೆ ವಿರುದ್ಧ ಕಾರ್ಮಿಕರ ಪ್ರತಿಭಟನೆ: ಕೊಲ್ಕತ ಮತ್ತು ಮುಂಬಯಿಯಲ್ಲಿ



ಐಎನ್‌ಎ ಸೇನಾಪತಿಗಳು: ಪಿ.ಕೆ.ಸಹಗಲ್, ಷಾನವಾಜ್ ಖಾನ್ ಮತ್ತು ಧಿಲ್ಲೊಂ



ಕೋವಿಡ್ 19 ರಿಂದಾಗಿ ಭೀಕರ ಆರ್ಥಿಕ ಪರಿಸ್ಥಿತಿ: ಮುಂದೇನು ಮಾಡಬೇಕು?

"ನಿಮ್ಮೆಲ್ಲರನ್ನೂ ಖಿನ್ನರನ್ನಾಗಿಸುವುದು ನನ್ನ ಮಾತುಗಳ ಉದ್ದೇಶವಲ್ಲ. ಆದರೂ, ಕೊರೋನಾ ಅಂಟುರೋಗವು ಬೀರುವ ಪರಿಣಾಮಗಳು ಅದೆಷ್ಟು ಭೀಕರವಾಗಿರುತ್ತವೆ ಎಂದರೆ, ಅದನ್ನು ಹೋಲುವಂತಹ ಇನ್ನೊಂದನ್ನು ನಾವು ಈ ವರೆಗೆ ಕಂಡಿಲ್ಲ. 2008 ರ ಹಣಕಾಸು ಬಿಕ್ಕಟ್ಟಾಗಲಿ ಅಥವಾ 1930ರ ದಶಕದ ಮಹಾ ಕುಸಿತವಾಗಲಿ ಅಥವಾ ಎರಡು ಮಹಾ ಯದ್ಧಗಳಾಗಲಿ ಅದರ ಮುಂದೆ ಏನೇನೂ ಅಲ್ಲ. ಅದು ಜನಜೀವನವನ್ನು ಸ್ಥಬ್ದಗೊಳಿಸಿದೆ. ಜೀವನೋಪಾಯಗಳನ್ನು ಈಗಾಗಲೇ ನಾಶಪಡಿಸಿದೆ. ಸರಬರಾಜು ಕೊಂಡಿಗಳನ್ನು ಕತ್ತರಿಸಿದೆ. ಹಾಗಾಗಿ, ಜಾಗತಿಕ ಆರ್ಥಿಕ ಪರಿಸ್ಥಿತಿ ಅವೆಲ್ಲವುಕ್ಕಿಂತಲೂ ಕೆಟ್ಟದ್ದಾಗಿದೆ". ಇವು, ಸಧ್ಯದ ಜಾಗತಿಕ ಪರಿಸ್ಥಿತಿಯ ಬಗ್ಗೆ ನಡೆದ ಒಂದು ಸಂವಾದದಲ್ಲಿ ಪ್ರೊ. ಜಯತಿ ಘೋಷ್ ಅವರ ಆರಂಭದ ನುಡಿಗಳು.



ಕೋವಿಡ್ 19 ಸೋಂಕಿನಿಂದ ಇಡೀ ಜಗತ್ತೇ ತತ್ತರಿಸಿರುವ ಸಂದರ್ಭದಲ್ಲಿ, ಅದರಿಂದಾಗುವ ಆರ್ಥಿಕ ದುಷ್ಪರಿಣಾಮಗಳ ಬಗ್ಗೆ, ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಕೆಲವು ಪ್ರಗತಿಪರ ಅರ್ಥಶಾಸ್ತ್ರಜ್ಞರ ನಡುವೆ ಇತ್ತೀಚೆಗೆ ಒಂದು ಇಂಟರ್ನೆಟ್ ಸಂವಾದ (ವೆಬಿನಾರ್) ನಡೆಯಿತು. ಅದರಲ್ಲಿ ಭಾಗವಹಿಸಿದ್ದ ಪ್ರೊ. ಜಯತಿ ಘೋಷ್, ಈ ಆಘಾತಕಾರಿ ಬಿಕ್ಕಟ್ಟಿನಿಂದ ಹೊರ ಬರುವುದು, ಮುಂದೆ ಅನುಸರಿಸಬೇಕಾದ ದಾರಿ ಇವುಗಳಿಗೆ ಸಂಬಂಧಿಸಿದ ನೀತಿ ಮತ್ತು ಕಾರ್ಯಸೂಚಿ ಇವುಗಳ ಬಗ್ಗೆ ಆಡಿದ ಮಾತಿನ ಸಾರಾಂಶ ಇಲ್ಲಿದೆ. ಸಂಗ್ರಹಾನುವಾದ: ಕೆ.ಎಂ.ನಾಗರಾಜ್

https://www.newsclick.in/covid-19-what-be-done

ನಾವೀಗ ಅನುಭವಿಸುತ್ತಿರುವ ಪರಿಸ್ಥಿತಿ ಹಿಂದೆಂದೂ ಕಂಡರಿಯದಂತದ್ದು. ಕೋವಿಡ್ 19ರ ಬಗ್ಗೆ ಸಮಗ್ರ ಮಾಹಿತಿ ಇನ್ನೂ ಲಭ್ಯವಿಲ್ಲ. ಏಕ ಕಾಲದಲ್ಲಿ ಜಗತ್ತಿನ ಬಹುತೇಕ ಪ್ರದೇಶಗಳಲ್ಲಿ ಕೊರೊನಾ ನಿಮಿತ್ತದ ಲಾಕ್‌ಡೌನ್ ಸಹ ಹಿಂದೆಂದೂ ಕಂಡರಿಯದಂತದ್ದು. ಇಡೀ ಜಗತ್ತಿನಲ್ಲಿ ಆರ್ಥಿಕ ಚಟುವಟಿಕೆಗಳು ಸ್ತಬ್ದಗೊಂಡಿರುವುದರ ಪರಿಣಾಮಗಳು ಭೀಕರವಾಗಿರುತ್ತವೆ.

ಬೇಡಿಕೆ ಕುಸಿದು ಬಿದ್ದಿದೆ. ಜನ ಜೀವನ ಮೂರಾ ಬಟ್ಟೆಯಾಗಿದೆ. ಜನರು ತಮ್ಮ ತಮ್ಮ ಕಾಯಕದಲ್ಲಿ ತೊಡಗಿಕೊಳ್ಳದಂತಾಗಿದೆ. ಈ ಅವಧಿಯಲ್ಲಿ ಅವರಿಗೆ ಕೂಲಿ ಇಲ್ಲ. ಸಂಬಳ ಇಲ್ಲ. ತಾವು ಉತ್ಪಾದಿಸಿದ ವಸ್ತುಗಳನ್ನು ಅವರು ಮಾರುವಂತಿಲ್ಲ. ಈ ಕಾರಣಗಳಿಂದಾಗಿ ವರಮಾನಗಳು ಇಲ್ಲವಾಗಿರುವುದರಿಂದ ಬೇಡಿಕೆ ನೆಲಕ್ಕೆ ಬಿದ್ದಿದೆ. ಅದೇ ಹೊತ್ತಿನಲ್ಲಿ ಸಾಮಾನು ಸರಂಜಾಮುಗಳ ಸರಬರಾಜನ್ನು ಕೂಡ ತಗ್ಗಿಸಲಾಗಿದೆ. ಸರಬರಾಜು ಕೊಂಡಿಗಳು ಮುರಿದು ಬಿದ್ದಿವೆ. ಹಾಗಾಗಿ, ಸಧ್ಯದಲ್ಲೇ ಬಹಳಷ್ಟು ದೇಶಗಳು ಆಹಾರ, ಔಷದಿ ಮುಂತಾದ ಅಗತ್ಯ ವಸ್ತುಗಳ ಜೊತೆಗೆ ಹಲವಾರು ಸರಕು ಸಾಮಗ್ರಿಗಳ ಕೊರತೆಯನ್ನು ಎದುರಿಸಬೇಕಾಗುತ್ತದೆ.

ಖರೆ ಎಂದರೆ, ಇಂತಹ ಪರಿಸ್ಥಿತಿಯನ್ನು ಹೋಲುವಂತಹ ಘಟನೆಗಳು ಜಾಗತಿಕ ಬಂಡವಾಳಶಾಹಿಯ ಇತಿಹಾಸದಲ್ಲಿ ಕಾಣಲು ಸಿಗುವುದಿಲ್ಲ. ಈ ಪರಿಸ್ಥಿತಿಯಿಂದ ಒಂದು ಅಂಶ ಸ್ಪಷ್ಟವಾಗಿ ಕಾಣುತ್ತಿದೆ. ಅಸಮಾನತೆಗಳು ಗಣನೀಯವಾಗಿ ಹೆಚ್ಚುತ್ತಿವೆ. ಕೊರೊನಾ ಪೂರ್ವದಲ್ಲಿ ಅಸಮಾನತೆಗಳು ಉತ್ತುಂಗ ತಲುಪಿವೆ ಎಂದು ಭಾವಿಸಿದ್ದೆವು. ಆದರೆ, ಈಗ ಅವು ಮತ್ತಷ್ಟು ಉಲ್ಬಣಗೊಳ್ಳುತ್ತವೆ. ತನಗೆ ಮಾತ್ರ ಅನುಕೂಲವಾಗಬೇಕು ಎನ್ನುವ ರೀತಿಯಲ್ಲಿ ಜಗತ್ತಿನ ಅತ್ಯಂತ ಶಕ್ತಿಶಾಲಿ ದೇಶವೇ ತನ್ನ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಧೋರಣೆಯು ದೇಶ ದೇಶಗಳ ನಡುವೆ ಮತ್ತು ದೇಶಗಳಲ್ಲಿ ಆಂತರಿಕವಾಗಿ ಅಸಮಾನತೆಗಳು ಹೆಚ್ಚಲು ಕಾರಣವಾಗಿದೆ. ಇದರ ಹೊಡೆತವೂ, ಯಥಾ ಪ್ರಕಾರ, ಅಂಚಿನಲ್ಲಿರುವ ಮತ್ತು ಉದ್ಯೋಗ ಭದ್ರತೆ ಇಲ್ಲದ ಕೆಲಸಗಾರರ ಮೇಲೆ ಬೀಳುತ್ತದೆ. ಹಾಗಾಗಿ, ಲಾಕ್‌ಡೌನ್ ಅವಧಿಯಲ್ಲಿಯೂ ಸಂಬಳ ಪಡೆಯುವವರು ಮತ್ತು ಬಾಡಿಗೆ-ಬಡ್ಡಿ ವರಮಾನ ಜೀವಿಗಳು ಹಾಗೂ ಹೀಗೂ ಜೀವನ ನಿಭಾಯಿಸುವುದು ಸಾಧ್ಯವಾಗಿದೆ.


ಇಂತಹ ಒಂದು ಅಭೂತಪೂರ್ವ ಸನ್ನಿವೇಶದಲ್ಲಿ ಆರ್ಥಿಕ ರಂಗದ ಉದಯೋನ್ಮುಖ ದೇಶಗಳಿಗೆ ಹೀನಾಯವಾಗಿ ಪೆಟ್ಟು ಬೀಳುತ್ತದೆ. ಅದು ನಾನಾ ರೀತಿಯಲ್ಲಿರುತ್ತದೆ. ವಿದೇಶ ವ್ಯಾಪಾರವೇ ಅವುಗಳಲ್ಲಿ ಬಹಳ ಮುಖ್ಯವಾದದ್ದು. ರಫ್ತುಗಳು ಇಲ್ಲವೇ ಇಲ್ಲ. ದೇಶಗಳು ಲಾಕ್‌ಡೌನ್ ಆಗಿರುವಾಗ, ಎಲ್ಲ ಸರಕು ಸಾಮಗ್ರಿಗಳ ಉತ್ಪಾದನೆ ಸ್ಥಗಿತವಾಗುತ್ತದೆ. ಹಾಗಾಗಿ ರಫ್ತುಗಳು ನೆಲ ಕಚ್ಚುತ್ತವೆ. ಪ್ರಯಾಣ, ಪ್ರವಾಸೋದ್ಯಮಗಳು ಸಂಪೂರ್ಣವಾಗಿ ನಿಂತಿವೆ. ಅಂದರೆ, ಆರ್ಥಿಕ ಚಟುವಟಿಕೆಗಳು ನಿಂತಿವೆ, ಜಾಗತಿಕವಾಗಿ. ಆದ್ದರಿಂದ, ವಿದೇಶ ವ್ಯಾಪಾರದ ಸಂಬಂಧವಾಗಿ ಉದಯೋನ್ಮುಖ ದೇಶಗಳು ತಮ್ಮ ಬಾಕಿ (ಪಾವತಿ ಶೇಷ) ಚುಕ್ತಾ ಮಾಡುವುದು ಅಸಾಧ್ಯವಾಗುತ್ತದೆ. ನಿಂತು ಹೋಗಿರುವ ರಫ್ತುಗಳು ಪುನರಾರಂಭಗೊಳ್ಳುವ ಸಂಭವ ಕಡಿಮೆಯೇ. ಏಕೆಂದರೆ, ಈ ಪರಿಸ್ಥಿತಿಯಲ್ಲಿ ನಕಾರಾತ್ಮಕ ಪರಿಣಾಮಗಳು ಹಲವು ಪಟ್ಟು ಹೆಚ್ಚುತ್ತವೆ. ಅಂದರೆ, ವರಮಾನಗಳ ನಷ್ಟದಿಂದಾಗಿ ಬೇಡಿಕೆ ಕುಸಿಯುವಂತಾಗುತ್ತದೆ. ಪರಿಣಾಮವಾಗಿ, ವರಮಾನಗಳು ಮತ್ತಷ್ಟು ಕಡಿಮೆಯಾಗುತ್ತವೆ. ಸುಮಾರು ದಿನಗಳವರೆಗೆ ಪರಿಸ್ಥಿತಿ ಹೀಗೆಯೇ ಹದಗೆಡುತ್ತಾ ಹೋಗುತ್ತದೆ.

ಅದರ ಜೊತೆಯಲ್ಲಿ, ದೇಶದಲ್ಲಿ ಹೂಡಿಕೆಯಾಗುವ ಬಂಡವಾಳದ ಬಗ್ಗೆ ಬರುತ್ತಿರುವ ಸುದ್ದಿಯೂ ಕಹಿಯಾಗಿದೆ. ಹೂಡಿಕೆಯಾಗಿದ್ದ ವಿದೇಶಿ ಬಂಡವಾಳವು ಉದಯೋನ್ಮುಖ ದೇಶಗಳಿಂದ ಕಂಬಿ ಕೀಳಲು ಈಗಾಗಲೇ ಆರಂಭಿಸಿದೆ. ಅದರ ಜಾಯಮಾನವೇ ಹಾಗೆ. ಕೊರೊನಾ ಮಹಾಮಾರಿ ಅತಿ ಹೆಚ್ಚು ಮಂದಿಯನ್ನು ಬಲಿ ಪಡೆಯುತ್ತಿರುವ ಮತ್ತು ಅತಿ ಹೆಚ್ಚು ಮಂದಿ ಸೋಂಕಿತರಿರುವ ಅಮೇರಿಕಾ ದೇಶಕ್ಕೇ ಬಂಡವಾಳ ಹಾರಿ ಹೋಗುತ್ತದೆ, ತನ್ನ ರಕ್ಷಣೆಗಾಗಿ. ನಮ್ಮ ದೇಶದ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಾಗಿದ್ದ ವಿದೇಶಿ ಬಂಡವಾಳದಲ್ಲಿ ಸಾಕಷ್ಟು ಪ್ರಮಾಣ ಹೊರ ಹರಿದ ಪರಿಣಾಮವಾಗಿ ಷೇರು ಬೆಲೆಗಳು ನೆಲ ಕಚ್ಚಿವೆ. ಹೂಡಿದಾರರಿಗೆ ಅಗಾಧ ನಷ್ಟವಾಗಿದೆ.

ಹೊರ ದೇಶಗಳಿಂದ ಪಡೆದ ಸಾಲಗಳು ಮತ್ತೊಂದು ಬೃಹತ್ ಸಮಸ್ಯೆ. ಅಮೇರಿಕಾ ದೇಶವನ್ನೂ ಒಳಗೊಂಡಂತೆ ಇದೊಂದು ಜಾಗತಿಕ ಸಮಸ್ಯೆ. ದೇಶದ ಸಾಲ ಮತ್ತು ಅದರ ಜಿಡಿಪಿಯ ಅನುಪಾತದ ಲೆಕ್ಕಾಚಾರದಲ್ಲಿ ನಮ್ಮ ದೇಶವು ಮಿತಿಯನ್ನು ದಾಟಿದೆ. ಹೆಚ್ಚಿನವು ಅಲ್ಪಾವಧಿಯ ಸಾಲಗಳು. ಇವು ಸಾಂಸ್ಥಿಕ ಸಾಲಗಳಲ್ಲ. ಬಾಂಡ್ ಮಾರುಕಟ್ಟೆಯಲ್ಲಿ ಎತ್ತಿದ ಸಾಲಗಳು. ಹೇಳಿ ಕೇಳಿ ಚಂಚಲತೆಯೇ ಈ ಮಾರುಕಟ್ಟೆಯ ಸ್ವಭಾವ. ಅನೇಕ ಉದಯೋನ್ಮುಖ ದೇಶಗಳ ಬಾಂಡ್ ಮಾರುಕಟ್ಟೆಗಳು ಈಗಾಗಲೇ ಕುಸಿದು ಬಿದ್ದಿವೆ. ಎರಡನೆಯದಾಗಿ, ಇಂತಹ ಸಾಲಗಳನ್ನು ತೀರಿಸುವುದು ಹೆಚ್ಚು ಹೆಚ್ಚು ಕಠಿಣವಾಗುತ್ತಾ ಹೋಗುತ್ತದೆ. ಏಕೆಂದರೆ, ರೂಪಾಯಿ ಅಪಮೌಲ್ಯಗೊಳ್ಳುತ್ತಾ ಹೋಗುತ್ತಿದೆ. ಹಾಗಾಗಿ, ಈ ಉದಯೋನ್ಮುಖ ದೇಶಗಳು ತಿನ್ನಬೇಕಾದ ಒದೆ ದುಪ್ಪಟ್ಟಾಗುತ್ತದೆ.

ಲಾಕ್‌ಡೌನ್ ನೀತಿಯಿಂದಾಗಿ, ಅನೇಕ ದೇಶಗಳಲ್ಲಿ ಆಂತರಿಕವಾಗಿ ತೀವ್ರ ಅಸಮಾನತೆಗಳು ಸೃಷ್ಟಿಯಾಗುತ್ತವೆ. ಭಾರತ ಇದಕ್ಕೊಂದು ಪಕ್ಕಾ ಉದಾಹರಣೆ. ಭಾರತದ ಲಾಕ್‌ಡೌನ್ ಅತ್ಯಂತ ಕರಾಳವಾಗಿದೆ. ಕ್ರೂರವಾಗಿದೆ. ನಮ್ಮ ದೇಶದ 90% ಕೆಲಸಗಾರರು ಅಸಂಘಟಿತ ವಲಯದಲ್ಲಿದ್ದಾರೆ. ಅವರನ್ನು ಬೀದಿಗೆ ಎಸೆಯಲಾಗಿದೆ. ಅವರಿಗೆ ಯಾವ ಸಾಮಾಜಿಕ ರಕ್ಷಣೆಯೂ ಇಲ್ಲ. ಅವರಲ್ಲಿ ಬಹು ಪಾಲು ಮಂದಿಗೆ ಮುಂದಿನ ವಾರ ಹೊಟ್ಟೆ ಹೇಗೆ ತುಂಬಿಸಿಕೊಳ್ಳುವುದು ಎಂಬುದೇ ದೊಡ್ಡ ಸಮಸ್ಯೆ. ಇತ್ತೀಚಿನ ಒಂದು ವರದಿಯ ಪ್ರಕಾರ, ಅವರಲ್ಲಿ 40% ಮಂದಿಗೆ ಮರು ದಿನ ಹೊಟ್ಟೆ ಹೇಗೆ ತುಂಬಿಸಿಕೊಳ್ಳುವುದು ಎಂಬುದೇ ಸಮಸ್ಯೆ. ಲಾಕ್‌ಡೌನ್ ಅವಧಿಯಲ್ಲಿ ಅವರಿಗೆ ಊಟ, ವಸತಿ ಮತ್ತು ಖರ್ಚಿಗೆ ನಾಲ್ಕು ಕಾಸು ದೊರೆಯುತ್ತವೆ ಎಂಬ ಭಾವನೆ ಅವರಲ್ಲಿ ಹುಟ್ಟುವಂತೆ ನಮ್ಮ ಸಮಾಜ ಸ್ಪಂದಿಸಿಲ್ಲ. ಇವೆಲ್ಲವೂ ನಮ್ಮ ಮುಂದಿರುವ ದೊಡ್ಡ ಸಮಸ್ಯೆಗಳೇ. ಈ ಸಮಸ್ಯೆಗಳು, ನಾವು ಈ ವರೆಗೆ ಕಂಡರಿಯದ ರೀತಿಯಲ್ಲಿ ದುಷ್ಪರಿಣಾಮ ಬೀರುತ್ತವೆ. 2008 ರ ಹಣಕಾಸು ಬಿಕ್ಕಟ್ಟು, 1930ರ ದಶಕದ ಮಹಾ ಕುಸಿತ ಮತ್ತು ಮೊದಲನೆಯ ಹಾಗೂ ಎರಡನೆಯ ಮಹಾ ಯದ್ಧಗಳು ಉಂಟು ಮಾಡಿದ ಘೋರ ಪರಿಣಾಮಗಳ ಭೀಕರತೆಯ ಬಗ್ಗೆ ನಮಗೆ ತಿಳಿದಿದೆ. ಆದರೆ, ಈ ಕರೋನಾ ಬಿಕ್ಕಟ್ಟಿನ ಪರಿಣಾಮಗಳು ಅವೆಲ್ಲವುಕ್ಕಿಂತಲೂ ಭೀಕರವಾಗುತ್ತವೆ. ಆದ್ದರಿಂದ, ನಾವು ಮಾಡಬೇಕಾಗಿರುವುದೇನು?

ಇದೊಂದು ಅಭೂತಪೂರ್ವ ಜಾಗತಿಕ ಸವಾಲು ಎಂದಾದರೆ, ಅದಕ್ಕೆ ನಾವು ಸ್ಪಂದಿಸಬೇಕಾದ ರೀತಿಯೂ ಅಭೂತಪೂರ್ವವಾಗಿಯೇ ಇರಬೇಕಾಗುತ್ತದೆ. ಈ ಅಂಶವನ್ನು ಗುರುತಿಸಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ನಾವು ಅದನ್ನು ಸಣ್ಣದಾಗಿ ಯೋಚಿಸಬಾರದು. ಅದು ತೇಪೆ ಹಚ್ಚುವ ಕೆಲಸವಾಗಬಾರದು. ನಾವು ಅದಕ್ಕೆ ಘನವಾಗಿ ಸ್ಪಂದಿಸಬೇಕಾಗುತ್ತದೆ. ಅದು ಶೀಘ್ರವಾಗಿಯೂ ಇರಬೇಕಾಗುತ್ತದೆ. ಇಲ್ಲೊಂದು ವೈರುಧ್ಯವೂ ಇದೆ. ಹೇಗೆಂದರೆ, ನವ ಉದಾರ ಹಣಕಾಸು ಬಂಡವಾಳದ ನಿಯಂತ್ರಣದಲ್ಲಿರುವ ಒಂದು ಜಾಗತೀಕರಣಗೊಂಡ ಅರ್ಥವ್ಯವಸ್ಥೆಯಲ್ಲಿ ನಾವಿನ್ನೂ ಇದ್ದೇವೆ ಮತ್ತು (ಅದರ) ಜಾಗತಿಗ ಸಂಸ್ಥೆಗಳಿಗೆ ಅಂತಹ ಒಂದು ವಿಶಾಲ ಮತ್ತು ದೂರದೃಷ್ಟಿಯ ಸಾಮರ್ಥವಿಲ್ಲ. ಮತ್ತು, ಇಂತಹ ಒಂದು ಜಗತ್ತಿನ ನಾಯಕ ಎಂದು ಕರೆಸಿಕೊಳ್ಳುವ ಟ್ರಂಪ್, ಒಂದು ಉಗ್ರ ರಾಷ್ಟ್ರೀಯವಾದೀ ರೀತಿಯ ಸ್ಪಂದನೆಯಲ್ಲಿ ತೊಡಗಿರುವಾಗ, ಬಿಕ್ಕಟ್ಟು ಪರಿಹರಿಸುವಲ್ಲಿ ಜಾಗತಿಕ ಸಹಕಾರ ದೊರೆಯುವ ಅವಕಾಶಗಳು ತೀರಾ ಕಡಿಮೆಯೇ.



ಅರ್ಥ ವ್ಯವಸ್ಥೆ: ದುರಾಡಳಿತದ ಐಸಿಯು ನಿಂದ ಕೊವಿಡ್ ಐಸಿಯು ಗೆ
ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಇನ್ನೊಂದೆಡೆಯಲ್ಲಿ, ಸಾರ್ವಜನಿಕ ಆರೋಗ್ಯದ ಮೇಲೆ ಮಾಡುವ ಖರ್ಚುಗಳು ಬಹಳ ಮುಖ್ಯ ಎಂಬುದು ಮನ್ನಣೆ ಪಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲಿನ ವೆಚ್ಚಗಳ ಕಡಿತ ಮತ್ತು ಅದನ್ನು ಅದನ್ನು ಖಾಸಗೀಕರಣಗೊಳಿದ್ದು ಒಂದು ಪ್ರಮಾದ ಎಂಬ ಅರಿವು ಮೂಡುತ್ತಿರುವುದನ್ನು ಗಮನಿಸಬಹುದು. ಕಡು ಬಡವನ ಆರೋಗ್ಯವನ್ನು ಕಡೆಗಣಿಸಿದರೆ, ಗಣ್ಯಾತಿಗಣ್ಯರ ಆರೋಗ್ಯವೂ ಅಪಾಯಕ್ಕೊಳಗಾಗುತ್ತದೆ ಎಂಬ ಅರಿವೂ ಮೂಡುತ್ತಿದೆ. ಅದರಿಂದಾಗಿ, ಕೊನೆಯ ಪಕ್ಷ ಸಾರ್ವಜನಿಕ ಆರೋಗ್ಯದ ಮೇಲೆ ಮಾಡುವ ಖರ್ಚುಗಳು ಹೆಚ್ಚುತ್ತವೆ.

ಆದರೆ, ಅಷ್ಟೇ ಸಾಲದು. ನುಂಗಲು ಹೊರಟಿರುವ ಆರ್ಥಿಕ ವಿಪತ್ತಿನಿಂದ ಎಲ್ಲ ಉದಯೋನ್ಮುಖ ದೇಶಗಳನ್ನು ರಕ್ಷಿಸಬೇಕು ಎಂದಾದರೆ, ಸ್ಪಂದನೆ ಇನ್ನೂ ಹೆಚ್ಚಿನ ಮಟ್ಟದಲ್ಲಿರಬೇಕಾಗುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ, ಇವೆಲ್ಲವೂ ಎರಡನೆಯ ಉತ್ತಮ ಪರಿಹಾರವಾಗಿ ತೋರುತ್ತದೆ. ಏಕೆಂದರೆ, ಈ ಪರಿಹಾರ ನಿರ್ವಹಣೆಯಲ್ಲಿ ಐಎಂಎಫ್ ಪಾತ್ರ ಅಗತ್ಯವಾಗುತ್ತದೆ. ಐಎಂಎಫ್ ಬಗ್ಗೆ ನನಗೆ ಹೆಚ್ಚು ಗೌರವವಿಲ್ಲ. ಈ ಸಂಸ್ಥೆಯು ತನಗೊಂದು ಯೋಗ್ಯತೆ ಇದೆ ಎಂಬುದನ್ನು ಅದರ ಜೀವಿತಾವಧಿಯಲ್ಲಿ ಯಾವತ್ತೂ ಸಾಬೀತುಪಡಿಸಿಲ್ಲ. ಅದೇನೇ ಇರಲಿ, ಈ ಕ್ಷಣದಲ್ಲಿ ನಾವು ಒಟ್ಟಿಗೆ ಕುಳಿತು ಅದಕ್ಕೆ ಬದಲಾಗಿ ಇನ್ನೊಂದು ಸಂಸ್ಥೆಯನ್ನು ಹುಟ್ಟಿಹಾಕಲಾಗದು.

ಜಾಗತಿಕ ಮಟ್ಟದಲ್ಲಿ ಲಿಕ್ವಿಡಿಟಿ (ಅಂದರೆ, ಆಸ್ತಿಗಳನ್ನು ಕರಗಿಸಿ/ಪರಿವರ್ತಿಸಿ ಹಣ ಒದಗಿಸಿಕೊಳ್ಳುವಿಕೆ-ಅನು) ಸೃಷ್ಟಿಸುವುದು ಐಎಂಎಫ್‌ನ ಹೊಣೆಗಾರಿಕೆ. ಈ ಉದ್ದೇಶಕ್ಕಾಗಿ ಎಸ್‌ಡಿಆರ್ (ಸ್ಪೆಷಲ್ ಡ್ರಾಯಿಂಗ್ ರೈಟ್ಸ್)ಗಳನ್ನು ಸೃಷ್ಟಿಸುವ ಅಧಿಕಾರವನ್ನು ಐಎಂಎಫ್ ಹೊಂದಿದೆ. ಜಾಗತಿಕ ಮಟ್ಟದಲ್ಲಿ ಲಿಕ್ವಿಡಿಟಿಯ ಹೆಚ್ಚಳದ ಅಗತ್ಯ ಪ್ರತಿಯೊಂದು ದೇಶಕ್ಕೂ ತತ್‌ಕ್ಷಣದಲ್ಲೇ ಇದೆ. ಹಾಗಾಗಿ, ಐಎಂಎಫ್ ಅಧಿಕವಾಗಿ 1–1.5 ಟ್ರಿಲಿಯನ್ ಎಸ್‌ಡಿಆರ್‌ಗಳನ್ನು ಸೃಷ್ಟಿಸಬೇಕಾಗುತ್ತದೆ. ಈ ಎಸ್‌ಡಿಆರ್‌ಗಳಲ್ಲಿ ಈಗಾಗಲೇ ನಿಗದಿಪಡಿಸಿರುವ ಕೋಟಾ ಪ್ರಕಾರ ಎಲ್ಲ ದೇಶಗಳೂ ತಮ್ಮ ಪಾಲು ಪಡೆಯುತ್ತವೆ. ಹೊಸ ಎಸ್‌ಡಿಆರ್‌ಗಳನ್ನು ಸೃಷ್ಟಿಸಿ ನೀಡಿಕೆಯಾದಾಗ ಅದರೊಂದಿಗೆ ಯಾವ ಶರತ್ತುಗಳನ್ನೂ ವಿಧಿಸುವಂತಿಲ್ಲ. ಆದ್ದರಿಂದ, ಐಎಂಎಫ್, ನಾನು ನಿನಗೆ ಕೊಡುವುದು ಇಂತಿಷ್ಟು ಮಾತ್ರ, ಅದೂ ನಿನ್ನ ನಡತೆ ತೃಪ್ತಿಕರವಾಗಿದ್ದಾಗ ಎನ್ನುವಂತಿಲ್ಲ. ಶ್ರೀಮಂತ ದೇಶಗಳಿಗೆ ಈಗ ಎಸ್‌ಡಿಆರ್‌ಗಳ ಅಗತ್ಯವಿಲ್ಲ. ಆದರೆ, ಉದಯೋನ್ಮುಖ ದೇಶಗಳಿಗೆ ಎಸ್‌ಡಿಆರ್‌ಗಳು ಜೀವನಾಡಿಯಾಗುತ್ತವೆ. ಹಾಗಾಗಿ, ಇದೊಂದು ಬಹಳ ಮುಖ್ಯವಾದ ತುರ್ತು ಕ್ರಮವಾಗುತ್ತದೆ. ಅದರ ಜೊತೆಯಲ್ಲಿ, ಸಾಲಗಳ ಮರು ಪಾವತಿಯನ್ನು ಕೆಲ ಕಾಲದವರೆಗೆ ಮುಂದೂಡಬೇಕಾಗುತ್ತದೆ (ಮೊರಾಟೋರಿಯಂ) ಸಧ್ಯದ ಪರಿಸ್ಥಿತಿಯಲ್ಲಿ ಬಹುತೇಕ ಉದಯೋನ್ಮುಖ ದೇಶಗಳಿಗೆ ಸಾಲದ ಕಂತು ಕಟ್ಟುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವುಗಳಿಗೆ ಸಾಲದ ಮೇಲಿನ ಬಡ್ಡಿ ಸೇರಿಸದೆ ಕಂತು ಕಟ್ಟಲು 3–6 ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಅಂದರೆ, ಕಾಲ ಕ್ರಮದಲ್ಲಿ ಸಾಲ ಮನ್ನಾ ಬಗ್ಗೆ ಆಲೋಚಿಸಿ, ಆ ಬಗ್ಗೆ ಒಂದು ಪ್ರಸ್ತಾಪ ಮಂಡಿಸಬಹುದು. ವಾಸ್ತವಿಕವಾಗಿ, ಎಲ್ಲಾ ಹಳೆಯ ಸಾಲಗಳ ಮರು ಪಾವತಿಯ ಕಾಲ ಮಿತಿಯನ್ನು ಹೊಸದಾಗಿ ನಿಗದಿಪಡಿಸಬೇಕಾಗುತ್ತದೆ. ಏಕೆಂದರೆ, ಆರು ತಿಂಗಳ ಬಳಿಕವೂ ಸಾಲದ ಕಂತು ಕಟ್ಟುವುದು ಅವುಗಳಿಗೆ ಸಾಧ್ಯವಾಗುವುದಿಲ್ಲ.

ಉದಯೋನ್ಮುಖ ದೇಶಗಳು ತಮ್ಮ ದೇಶದಲ್ಲಿ

ಪುಟ 14 ನೋಡಿ

ಮಹಾರಾಷ್ಟ್ರದಲ್ಲಿ ದೊಂಬಿ ಹತ್ಯೆಯ ಪ್ರಕರಣ–ಕೋಮು ಬಣ್ಣ ಹಚ್ಚಲು ಆರೆಸ್ಸೆಸ್–ಬಿಜೆಪಿ ಪ್ರಯತ್ನ

ಮಹಾರಾಷ್ಟ್ರದ ಗಡಿ ಜಿಲ್ಲೆ ಪಾಲ್ಘರ್ ನ ದಹಾಣು ತಹಸೀಲಿನ ಗಡಚಿಂಚ್ಲೆ ಎಂಬ ಹಳ್ಳಿಯಲ್ಲಿ ಎಪ್ರಿಲ್ 16ರ ರಾತ್ರಿ ಒಂದು ಜನಜಂಗುಳಿ ಮೂವರನ್ನು ಹೊಡೆದು ಸಾಯಿಸಿರುವ ಘಟನೆಯನ್ನು ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಸತ್ತವರಲ್ಲಿ ಇಬ್ಬರು ಸಾಧುಗಳಾಗಿದ್ದು, ಅವರು ಮುಂಬಯಿಯಿಂದ ಸೂರತ್ ಗೆ ಕಾರಿನಲ್ಲಿ ಹೋಗುತ್ತಿದ್ದರು ಎಂದು ತಿಳಿದು ಬಂದಿದೆ.

ಇದಕ್ಕೆ ಬಿಜೆಪಿ–ಆರೆಸ್ಸೆಸ್ ಕೋಮು ಬಣ್ಣ ಹಚ್ಚಲು ಪ್ರಯತ್ನ ಮಾಡುತ್ತಿದ್ದು, ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಕ್ರೆ ಇದನ್ನು ಬಲವಾಗಿ ನಿರಾಕರಿಸಿದ್ದಾರೆ. ಅವರು ರಾಜ್ಯದ ಜನತೆಯನ್ನು ಉದ್ದೇಶಿಸಿ ಮಾಡಿರುವ ಭಾಷಣದಲ್ಲಿ ಇದು ದೇಶದ ಹಲವೆಡೆಗಳಲ್ಲಿ ಕಳೆದ ಆರು ವರ್ಷಗಳಲ್ಲಿ ನಡೆದಿರುವಂತಹ ಕೋಮುವಾದಿ ದೊಂಬಿ ಹತ್ಯೆಯಲ್ಲ, ಬದಲಿಗೆ ಒಂದು ತಪ್ಪು ಭಾವನೆಯಿಂದ ಆಗಿರುವಂತದ್ದು ಮತ್ತು ಇದರಲ್ಲಿ ಕೋಮುವಾದಿ ಅಂಶ ಏನೂ ಇಲ್ಲ, ಯಾರೂ ಇದಕ್ಕೆ ಕೊಮುವಾದಿ ಬಣ್ಣ ಹಚ್ಚಬಾರದು ಎಂದು ಹೇಳಿರುವುದನ್ನು ಸಿಪಿಐ(ಎಂ) ಸ್ವಾಗತಿಸಿದೆ. ನೂರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಹಾಗೂ ಇಬ್ಬರು ಪೋಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ; ಒಂದು ಗಂಭೀರ ವಿಚಾರಣೆಯನ್ನು ನಡೆಸಲಾಗುತ್ತದೆ ಮತ್ತು ತಪ್ಪಿತಸ್ಥರು ಎಂದು ಕಂಡುಬಂದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ ಎಂದೂ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಈ ವಿಚಾರಣೆಯಲ್ಲಿ, ಈ ಕಾರು ಮುಂಬೈಯಿಂದ ಸೂರತ್‌ಗೆ ಹೋಗಲು ಅಧಿಕೃತ ಪರವಾನಿಗೆ ಇತ್ತೇ, ಅವರು ಮುಂಬೈ–ಸೂರತ್ ಹೆದ್ದಾರಿಯಲ್ಲಿ ಹೋಗುವ ಬದಲು ನಡುರಾತ್ರಿಯಲ್ಲಿ ದೂರದ ನಿರ್ಜನ ಪ್ರದೇಶದಲ್ಲಿ ಸುತ್ತುಬಳಸಿ ಮಹಾರಾಷ್ಟ್ರ ಮತ್ತು ದಾದ್ರ–ನಗರ್ ಹವೇಲಿ ಕೇಂದ್ರಾಡಳಿತ ಪ್ರದೇಶದ ಗಡಿಭಾಗದಲ್ಲಿ ಪಯಣಿಸಲು ಬಿಟ್ಟದ್ದೇಕೆ ಎಂಬುದರ ತನಿಖೆಯನ್ನೂ ಮಾಡಬೇಕು ಎಂದು ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಆಗ್ರಹಿಸಿದೆ.

ಇದಕ್ಕೆ ಕೋಮು ಬಣ್ಣವನ್ನು ಹಚ್ಚಲು ಆರೆಸ್ಸೆಸ್–ಬಿಜೆಪಿ ಭಾರೀ ಪ್ರಯತ್ನ ನಡೆಸಿರುವುದನ್ನು ಸಿಪಿಐ(ಎಂ) ಖಂಡಿಸಿದೆ. ಈ ಪ್ರದೇಶದಲ್ಲಿರುವ ಬುಡಕಟ್ಟು ಸಮುದಾಯ ಇದುವರೆಗೆ ಕೋಮುವಾದಿ ವೈರತ್ವದ ಚರಿತ್ರೆಯನ್ನೇನೂ ಹೊಂದಿಲ್ಲ. ಇದು ಈ ಮಂದಿಗೂ ಗೊತ್ತು. ಆದರೂ ರಾಜ್ಯದ ಬಿಜೆಪಿಯೇತರ ಸರಕಾರಕ್ಕೆ ಮಸಿ ಬಳೆಯಲು ಇದನ್ನು ಬಳಸುವ ಪ್ರಯತ್ನ ನಡೆಸಿದ್ದಾರಷ್ಟೇ.

ಇಂತಹ ಪ್ರಯತ್ನ ನಡೆಯಲಿಕ್ಕಿಲ್ಲ ಎಂದು ಕಂಡು ಬಂದಾಗ ಈಗ ಸಿಪಿಐ(ಎಂ) ಮತ್ತು ಎನ್‌ಸಿಪಿ ಮುಂತಾದ ಪಕ್ಷಗಳ ಮೇಲೆ ಆಪಾದನೆಗಳನ್ನು ಆರಂಭಿಸಿವೆ.

ಆರೆಸ್ಸೆಸ್–ಬಿಜೆಪಿ ಮುಖಂಡರಾದ ಸಂಬಿತ್ ಪಾತ್ರ, ಸುನಿಲ್ ದೇವಧರ್ ಮುಂತಾದವರು ಫೇಸ್‌ಬುಕ್‌ನಲ್ಲಿ ಸಿಪಿಐ(ಎಂ) ಕುರಿತಂತೆ ಹಲವಾರು ಸುಳ್ಳುಗಳನ್ನು ಹರಡಿಸುತ್ತಿದ್ದಾರೆ. ಈ ಘಟನೆ ನಡೆದಿರುವ ದಹಾಣುವಿನಲ್ಲಿ ಸಿಪಿಐ(ಎಂ) ಬಲಿಷ್ಟ ನೆಲೆ ಹೊಂದಿದೆ, ಇತ್ತೀಚಿನ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಶಾಸಕರಾಗಿ ಆಯ್ಕೆಯಾಗಿದ್ದಾರೆ, ಆದ್ದರಿಂದ ಈ ಕೊಲೆಗಳ ಹಿಂದೆ ಸಿಪಿಐ(ಎಂ) ಕೈವಾಡ ಇದೆ ಎಂದು ಕತೆ ಕಟ್ಟುತ್ತಿದ್ದಾರೆ.

ಆದರೆ ವಾಸ್ತವ ಸಂಗತಿ ತದ್ವಿರುದ್ಧವಾಗಿದೆ. ಈ ಬಾರಿ ದಹಾಣು ಮೀಸಲು ಕ್ಷೇತ್ರದಲ್ಲಿ ಸಿಪಿಐ(ಎಂ)ನ ವಿನೋದ್ ನಿಖೊಲೆ ಹಿಂದಿನ ಬಿಜೆಪಿ ಶಾಸಕರನ್ನು ಸೋಲಿಸಿ ಶಾಸಕರಾಗಿ ಆಯ್ಕೆಯಾದರೂ, ಈ ಗಡಚಿಂಚ್ಲೆ ಹಳ್ಳಿ ಈಗಲೂ ಬಿಜೆಪಿಯ ಸರಪಂಚರನ್ನು ಹೊಂದಿದೆ. ಕಳೆದ 10 ವರ್ಷಗಳಿಂದ ಇಲ್ಲಿ ಬಿಜೆಪಿ ಗೆದ್ದುಕೊಂಡು ಬಂದಿದೆ. ಅಲ್ಲದೆ ಈ ಪ್ರಕರಣದಲ್ಲಿ ಬಂಧಿತರಾದವರಲ್ಲಿ ಬಹಳಷ್ಟು ಮಂದಿ ಬಿಜೆಪಿಯವರು ಎಂಬುದೂ ಗಮನಾರ್ಹ

ಬಿಜೆಪಿ–ಆರೆಸ್ಸೆಸ್ ಮುಖಂಡರ ವಿರುದ್ಧ ಮಾನನಷ್ಟ ಪ್ರಕ್ರಿಯೆ:

ರಾತ್ರಿ ವೇಳೆ ಮಕ್ಕಳನ್ನು ಅಪಹರಿಸುವವರು, ಅಂಗಾಂಗ ಕಸಿಗಾಗಿ ಜನಗಳನ್ನು ಸಾಯಿಸುವವರು ಅಡ್ಡಾಡುತ್ತಿದ್ದಾರೆ ಎಂಬ ಊಹಾಪೋಹಗಳು ಈ ಹಳ್ಳಿಯಲ್ಲಿ ಹರಡಿರುವುದರಿಂದಾಗಿ ಹಳ್ಳಿಗರು ಕಾವಲು ತಂಡಗಳನ್ನು ರಚಿಸಿಕೊಂಡಿದ್ದರು ಎಂದು ತಿಳಿದು ಬಂದಿದೆ. ಎಪ್ರಿಲ್ 16 ರ ರಾತ್ರಿ ಒಂದು ಕಾವಲುಕೋರ ಪಡೆ ಇಬ್ಬರು ಸಾಧುಗಳಿದ್ದ ಕಾರನ್ನು ತಡೆದ ನಂತರ ಈ ಘಟನೆ ನಡೆದಿದೆ.

ಈಗ ಎದ್ದಿರುವ ಪ್ರಶ್ನೆಗಳೆಂದರೆ ಈ ದೊಂಬಿ ಹತ್ಯೆಯ ರಿಂಗ್ ಲೀಡರುಗಳು ಯಾರು, ಇವರು ಯಾರ ಸಂಪರ್ಕದಲ್ಲಿರುವವರು, ಈ ಊಹಾಪೋಹಗಳನ್ನು, ಸುದ್ದಿಗಳನ್ನು ಹರಡಿರುವವರು ಯಾರು, ಎಂಬುದು. ಮಹಾರಾಷ್ಟ್ರ ಸರಕಾರ ತನಿಖೆಗೆ ಆದೇಶ ನೀಡಿರುವುದರಿಂದ ವಾಸ್ತವ ಸಂಗತಿ ಬಯಲಿಗೆ ಬರಬಹುದೆಂಬ ಭೀತಿಯಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಸಿಪಿಐ(ಎಂ) ನ ಹೆಸರು ಕೆಡಿಸುವ ಪ್ರಯತ್ನವನ್ನು ನಡೆಸಲಾಗುತ್ತಿದೆ ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ನರಸಯ್ಯ ಆದಂ ಹೇಳಿದ್ದಾರೆ. ಸಂಬಿತ್ ಪಾತ್ರ, ಸುನಿಲ್ ದೇವಧರ್ ಮುಂತಾದವರು ಯಾವುದೇ ಆಧಾರವಿಲ್ಲದೆ ಸಿಪಿಐ(ಎಂ)ನ್ನು ದೂಷಿಸುತ್ತಿದ್ದಾರೆ. 'ದೇವೇಂದ್ರ' ಎಂಬ ಫೇಸ್‌ಬುಕ್ ಪೇಜಿನ ಅಡ್ಮಿನ್ ಪ್ರಕಾಶ ಗಡೆ, ಈ ಪ್ರಕರಣದ ಆಪಾದಿತರೆಂದು ಕೆಲವು ಹೆಸರುಗಳನ್ನು ಹಾಕಿ ಇವರು ಸಿಪಿಐ(ಎಂ)ನವರು ಎಂದು ಬರೆದಿದ್ದಾರೆ.

ಆದ್ದರಿಂದ ಈ ಎಲ್ಲರ ವಿರುದ್ಧ ಮಾನನಷ್ಟದ ಕಾನೂನು ಪ್ರಕ್ರಿಯೆಯನ್ನು ಆರಂಭಿಸಲಾಗುತ್ತಿದೆ ಎಂದು ನರಸಯ್ಯಯ ಆದಂ ಹೇಳಿದ್ದಾರೆ.

ಇನ್ನೊಂದೆಡೆಯಲ್ಲಿ ಬಿಜೆಪಿ ಬೆಂಬಲಿಗರಾದ ಮೊಹಿತ್ ಭಾರತೀಯ, ಚಿತ್ರ ನಿರ್ದೇಶಕ ಅಶೋಕ್ ಪಂಡಿತ್, ಹಿಂದಿ ಚಾನೆಲ್ 'ಸುದರ್ಶನ ನ್ಯೂಸ್' ನ ಮುಖ್ಯ ಸಂಪಾದಕ ಸುರೇಶ್ ಚೌಹಂಕೆ, ದಿಲ್ಲಿ ಬಿಜೆಪಿ ಐಟಿ ಸೆಲ್‌ನ ರಿಚಾ ಪಾಂಡೆ ಮಿಶ್ರ ಮುಂತಾದವರು ಹಲ್ಲೆ ಮಾಡಿದವರಲ್ಲಿ ಒಬ್ಬಾತನ ಹೆಸರು ಶೋಐಬ್ ಎಂದು ಒಂದು ವೀಡಿಯೋದಲ್ಲಿ ಕೇಳಿಸುತ್ತಿದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿ ಹರಡಿಸಿದ್ದಾರೆ. ಆದರೆ ಇದು ಶುದ್ಧ ಸುಳ್ಳು ಎಂದು ಆಲ್ಟ್ ನ್ಯೂಸ್ ಹೇಳಿದೆ. ಅಲ್ಲಿ ಕೇಳ ಬರುತ್ತಿರುವುದು 'ಬಸ್ ಒಯೆ ಬಸ್' ಎಂಬುದು, ಮರಾಠಿಯಲ್ಲಿ ಇದರ ಅರ್ಥ 'ಸಾಕಯ್ಯಾ ಸಾಕು ಎಂದು.

ತಮಾಷೆಯೆಂದರೆ ಇನ್ನು ಕೆಲವರು 'ಹಿಂದೂ ಸಾಧುಗಳನ್ನು ಕ್ರೈಸ್ತ ಮಿಶನರಿ ಗೂಂಡಾಗಳು ಕೊಂದಿದ್ದಾರೆ' ಎಂದು ಸುದ್ದಿ ಹರಡಿಸುತ್ತಿದ್ದಾರೆ.

ಈ ಒಟ್ಟು ಪ್ರಕರಣವನ್ನು ಮತ್ತೊಮ್ಮೆ ಬಲವಾಗಿ ಖಂಡಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಒಂದು ಆಮೂಲಾಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಜತೆಗೇ, ಮುಖ್ಯಮಂತ್ರಿಗಳ ಮನವಿಯ ನಂತರವೂ ಕೋಮು ಬಣ್ಣ ಹಚ್ಚಿ ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತಿರುವವರ ವಿರುದ್ಧವೂ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

ಕೋವಿಡ್ 19...ಮುಂದೇನು ಮಾಡಬೇಕು?

ಪುಟ 13 ರಿಂದ

ಹೂಡಿಕೆಯಾದ ವಿದೇಶಿ ಬಂಡವಾಳದ ಹೊರ ಹರಿವಿನ ಮೇಲೆ ನಿಯಂತ್ರಣ ಹೇರಬೇಕಾಗುತ್ತದೆ. ಕಳೆದ ಒಂದು ತಿಂಗಳಿನಲ್ಲೇ ಈ ದೇಶಗಳ ಕರೆನ್ಸಿಗಳು 10% ನಿಂದ 20%ವರೆಗೆ, ಕೆಲವೆಡೆ 30%ವರೆಗೂ ಅಪಮೌಲ್ಯಗೊಂಡಿವೆ. ಈ ಪರಿಸ್ಥಿತಿಯಲ್ಲಿ, ವಿದೇಶಿ ಬಂಡವಾಳ ಹೊರ ಹರಿದಾಗ ನಮ್ಮ ಅರ್ಥವ್ಯವಸ್ಥೆಗೆ ರಕ್ತಸ್ರಾವವಾಗುತ್ತದೆ. ಅದನ್ನು ನಿಲ್ಲಿಸಲೇಬೇಕು. ಹಾಗಾಗಿ, ಬಂಡವಾಳವು ಮನ ಬಂದಂತೆ ಹರಿದಾಡದಂತೆ ಖಾತ್ರಿಪಡಿಸಿಕೊಳ್ಳಬೇಕು. ಆದ್ದರಿಂದ, ಎಲ್ಲ ಉದಯೋನ್ಮುಖ ದೇಶಗಳಿಗೂ ಸಾಧ್ಯವಾದಷ್ಟು ಬೇಗ ಒಂದು ಸಮನ್ವಯಕಾರಕ ರೀತಿಯಲ್ಲಿ ವಿದೇಶಿ ಬಂಡವಾಳದ ಹರಿದಾಟದ ಮೇಲೆ ನಿಯಂತ್ರಣ ಹೇರಲು ಅನುವಾಗುವಂತೆ ಹಣಕಾಸು ಬಂಡವಾಳವು ಸಮ್ಮತಿಸಬೇಕಾಗುತ್ತದೆ.

ಈ ಬಿಕ್ಕಟ್ಟಿನಿಂದ ಆಗಬಹುದಾದ ಒಂದು ಕೆಲಸವೆಂದರೆ, ಯೋಜನೆಯ ಮಹತ್ವ ಮತ್ತು ಅದರ ಪಾತ್ರವನ್ನು ಪುನರ್‌ಪರಿಶೀಲಿಸುವಂತೆ ಸರ್ಕಾರಗಳು ಒತ್ತಾಯಕ್ಕೆ ಒಳಪಡುತ್ತವೆ. ಏಕೆಂದರೆ, ಏಕ ಕಾಲದಲ್ಲಿ ಬೇಡಿಕೆ ಬಿಕ್ಕಟ್ಟು ಮತ್ತು ಸರಬರಾಜು ಬಿಟ್ಟು ಎರಡೂ ಒಟ್ಟಿಗೆ ಉಂಟಾಗಿವೆ. ಉತ್ಪಾದನೆ ನಿಂತಿರುವುದರಿಂದ ಸರಬರಾಜು ಕೊಂಡಿ ಮುರಿದು ಬಿದ್ದಿದೆ. ಈಗ, ಉತ್ಪಾದನೆ ಆರಂಭಿಸಿ, ಅಗತ್ಯ ವಸ್ತುಗಳನ್ನು ಜನರಿಗೆ ತಲುಪಿಸಬೇಕಾದರೆ, ಆ ಕೆಲಸವನ್ನು ಯೋಜನಾಬದ್ಧವಾಗಿ ನಿರ್ವಹಿಸಬೇಕಾಗುತ್ತದೆ. ಏಕೆಂದರೆ, ಆಹಾರ ಮತ್ತು ಔಷದಿಗಳಂತಹ ಅಗತ್ಯ ವಸ್ತಗಳ ಉತ್ಪಾನೆಯ ಸಂದರ್ಭದಲ್ಲಿಯೂ ಬಳಕೆಯಾದ ಸಾಮಗ್ರಿಗಳಿಗೂ (ಇನ್‌ಪುಟ್ಸ್) ಮತ್ತು ಅದರಿಂದ ಬಂದ ಉತ್ಪತ್ತಿಗೂ (ಔಟ್‌ಪುಟ್ಸ್)ಇರುವ ಅಂತರ್‌ಸಂಬಂಧವನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಯೋಜನೆ ಇಲ್ಲದೆ ಮತ್ತು ಹೊಂದಾಣಿಕೆ ಇಲ್ಲದೆ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲಾಗದು. ಮೂಲೆಗೆ ತಳ್ಳಿರುವ ಸಾಂಸ್ಥಿಕ ಯೋಜನಾ ವ್ಯವಸ್ಥೆಗೆ ಸರ್ಕಾರಗಳು ಈಗ ಕಾಯಕಲ್ಪ ನೀಡುವುದು ಅನಿವಾರ್ಯವಾಗುತ್ತದೆ.

ಈ ಬಿಕ್ಕಟ್ಟಿನಿಂದ ಆಗಬಹುದಾದ ಇನ್ನೊಂದು ಬಲು ದೊಡ್ಡ ಕೆಲಸವೆಂದರೆ, ಉತ್ಪಾದನೆಯ ಸ್ಥಳೀಕರಣ. ಏಕೆಂದರೆ, ಈ ಬಿಕ್ಕಟ್ಟು, ಜಾಗತೀಕರಣವು ಸೃಷ್ಟಿಸಿರುವ ಅಪಾಯಗಳನ್ನು ಬಿಚ್ಚಿ ತೋರಿಸುವುದರ ಜೊತೆಗೆ ಅದರ ಮೂರ್ಖತನವನ್ನೂ ಬಯಲು ಮಾಡಿದೆ. ಇಂಗ್ಲೆಂಡ್ ಪಕ್ಕದ ಉತ್ತರ ಸಮುದ್ರದಲ್ಲಿ ಹಿಡಿದ ಮೀನುಗಳನ್ನು ಆಗ್ನೇಯ ಏಷ್ಯಾದ ದೇಶಗಳಲ್ಲಿ ಸಂಸ್ಕರಿಸಿ ಅದನ್ನು ಪುನಃ ಯೂರೋಪಿನ ಬಳಕೆಗೆ ಕಳಿಸುವಂತಹ ಹುಚ್ಚಾಟದ ವ್ಯವಹಾರಗಳನ್ನು ನಿಲ್ಲಿಸಬೇಕಾಗುತ್ತದೆ. ಇದು ಮೀನುಗಾರಿಕೆಗೆ ಮಾತ್ರ ಅನ್ವಯವಾಗುವ ವಿಷಯವಲ್ಲ. ಅನೇಕಾನೇಕ ದಿನ ಬಳಕೆಯ ವಸ್ತುಗಳಿಗೂ ಅನ್ವಯಿಸುತ್ತದೆ. ಸ್ಥಳೀಯ ಉತ್ಪಾದನೆಗಳು ಸ್ಥಳೀಯವಾಗಿ ಬಳಕೆಯಾದಾಗ ಅಭಿವೃದ್ಧಿ ಸು–ಸ್ಥಿರವಾಗುತ್ತದೆ. ಹಾಗಾಗಿ, ಇಂತಹ ಸ್ಥಳೀಯ ಪ್ರಕ್ರಿಯೆಗಳಿಗೆ ಒತ್ತು ಕೊಡಬೇಕಾಗುತ್ತದೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಖಾಸಗೀಕರಣವು ಒಂದು ಪ್ರಮಾದ ಎಂಬುದನ್ನು ಹೇಳಿದ್ದೇನೆ. ಆರೋಗ್ಯ ವ್ಯವಸ್ಥೆಯ ಬಗ್ಗೆ ಸಂವಾದಗಳು ಸಂಪೂರ್ಣವಾಗಿ ಮರೆಯಾಗಿವೆ. ಆರೋಗ್ಯದ ಮೇಲೆ ಸರ್ಕಾರ ಮಾಡುವ ಖರ್ಚುಗಳು ಬಹಳ ದೊಡ್ಡ ಪ್ರಮಾಣದಲ್ಲಿ ಇರಬೇಕಾಗುತ್ತದೆ. ಜನರ ಆರೋಗ್ಯ ರಕ್ಷಣೆಗಾಗಿ ದುಡಿಯುತ್ತಿರುವ ಎಲ್ಲರಿಗೂ ರಕ್ಷಣೆ ಒದಗಿಸಬೇಕು, ಅವರ ಘನತೆಯನ್ನು ಎತ್ತಿ ಹಿಡಿಯಬೇಕು ಮತ್ತು ತಕ್ಕ ಗೌರವವನ್ನು ಅವರಿಗೆ ತೋರಿಸಬೇಕು.

ಇವೆಲ್ಲವೂ ನಮ್ಮ ಅಜೆಂಡಾದ ನೀತಿಯಾಗಬೇಕು. ಇವು ಹೆಬ್ಬಯಕೆಯಾಗಿ ತೋರಬಹುದು. ಆದರೆ, ಅವೇನೂ ಅಪಹಾಸ್ಯಕರವಾಗಿ ತೋರುವುದಿಲ್ಲ. ಜನರು ಎಲ್ಲ ವಿದ್ಯಮಾನಗಳನ್ನೂ ಗಮನಿಸುತ್ತಿದ್ದಾರೆ ಮತ್ತು ಅವುಗಳಿಂದ ಪಾಠಗಳನ್ನೂ ಕಲಿಯುತ್ತಿದ್ದಾರೆ. ಪ್ರಪಂಚ ಬದಲಾಗುತ್ತಿದೆ. ಈ ಬಿಕ್ಕಟ್ಟನ್ನು ಕೊನೆಗಾಣಿಸಿದ ನಂತರ ನಾವು ನೋಡುವ ಪ್ರಪಂಚ ಬೇರೆಯದ್ದೇ ಆಗಿರುತ್ತದೆ. ಆದರೆ, ಮೊದಲಿಗೆ ಈ ಬಿಕ್ಕಟ್ಟಿಗೆ ಕಾರಣಕರ್ತರಾದ ಶಕ್ತಿಗಳು ಅಧಿಕಾರದಲ್ಲಿ ಮುಂದುವರೆಯದಂತೆ ಖಾತ್ರಿಪಡಿಸಿಕೊಳ್ಳುವುದೇ ನಮ್ಮ ಆದ್ಯ ಕರ್ತವ್ಯವಾಗುತ್ತದೆ.

ಕಮ್ಯುನಿಸ್ಟರು ಮತ್ತು ರಾಷ್ಟ್ರೀಯತೆಯ ಪ್ರಶ್ನೆ


ಪುಟ 11 ರಿಂದ

1945ರ ಕೊನೆಯಲ್ಲಿ ನಡೆದ ಎರಡು ಘಟನೆಗಳು ಯುದ್ಧಾನಂತರದ ಸಾಮ್ರಾಜ್ಯಶಾಹಿ–ವಿರೋಧಿ ಬಿರುಗಾಳಿ ಎಬ್ಬಿಸುವಲ್ಲಿ ಗಮನಾರ್ಹ ಪಾತ್ರ ವಹಿಸಿದವು: ಐ.ಎನ್.ಎ.(ಇಂಡಿಯನ್ ನ್ಯಾಷನಲ್ ಆರ್ಮಿ–ಆಝಾದ್ ಹಿಂದ್ ಸೇನೆ) ವಿಚಾರಣೆ ಮತ್ತು ಇಂಡೋನೇಶ್ಯಾ, ಇಂಡೋ–ಚೈನಾ ಮತ್ತು ಇತರೆ ದಕ್ಷಿಣ ಹಾಗೂ ಆಗ್ನೇಯ ಏಶ್ಯಾ ದೇಶಗಳಿಗೆ ಭಾರತೀಯ ಯೋಧರನ್ನು ಕಳಿಸಲು ಸರ್ಕಾರ ಮಾಡಿದ ತೀರ್ಮಾನ. ಈ ಕ್ರಮಗಳ ವಿರುದ್ಧ ಭಾರಿ ಮತಪ್ರದರ್ಶನಗಳನ್ನು ಸಂಘಟಿಸುವಲ್ಲಿ ಕಮ್ಯುನಿಸ್ಟರು, ಸೋಶಿಯಲಿಸ್ಟರು ಮತ್ತು ಕಾಂಗ್ರೆಸ್ ಹಾಗೂ ಲೀಗಿನ ಕಾರ್ಯಕರ್ತರು ಸಕ್ರಿಯ ಪಾತ್ರ ವಹಿಸಿದರು. ಐ.ಎನ್.ಎ ಮುಖಂಡರನ್ನು ಬಿಡುಗಡೆ ಮಾಡಲು ಒತ್ತಾಯಿಸಿ ಸಾಮ್ರಾಜ್ಯಶಾಹಿ–ವಿರೋಧಿ ಮತಪ್ರದರ್ಶನಗಳನ್ನು ಕೂಡ ಕಲ್ಕತ್ತಾ, ಬೊಂಬಾಯಿ, ಮಥುರಾ, ದಹಲಿ, ಮೀರತ್ ಮತ್ತು ಪೆಶಾವರ್ ಮುಂತಾದ ಸ್ಥಳಗಳಲ್ಲಿ ನಡೆಸಲಾಯಿತು. ದಾಳಿ ದಬ್ಬಾಳಿಕೆಗಳನ್ನು ಎದುರಿಸುತ್ತಲೇ ಜನರು ತಂಡೋಪತಂಡವಾಗಿ ಮುನ್ನುಗ್ಗಿದರು. ಈ ಪ್ರತಿಭಟನಾ ಕಾರ್ಯಕ್ರಮಗಳು ಕಲ್ಕತ್ತಾದಲ್ಲಿ ತೀವ್ರ ಸ್ವರೂಪ ಪಡೆದವು; ಅಲ್ಲಿ ಕಾರ್ಮಿಕರು ಹಲವಾರು ದಿನಗಳ ಕಾಲ ಮುಷ್ಕರ ನಡೆಸಿದ್ದರಿಂದ ವಿದ್ಯುತ್ ಕಾರ್ಯಾಗಾರ, ಸಾರಿಗೆ, ನೀರು ಪೂರೈಕೆ ಮುಂತಾದವು ಸ್ತಬ್ಧವಾದವು. ಕಲ್ಕತ್ತಾದ ದಕ್ಷಿಣ ಭಾಗದಲ್ಲಿ ಜನರು ರಸ್ತೆಗಳಲ್ಲಿ ತಡೆಬೇಲಿ ಹಾಕಿದರು ಮತ್ತು ಮಿಲಿಟರಿ ವಾಹನಗಳಿಗೆ ಬೆಂಕಿ ಹಚ್ಚಿದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಬಂಗಾಳದ ಗೌರ್ನರ್ ಮಿಲಿಟರಿಯನ್ನು ಕರೆಸಬೇಕಾಯಿತು.

ಈ ಹಿನ್ನೆಲೆಯಲ್ಲಿ, ಪಕ್ಷವು ಮೊಟ್ಟ ಮೊದಲ ಬಾರಿಗೆ ತನ್ನ ಕಾರ್ಯಕ್ರಮ ಮತ್ತು ಬೇಡಿಕೆಗಳ ಮೇಲೆ ದೊಡ್ಡ ಮಟ್ಟದಲ್ಲಿ ಚುನಾವಣೆಗಳಲ್ಲಿ ಭಾಗವಹಿಸಿತು. ಆದರೆ, ಚುನಾವಣಾ ಕಣದಲ್ಲಿ ಕಾಂಗ್ರೆಸ್ ಮತ್ತು ಲೀಗ್ ಮುಖ್ಯ ಶಕ್ತಿಗಳಾಗಿದ್ದವು. ಕಾಂಗ್ರೆಸ್ ಮತ್ತು ಲೀಗಿನ ಸ್ಪರ್ಧೆಯ ನಡುವೆ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮಗಳು ಮತ್ತು ಘೋಷಣೆಗಳು ದೇಶಾದ್ಯಂತ ಮಾನ್ಯತೆ ಪಡೆಯಲಾಗಲಿಲ್ಲ. ಈ ಪರಿಣಾಮವಾಗಿ, ಜನಪ್ರಿಯ ಹೋರಾಟಗಳನ್ನು ನಡೆಸುವಲ್ಲಿ ಕಮ್ಯುನಿಸ್ಟ್ ಪಕ್ಷವು ತನ್ನ ಕ್ರಿಯಾಶೀಲ ಪಾತ್ರವನ್ನು ಮುಂದುವರಿಸುತ್ತಿದ್ದಾಗಲೂ, ಸಂವಿಧಾನ ರಚನೆಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿ ಪಾತ್ರ ವಹಿಸುವ ಶಕ್ತಿಯಾಗಿ ಹೊರಹೊಮ್ಮುವ ಹಂತ ತಲುಪಲಿಲ್ಲ.

ಗಮನಾರ್ಹ ಒಪೆಕ್+ ಒಪ್ಪಂದ ಮತ್ತು ಪಿ–5 ಶೃಂಗಸಭೆ

ಕಳೆದ ವಾರ ಮೂರು ಪರಸ್ಪರ ಸಂಬಂಧಿತ ಪ್ರಮುಖ ಬೆಳವಣಿಗೆಗಳು ಆದವು. ವೆಸ್ಟ್ ಟೆಕ್ಸಾಸ್ ಇಂಟರ್ಮೀಡಿಯೆಟ್ ನ ಮೇ ತಿಂಗಳ ವಾಯಿದಾ (ಫ್ಯೂಚರ್) ಬೆಲೆಯು ಅದರ ಚರಿತ್ರೆಯಲ್ಲೇ ಮೊದಲ ಬಾರಿಗೆ ಮೈನಸ್ (ಋಣಾತ್ಮಕ) 40 ಡಾಲರಿಗೆ ಇಳಿಯಿತು. ಎಪ್ರಿಲ್ 12 ರಂದು ಸೌದಿ ಅರೇಬಿಯಾ ಮತ್ತು ರಷ್ಯಾ ನೇತೃತ್ವದಲ್ಲಿ ಒಪೆಕ್+ ಗುಂಪು ಸಭೆ ಸೇರಿ, ತೈಲ ಉತ್ಪಾದನೆಯನ್ನು ದಿನಕ್ಕೆ ಒಟ್ಟು 97 ಲಕ್ಷ ಬ್ಯಾರೆಲ್ ನ'ಷ್ಟು ಕಡಿತಗೊಳಿಸಲು ಒಪ್ಪಂದವನ್ನು ಅಂತಿಮಗೊಳಿಸಿತು. ರಶ್ಯನ್ ಅಧ್ಯಕ್ಷ ಪುತಿನ್ ಸೆಪ್ಟೆಂಬರ್ ನಲ್ಲಿ ಕೋವಿಡ್–19ರ ಪರಿಣಾಮಗಳನ್ನು ಒಳಗೊಂಡಂತೆ ಜಾಗತಿಕವಾಗಿ ಎದುರಾಗಿರುವ ಬೃಹತ್ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಚರ್ಚಿಸಲು, ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಐದು ಶಾಶ್ವತ ಸದಸ್ಯ (ಪರ್ಮನೆಂಟ್ 5 ಅಥವಾ ಪಿ–5) ರಾಷ್ಟ್ರಗಳ ಶೃಂಗಸಭೆಯನ್ನು ಕರೆಯಲು ಪ್ರಸ್ತಾವಿಸಿದರು. ಇದು ಕೊವಿದ್–19 ಮಹಾಮಾರಿಯ ನಂತರದ ಕಾಲಘಟ್ಟದಲ್ಲಿ ವಿಶ್ವ ರಾಜಕಾರಣದಲ್ಲಿ ಬಹು ದೊಡ್ಡ ಬದಲಾವಣೆಯಾಗಲಿದೆ ಎಂಬ ಸೂಚನೆಯನ್ನು ನೀಡುತ್ತದೆ. ಕೊರೊನೋತ್ತರ ಜಾಗತಿಕ ಆರ್ಥಿಕ/ರಾಜಕಾರಣ, ಜಾಗತಿಕ ಕೊರೊನಾ ಮಹಾಮಾರಿ ಮತ್ತು ಜಾಗತಿಕ ತೈಲ ಬಿಕ್ಕಟ್ಟುಗಳು ಹೇಗೆ ಪರಸ್ಪರ ಹೆಣೆದುಕೊಂಡಿವೆ ಎಂದು ತೋರಿಸುತ್ತದೆ. ಜಾಗತಿಕ ತೈಲ ಉದ್ಯಮದಲ್ಲಿ ಹೊಸ ಸಹಕಾರಿ ಯುಗ ಆರಂಭವಾಗಹುದು ಎಂಬ ಸೂಚನೆಯನ್ನೂ ನೀಡುತ್ತವೆ.



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಏಪ್ರಿಲ್ 20 ರಂದು ತೈಲ ಬೆಲೆಯ ಚರಿತ್ರೆಯಲ್ಲೇ ಮೊದಲ ಬಾರಿಗೆ ಒಂದು ಅಸಾಧಾರಣ ಬೆಳವಣಿಗೆ ಆಯಿತು. ಯು.ಎಸ್ ತೈಲ ಬೆಲೆಗಳ ಮಾನಕ, ವೆಸ್ಟ್ ಟೆಕ್ಸಾಸ್ ಇಂಟರ್ಮೀಡಿಯೆಟ್ ನ ಮೇ ತಿಂಗಳ ವಾಯಿದಾ (ಫ್ಯೂಚರ್) ಬೆಲೆಯು ಕುಸಿಯುತ್ತಾ ಮೈನಸ್ (ಋಣಾತ್ಮಕ) 40 ಡಾಲರಿಗೆ ಇಳಿಯಿತು. ಈ ವಾಯಿದಾ (ಫ್ಯೂಚರ್) ಬೆಲೆಗೆ ಅರ್ಥವಿದೆಯೇ? ಇದ್ದರೆ ಏನರ್ಥ? ಹಲವು ತೈಲ ತಜ್ಞರು ಇದು ಬರಿಯ ಜೂಜಾಟ ನಿಜಜೀವನದ ತೈಲ ಬೆಲೆಗೂ ಇದಕ್ಕೂ ಏನೂ ಸಂಬಂಧವಿಲ್ಲ ಎನ್ನುತ್ತಾರೆ. ವಾಯಿದಾ (ಫ್ಯೂಚರ್) ಬೆಲೆಯನ್ನು ಅನುಸರಿಸಿ ವ್ಯವಹಾರ ನಡೆಸುವವರ ಮಟ್ಟಿಗೆ ಇದರರ್ಥ, ಮೇ ತಿಂಗಳಲ್ಲಿ ತೈಲ ಮಾರಾಟಗಾರ ಕಂಪನಿಗಳು ತೈಲದ ಖರೀದಿದಾರಿಗೆ ಪ್ರತಿ ಬ್ಯಾರಲ್ಲಿಗೆ 40 ಡಾಲರು ಕೊಡಬೇಕಾಗುತ್ತದೆ. ಅಂದರೆ ಮೇ ತಿಂಗಳಲ್ಲಿ ಖರೀದಿದಾರರನ್ನು ಪಡೆಯುವುದೇ ಕಷ್ಟವಾಗುತ್ತದೆ ಅಂತ. ಇದರ ಜತೆಗೆ ಈ ವಾರದ ಮಾರುಕಟ್ಟೆ ಬೆಲೆ ಸಹ ಇನ್ನೂ ಬ್ಯಾರೆಲಿಗೆ 20 ಡಾಲರ್ ಸುತ್ತಮುತ್ತ ಗಿರಕಿ ಹೊಡೆಯುತ್ತಿತ್ತು.


ಏಕೆ ಇಂತಹ ಪರಿಸ್ಥಿತಿ ಸಂಭವಿಸಿದೆ? ಎಂಬದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಒಂದು ಕಡೆ, ಕೋವಿಡ್–19 ಮಹಾಮಾರಿಯ ಆರ್ಥಿಕ ಪರಿಣಾಮಗಳು ತೈಲ ಬೇಡಿಕೆಯನ್ನು ಕಡಿತಗೊಳಿಸಿದೆ. ಮತ್ತೊಂದು ಕಡೆ, ಇದೇ ಸಂದರ್ಭದಲ್ಲಿ, ತೈಲ ಬಾವಿಗಳನ್ನು ಹೊಂದಿರುವ ರಾಷ್ಟಗಳು ನಿರೀಕ್ಷೆಗಿಂತ ಹೆಚ್ಚು ತೈಲವನ್ನು ಉತ್ಪಾದಿಸುತ್ತಿವೆ. ಈ ಸಂದರ್ಭದಲ್ಲಿ ಹೆಚ್ಚುವರಿ ತೈಲವು ಶೇಖರಣಾ ಟ್ಯಾಂಕ್ ಗಳು ತುಂಬಿ ತುಳುಕುತ್ತಿವೆ. ಅಂದರೆ ಪೂರೈಕೆಯ ಹೆಚ್ಚಳ ಮತ್ತು ಬೇಡಿಕೆಯ ಕುಸಿತದಿಂದಾಗಿ, ಮಾರುಕಟ್ಟೆಯಲ್ಲಿ ತೈಲದ ಪ್ರವಾಹ ಉಕ್ಕಿ ಹರಿಯುತ್ತಿದೆ. ಇದು ಅಪಾರ ಬೆಲೆ ಕುಸಿತಕ್ಕೆ ಕಾರಣವಾಗಿದೆ.

ಯುಎಸ್ ನ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಇತ್ತೀಚಿನ ದಿನಗಳಲ್ಲಿ ತೈಲ ಉತ್ಪಾದನಾ ಮಾರುಕಟ್ಟೆ ಕುರಿತಂತೆ, ರಷ್ಯಾ, ಸೌದಿ ಅರೇಬಿಯಾ ಮತ್ತು ಮೆಕ್ಸಿಕೊ ಮುಖ್ಯಸ್ಥ ರೊಂದಿಗೆ ನೇರ ಮಾತುಕತೆ ನಡೆಸಿದ್ದಾರೆ. ಈ ನಿಟ್ಟಿನಲ್ಲಿ ತೈಲಉತ್ಪಾದನೆ ಯಥೇಚ್ಛವಾಗಿ ಉತ್ಪಾದನೆಯಾಗಿ ಮಾರುಕಟ್ಟೆ ಪ್ರವೇಶಿಸಿ, ತೈಲ ಬೆಲೆ ವಿಪರೀತ ಕುಸಿದಿರುವುರುವುದು ಒಂದು ಕಡೆಯಾದರೆ, ಕೋವಿಡ್–19 ಸಾಂಕ್ರಾಮಿಕ ದಿಂದ ಉಂಟಾಗಿರುವ ಬೇಡಿಕೆಯಲ್ಲಿನ ಕುಸಿತ ಮತ್ತೊಂದೆಡೆ. ಇದರಿಂದ ವಿಶ್ವದ ಅತಿ ದೊಡ್ಡ ಶೇಲ್ ತೈಲ ಉತ್ಪಾದಕರಾದ ಯುಎಸ್ ಮಾರುಕಟ್ಟೆ ನಾಶ ಹೊಂದುವ ಆತಂಕ ಅಮೆರಿಕಾಕ್ಕೆ ಶುರುವಾಗಿದೆ.

ಒಪೆಕ್+ ಒಪ್ಪಂದ

ಈ ಸಮಯವನ್ನೇ ಸೂಕ್ತವಾಗಿ ಬಳಸಿಕೊಂಡು ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಂಡು, ಮಾರುಕಟ್ಟೆಯ ಹೆಚ್ಚಿನ ಪಾಲುದಾರರಾಗಲು, ಸೌದಿ ಅರೇಬಿಯಾ, ರಷ್ಯಾ ಮತ್ತು ಮೆಕ್ಸಿಕೊ ರಾಷ್ಟಗಳು ಹೊಸ ಸೂತ್ರ ಹೆಣೆದಿರುವುದು ಯುಎಸ್ ಅಧ್ಯಕ್ಷ ಟ್ರಂಪ್ ಮತ್ತು ಇಂಧನ ಇಲಾಖೆಗೆ ಶುರುವಾಗಿದೆ ಎದೆ ಡವ ಡವ. ಏಕೆಂದರೆ, ಇದು ಯು.ಎಸ್ ನ ಆರ್ಥಿಕತೆಯ ಮೇಲೆ ಘೋರ ಪರಿಣಾಮವನ್ನು ಉಂಟುಮಾಡುತ್ತದೆ. ಹೀಗಾಗಿಯೇ, ಈ ಮೂರು ದೇಶಗಳ ಮುಖ್ಯಸ್ಥರೊಂದಿಗೆ ಅನಿವಾರ್ಯವಾಗಿ ಸ್ವತಃ ಟ್ರಂಪ್ ನೇರ ಮಾತುಕತೆ ನಡೆಸಿದ್ದಾರೆ.

ಈ ಹಿನ್ನೆಲೆಯಲ್ಲಿಯೇ, ಎಪ್ರಿಲ್ 12 ರಂದು ಸೌದಿ ಅರೇಬಿಯಾ ಮತ್ತು ರಷ್ಯಾ ನೇತೃತ್ವದಲ್ಲಿ ತೈಲ ರಫ್ತು ಮಾಡುವ ದೇಶಗಳ ಕೂಟ (ಒಪೆಕ್)+ ಗುಂಪು ಸಭೆ ಸೇರಿ ಒಂದು ಅಂತಿಮ ನಿರ್ಧಾರ ಕೈಗೊಂಡಿದ್ದಾರೆ. ಅದೇನೆಂದರೆ, ವಿಶ್ವ ಮಾರುಕಟ್ಟೆಯಲ್ಲಿನ ತೈಲ ಪೂರೈಕೆ ಮತ್ತು ಬೇಡಿಕೆಯನ್ನು ಸಮತೋಲಗೊಳಿಸಲು ಹಾಗೆಯೇ, ಬೆಲೆಗಳು ಏರಿಕೆಯಾಗಲು ತೈಲ ಉತ್ಪಾದನೆಯನ್ನು ದಿನಕ್ಕೆ ಒಟ್ಟು 97ಲಕ್ಷ ಬ್ಯಾರೆಲ್ ನಷ್ಟು ಕಡಿತಗೊಳಿಸಲು ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ. ಇಲ್ಲಿ ವಿಶ್ವದ ಅತಿ ದೊಡ್ಡ ಶೇಲ್ ತೈಲ ಉತ್ಪಾದಕ ಯು.ಎಸ್ ತನ್ನ ಉತ್ಪಾದನೆಯಲ್ಲಿನಿರ್ದಿಷ್ಟ ಕಡಿತದ ಬಗ್ಗೆ ಪ್ರಸ್ತಾಪಿಸದಿದ್ದರೂ, ತೈಲ ಮಾರುಕಟ್ಟೆ ಶಕ್ತಿಗಳು ಯು.ಎಸ್ ನ ತೈಲ ಉತ್ಪಾದನೆ ಕುಸಿತವನ್ನು ತರುತ್ತವೆ ಎಂದಿದೆ. ಅಂದರೆ ಈಗಾಗಲೇ ತೈಲದ ಬೆಲೆ ಕುಸಿದದ್ದರಿಂದ ಬ್ಯಾರೆಲಿಗೆ 20 ಡಾಲರು ಬೆಲೆ ಮುಂದುವರೆದರೆ 500 ತೈಲ ಉತ್ಪಾದನೆಯ ವಿವಿಧ ಕ್ಷೇತ್ರದಲ್ಲಿ ತೊಡಗಿರುವ ಕಂಪನಿಗಳು, 2020ರಲ್ಲಿ 70 ಮತ್ತು 2021ರಲ್ಲಿ 177 ಶತಕೋಟಿ ಡಾಲರುಗಳಷ್ಟು ಸಾಲ ಕೊಡಲಾಗದೆ ತೈಲ ಕಂಪನಿಗಳು ದಿವಾಳಿಯಾಗುತ್ತವೆ ಎನ್ನಲಾಗಿದೆ.



ಯು.ಎಸ್ ಕಾರ್ಪೊರೇಟ್ ನಿರ್ಧಾರಗಳ ಆಧಾರದ ಮೇಲೆ ಸರಕಾರ ಕೈಗೊಳ್ಳುವ ಕ್ರಮಗಳಿಂದ ಉತ್ಪಾದನಾ ಕಡಿತ ಉಂಟಾಗಬಹುದು.ಕಂಪನಿಗಳು ಉತ್ಪಾದನೆಯನ್ನು ಸ್ಥಗಿತಗೊಳಿಸಬಹುದು ಅಥವಾ ದಿವಾಳಿಯಾಗಬಹುದು. ಒಂದು ಅಂದಾಜಿನ ಪ್ರಕಾರ, ಯು.ಎಸ್ ಉತ್ಪಾದನೆಯು ವರ್ಷಾಂತ್ಯಕ್ಕೆ ದಿನಕ್ಕೆ 20 ಲಕ್ಷ ಬ್ಯಾರೆಲ್ ಗಳಷ್ಟು ಕುಸಿಯುವ ನಿರೀಕ್ಷೆಯಿದೆ ಬಹುಶಃ ಇದಕ್ಕಿಂತ ಹೆಚ್ಚಾಗಲೂಬಹುದು. ಉದ್ಯಮದ ಅಂಕಿ ಅಂಶಗಳ ಪ್ರಕಾರ, ಈಗಾಗಲೇ 2019 ರಲ್ಲಿ 30 ಲಕ್ಷ ಬಿಪಿಡಿ (ಬ್ಯಾರೆಲ್ ಪರ್ ಡೇ) ಇದ್ದ ಯು.ಎಸ್ ನ ಶೇಲ್ ತೈಲ ರಫ್ತು, ಮುಂಬರುವ ತಿಂಗಳುಗಳಲ್ಲಿ ಬಹುತೇಕ ಶ್ಯೂನಕ್ಕೆ ಕುಗ್ಗುವಂತೆ ಕಾಣುತ್ತಿದೆ. ಯಥೇಚ್ಛವಾಗಿ ಸೌದಿ ಅರೇಬಿಯಾ ಮತ್ತು ರಷ್ಯಾ ತಮ್ಮ ಉತ್ಪಾದನೆಯನ್ನು ಮಾರುಕಟ್ಟೆಗೆ ಪೂರೈಸಲು ಶುರು ಮಾಡಿದ್ದು ತೈಲ ಬೆಲೆ ಕುಸಿತಕ್ಕೆ ಕಾರಣವಾಯಿತು. ಬೆಲೆ ಕುಸಿತದಿಂದಾಗಿ ಹೆಚ್ಚಿನ ಉತ್ಪಾದನಾ ಖರ್ಚಿನ ಶೇಲ್ ತೈಲ ಮಾರಾಟ ಕಷ್ಟವಾಗಿ ಕಡಿಮೆಯಾಗುತ್ತಿದೆ. ಇದೀಗ ಕೋರೊನಾ ಮಹಾಮಾರಿಯ ಪರಿಣಾಮವಾಗಿ ಒಟ್ಟು ಬೇಡಿಕೆ ಇಳಿಮುಖವಾಗಿದೆ. ಇದು ಮತ್ತಷ್ಟು ಕುಸಿತಕ್ಕೆ ಕಾರಣವಾಗಿ, ಯುಎಸ್ ನ ಶೇಲ್ ತೈಲ ಉತ್ಪಾದನೆ ನೆಲಕಚ್ಚುವುದು ಖಚಿತವಾಗಿದೆ.

ಇದು ಸೌದಿ ಅರೇಬಿಯಾದ ಘೋಷಿತ ಅವಳಿ ಉದ್ದೇಶಗಳನ್ನು ಪೂರೈಸುತ್ತದೆ. ಒಂದು, ಅದರ ಮಾರುಕಟ್ಟೆಯ ಪಾಲಿನ ರಕ್ಷಣೆ ಮತ್ತು ಯುಎಸ್ ನ ಶೇಲ್ ತೈಲ ಉತ್ಪಾದನೆಯ ನಾಶ. ಈ ಒಪ್ಪಂದದಿಂದಾಗಿ ಸೌದಿ ಅರೇಬಿಯಾದ ಮೂಲ ಉದ್ದೇಶಿತ ಪರ್ಯಾಯ ಕ್ರಮದ ಅಗತ್ಯ ಬೀಳಲಿಕ್ಕಿಲ್ಲ. ಹೆಚ್ಚೆಚ್ಚು ತೈಲವನ್ನು ಉತ್ಪಾದಿಸುವ ಮತ್ತು ಬ್ಯಾರೆಲ್ ಒಂದಕ್ಕೆ 20 ಡಾಲರ್ ಬೆಲೆಯ ಮಟ್ಟ ಕಾಯ್ದುಕೊಳ್ಳುವಮೂಲಕ, ಅಗಾಧ ವೆಚ್ಚದಲ್ಲಿ ಮಾರುಕಟ್ಟೆಯನ್ನು ಮರಳಿ ಪಡೆಯುವುದು ಅದಕ್ಕಿದ್ದ ಪರ್ಯಾಯವಾಗಿತ್ತು.

ಈ ಹಿನ್ನೆಲೆಯಲ್ಲಿ, ಬೆಲೆಗಳ ಸಮತೋಲನ ಕಾಪಾಡಲು, ತೈಲ ಮಾರುಕಟ್ಟಯನ್ನು ಉಳಿಸಲು, ಒಪೆಕ್+ ಗುಂಪು ರಷ್ಯಾ ಮತ್ತು ಸೌದಿ ನೇತೃದಲ್ಲಿ ಸಭೆ ನಡಸಿ, ಅಂತಿಮವಾಗಿ ನಿರ್ದಾರಕ್ಕೆ ಬಂದಿದೆ.

ಒಪೆಕ್+ ಗುಂಪಿನೊಂದಿಗಿನ ಪ್ರಮುಖ ತೈಲ ಒಪ್ಪಂದವು ಯು.ಎಸ್ ನಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಉಳಿಸುತ್ತದೆ. ರಷ್ಯಾದ ಅಧ್ಯಕ್ಷ ಪುತಿನ್ ಮತ್ತು ಸೌದಿ ಅರೇಬಿಯಾ ದ ರಾಜಕುಮಾರ ಮಹಮ್ಮದ್ ಬಿನ್ ಸಲ್ಮಾನ್ (ಎಮ್.ಬಿ.ಎಸ್) ಗೆ ನಾನು ಧನ್ಯವಾದ ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ " ಎಂದು ಟ್ರಂಪ್ ಟ್ವೀಟ್ ಮಾಡಿದ್ದಾರೆ.

ಒಪೆಕ್+ ಒಪ್ಪಂದ ಮತ್ತು ಪಿ–5 ಶೃಂಗಸಭೆ

ಈ ಪ್ರಮುಖ ಒಪೆಕ್+ ಒಪ್ಪಂದವು ಟ್ರಂಪ್ ಮತ್ತು ಪುಟಿನ್ ನಡುವಿನ ಹಲವು ಮಾತುಕತೆಗಳ ಫಲ ಎನ್ನಲಾಗಿದೆ. ಈ ವಿಚಾರದಲ್ಲಿ ಸೌದಿ ಅರೇಬಿಯಾವು ಹೊರಗುಳಿಯುವುದು ಸೂಕ್ತವೆಂದು ಅರ್ಥಮಾಡಿಕೊಂಡಿದೆ. ಯು.ಎಸ್ ನಲ್ಲಿ ಉದ್ಯೋಗಗಳನ್ನು ಕಾಪಾಡಿಕೊಳ್ಳಲು ಟ್ರಂಪ್ ಶೇಲ್ ತೈಲ ಉದ್ಯಮಗಳನ್ನು ರಕ್ಷಿಸಲೇಬೇಕು. ಇದು ರಾಜಕೀಯವಾಗಿ ಎಷ್ಟು ಮುಖ್ಯವೆಂದು ಪುತಿನ್ ನಿಖರವಾಗಿ ಅರ್ಥೈಸಿಕೊಂಡಿದ್ದಾರೆ. ಈ ಉದ್ಯಮವು ಒಂದು ಕೋಟಿ ಅಮೆರಿಕನ್ನರನ್ನು ನೇಮಿಸಿಕೊಂಡಿದೆ. ಇದರ ಉತ್ಪಾದನೆಯು ಜಿಡಿಪಿಯ ಶೇ.7 ರಷ್ಟಿದೆ ಎಂಬುದು ಪುಟಿನ್ ಗೆ ತಿಳಿದಿದೆ.

ರಷ್ಯಾದ ಆರ್ಥಿಕತೆಗೆ ಶತಕೋಟಿ ಡಾಲರ್ ಆದಾಯದ ನಷ್ಟ ತಂದ ಇಂತಹ ಯೋಜಿತ ಶೈಲಿಯ ತೈಲ ಬೆಲೆ ಕುಸಿತದ ಪ್ರಚೋದನಕಾರಿ ಆಟವನ್ನು ಪುಟಿನ್ ಏಕೆ ಆಡಿದರು, ಎಂಬ ಅನುಮಾನ ಅನೇಕ ರಾಜಕೀಯ ವಲಯದಲ್ಲಿ ಎದ್ದಿದೆ. ಅಮೆರಿಕಾದಲ್ಲಿ ಇದು ಚುನಾವಣಾ ವರ್ಷ ವಾಗಿದೆ. ಟಂಪ್ ಮರು ಆಯ್ಕೆಗೆ ಬಯಸಿದ್ದಾರೆ. ಆದರೆ, ಚುನಾವಣೆಯಲ್ಲಿ ಸಂಭವನೀಯ 'ಜೋ ಬಿಡನ್ ' ಗೆಲುವು, ಅಮೆರಿಕಾದಲ್ಲಿ ಸಾಕಷ್ಟು ಹೊಸ ಬದಲಾವಣೆ ತರಬಹುದು. ಅದಕ್ಕೆ ಮುನ್ನಾ ಸಿಕ್ಕಿರುವ ಈ ಅವಕಾಶವನ್ನು ರಶ್ಯಾ–ಯು.ಎಸ್ ಸಂಘರ್ಷ ಶಮನಕ್ಕಾಗಿ ಮತ್ತು ಜಾಗತಿಕವಾಗಿ ದೊಡ್ಡ ಪಾತ್ರವನ್ನು ವಹಿಸಲು ಪುಟಿನ್ ಈ ಯೋಜಿತ ಆಟವನ್ನು ಹೆಣೆದಿದ್ದಾರೆ ಎನ್ನಲಾಗುತ್ತಿದೆ.

ಪುತಿನ್ ರ ದೃಷ್ಟಿಅವರು ಸೆಪ್ಟೆಂಬರ್ ನಲ್ಲಿ ನಡೆಸಲು ಪ್ರಸ್ತಾವಿಸಿರುವ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಐದು ಶಾಶ್ವತಸದಸ್ಯ (ಪರ್ಮನೆಂಟ್ 5 ಅಥವಾ ಪಿ–5) ರಾಷ್ಟ್ರಗಳ ಶೃಂಗಸಭೆಯನ್ನು ನಡೆಸುವತ್ತ ನೆಟ್ಟಿದೆ. ಈ ಶೃಂಗಸಭೆಕೋವಿಡ್–19ರ ಪರಿಣಾಮಗಳನ್ನು ಒಳಗೊಂಡಂತೆ ಜಾಗತಿಕವಾಗಿ ಎದುರಾಗಿರುವ ಬೃಹತ್ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಚರ್ಚಿಸಲಿದೆ. ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಈ ಶೃಂಗ ಸಭೆ ಅತ್ಯಂತ ಮಹತ್ವದ್ದಾಗಿದೆ.ಚೀನಾ ಆಸಕ್ತಿ ತೋರಿದೆ. ಈ ಸಭೆಯನ್ನು ಬೀಜಿಂಗ್ ನಲ್ಲಿ ನಡೆಸಲು ಪ್ರಸ್ತಾಪ ಮುಂದಿಟ್ಟಿದೆ. ಅಧ್ಯಕ್ಷ ಟ್ರಂಪ್ ಸಹ ಈ ಶೃಂಗಸಭೆಯಲ್ಲಿ ಆಸಕ್ತಿ ವಹಿಸಿದ್ದಾರೆ.

ಒಟ್ಟಾರೆಯಾಗಿ, ಒಪೆಕ್ ಪ್ಲಸ್ ಒಪ್ಪಂದವು ಬರಿಯ ತೈಲ ಮಾರುಕಟ್ಟೆಗೆ ಸೀಮಿತವಾದ್ದಲ್ಲ. ಯುಎಸ್, ರಷ್ಯಾ ಮತ್ತು ಚೀನಾವನ್ನು ಒಳಗೊಂಡಂತೆ, ವಿಶ್ವದ ಶಕ್ತಿ ರಾಷ್ಟಗಳ ಸಹಕಾರದ ಅನುಕ್ರಮವನ್ನು ಆರಂಭಿಸಿದೆ. ಇದು ಕೊವಿದ್–19 ಮಹಾಮಾರಿಯನಂತರದ ಕಾಲಘಟ್ಟದಲ್ಲಿ ವಿಶ್ವ ರಾಜಕಾರಣದಲ್ಲಿ ಬಹು ದೊಡ್ಡ ಬದಲಾವಣೆಯಾಗಲಿದೆ ಎಂಬ ಸೂಚನೆಯನ್ನು ನೀಡುತ್ತದೆ. ಕೊರೊನೋತ್ತರ ಜಾಗತಿಕ ಆರ್ಥಿಕ/ ರಾಜಕಾರಣ, ಜಾಗತಿಕ ಕೊರೊನಾ ಮಹಾಮಾರಿ ಮತ್ತು ಜಾಗತಿಕ ತೈಲ ಬಿಕ್ಕಟ್ಟುಗಳು ಹೇಗೆ ಪರಸ್ಪರ ಹೆಣೆದುಕೊಂಡಿವೆ ಎಂದು ತೋರಿಸುತ್ತವೆ. ಜಾಗತಿಕ ತೈಲ ಉದ್ಯಮದಲ್ಲಿ ಹೊಸ ಸಹಕಾರಿ ಯುಗ ಆರಂಭವಾಗಹುದು ಎಂಬ ಸೂಚನೆಯನ್ನೂ ನೀಡುತ್ತವೆ.

JANASHAKTHI KANNADA VARA PATRIKE April 27- May 3, 2020 Price: Rs. 10/- Date of Publication: 24 April 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283







ರಾಜ್ಯಾದ್ಯಂತ ಮನೆಯ ಮುಂದೆ ಪ್ರತಿಭಟನೆ.......

ಪುಟ ೪ ರಿಂದ























ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 29 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಆಹಾರ ಧಾನ್ಯಗಳು ಜನರಿಗಾಗಿಯೇ ಹೊರತು, ಸ್ಯಾನಿಟೈಸರ್‌ಗಾಗಿಯಲ್ಲ (ಏ.24)
* ಪಾದರಾಯನಪುರದ ಪಾಠ: ಬರಗೂರು (ಏ.23)
* ಲೆನಿನ್ ಅವರನ್ನು ನೆನೆಯುತ್ತಾ (ಏ.22)
* ಭಾಷಣ ಸಾಕು-ರೇಶನ್ ಬೇಕು ಚಳುವಳಿ ವರದಿ (ಏ.21)
* ಲಾಕ್‌ಡೌನ್ ನಿಯಮ ಉಲ್ಲಂಘಿಸುತ್ತಿರುವ ಜಿಂದಾಲ್ (ಏ.20)
* ಟ್ರಂಪ್ ಹೇಳಿದ ಮೂರು ಸುಳ್ಳುಗಳು (ಏ.19)
* ಭಾಷಣ ಸಾಕು ನೆರವು ಬೇಕು - ಕಾರ್ಮಿಕರ ಆಗ್ರಹ (ಏ.19)
* ಲಾಕ್‌ಡೌನ್ ಅಫೆಕ್ಟ್: ಅತಂತ್ರದಲ್ಲಿ ಬಿಸಿಯೂಟ ಕಾರ್ಮಿಕರು (ಏ.18)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'** ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ 'ಬೆಲ್ ಐ ಕಾನ್ ಬಟನ್' ಒತ್ತಿ. ನಿರಂತರ ನೋಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**